# ಸೋಮವಾರ, ೨೦ ಜನವರಿ ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಹನ್ನೊಂದು ಘಂಟೆಗೆ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರು [ಗೌರವಾನ್ವಿತ ಡಾ॥ ರಾಜೇಂದ್ರ ಪ್ರಸಾದ್] ಅವರು ಅಧ್ಯಕ್ಷತೆ ವಹಿಸಿದ್ದರು.

ಪರಿಚಯ ಪತ್ರಗಳ ವಿತರಣೆ ಮತ್ತು ರಿಜಿಸ್ಟರ್‌ನಲ್ಲಿ ಸಹಿ ಮಾಡುವುದು. ಕೆಳಕಂಡ ಸದಸ್ಯರು ತಮ್ಮ ಪರಿಚಯ ಪತ್ರಗಳನ್ನು ಸಲ್ಲಿಸಿ ರಿಜಿಸ್ಟರಿನಲ್ಲಿ ಸಹಿ ಮಾಡಿದರು.

೧. ಡಾ। ಎಚ್.ಸಿ. ಮುಖರ್ಜಿ

೨. ಶ್ರೀ ಬಾಲಕೃಷ್ಣ ಶರ್ಮಾ

**ಅಧ್ಯಕ್ಷರಿಂದ ತಃಖ್ತೆ :**

ಸಂವಿಧಾನ ರಚನಾ ಸಭೆಯ ಪ್ರಾತಿನಿಧಿಕ ಲಕ್ಷಣದ ಬಗ್ಗೆ ಸಂಸತ್ತಿನಲ್ಲಿ ಮಾಡಲಾದ ಆರೋಪಗಳನ್ನು ಕುರಿತಂತೆ.

**ಸನ್ಮಾನ್ಯ ಅಧ್ಯಕ್ಷರು :**

ನಾವು ಪ್ರಾರಂಭಿಸುವ ಮುನ್ನ, ಕೆಲವು ವಿಷಯಗಳನ್ನು ಕುರಿತು ನಾನು ಎರಡು ಹೇಳಿಕೆಗಳನ್ನು ನೀಡಲು ಬಯಸುತ್ತೇನೆ.

ಕಳೆದ ಡಿಸೆಂಬರ್‌ನಲ್ಲಿ ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್‌ನಲ್ಲಿ, ಭಾರತವನ್ನು ಕುರಿತು ನಡೆದ ಚರ್ಚೆಗಳಲ್ಲಿ, ಈ ವಿಧಾಯಕ ಮಂಡಳಿಯ ಸಭೆಯ ಕಡೆಯ ಅಧಿವೇಶನದ ಪ್ರಾತಿನಿಧಿಕ ಲಕ್ಷಣದ ಬಗ್ಗೆ ಕೆಲವು ಹಗುರವಾದ ಹೇಳಿಕೆಗಳು ನೀಡಲ್ಪಟ್ಟವು. ಈ ಧಾಟಿಯಲ್ಲಿ ಮಾತನಾಡಿದ ಗಣ್ಯರಲ್ಲಿ, ಮಿ। ಚರ್ಚಿಲ್ ಮತ್ತು ವಿಸ್ಕೌಂಟ್ ಸೈಮನ್ ಸೇರಿದ್ದರು. ಆಗ ಸಮಾವೇಶಗೊಳ್ಳುತ್ತಿದ್ದ ವಿಧಾಯಕ ಸಭೆ "ಭಾರತದಲ್ಲಿರುವ ಕೇವಲ ಒಂದು ಪ್ರಮುಖ ಸಮುದಾಯವನ್ನು ಪ್ರತಿನಿಧಿಸುತ್ತಿತ್ತೆಂದು" ಮಿ। ಚರ್ಚಿಲ್ ಅಭಿಪ್ರಾಯಪಟ್ಟರು. ವಿಸ್ಕೌಂಟ್ ಸೈಮನ್ ಇನ್ನೂ ಹೆಚ್ಚು ನಿರ್ದಿಷ್ಟವಾಗಿ "ಹಿಂದೂಗಳ ಒಂದು ಸಮೂಹ" ಎಂದು ಉಲ್ಲೇಖಿಸಿದರು. ಅವರು ಮುಂದುವರೆದು "ಮೇಲ್ವರ್ಗದ ಹಿಂದೂಗಳು ದೆಹಲಿಯಲ್ಲಿ ಸಮಾವೇಶಗೊಳ್ಳುವ ವಿಧಾಯಕ ಮಂಡಳಿಯ ಸಭೆಯನ್ನು, ಸರ್ಕಾರ ಸಂವಿಧಾನ ರಚನಾ ಸಭೆಯೆಂದು ಎಂದು ಕರೆಯಲಾದೀತೆ?" ಎಂದು ಪ್ರಶ್ನಿಸಿದರು.

ಈ ಈರ್ವರು ಮಹನೀಯರು ಅತ್ಯುಚ್ಚ ಜವಾಬ್ದಾರಿಯುತ ಪದವಿಗಳನ್ನು ಅಲಂಕರಿಸಿದ್ದಾರೆ. ಸುದೀರ್ಘ ಕಾಲ ಭಾರತದ ವ್ಯವಹಾರಗಳೊಡನೆ ನಿಕಟ ಸಂಪರ್ಕ ಹೊಂದಿದ್ದಾರೆ. ಪ್ರಸ್ತುತ ರಾಜಕೀಯ ವಾದ ವಿವಾದಗಳ ಬಗ್ಗೆ ಅವರ ಅನಿಸಿಕೆಗಳು ಏನೇ ಇರಲಿ, ವಾಸ್ತವಾಂಶಗಳಿಗೆ ಸಂಪೂರ್ಣ ವ್ಯತಿರಿಕ್ತವಾದ, ಕಿಡಿಗೇಡಿತನದ ನಿರ್ಧಾರದತ್ತ ಒಯ್ಯುವ ಹೇಳಿಕೆಗಳನ್ನು ನೀಡಲು ಇಚ್ಛಿಸಲಾರರೆಂಬುದು ನನ್ನ ದೃಢ ನಂಬಿಕೆ. ಈ ಕಾರಣಕ್ಕಾಗಿ, ಈ ಸಂದರ್ಭದಲ್ಲಿ ಪ್ರಾಸ್ತಾವಿಕವಾಗಿ ವಾಸ್ತವಿಕ ಸಂಗತಿಗಳನ್ನು ತಿಳಿಸುವುದು ಅಗತ್ಯ ಎಂದು ಭಾವಿಸುತ್ತೇನೆ. ಪ್ರಾರಂಭಿಕ ಅಧಿವೇಶನದಲ್ಲಿ ಭಾಗವಹಿಸಬೇಕಿದ್ದ ಒಟ್ಟು ೯೨೬ ಸದಸ್ಯರಲ್ಲಿ ೨೧೦ ಸದಸ್ಯರು ಹಾಜರಿದ್ದರು. ಈ ೨೧೦ ಸದಸ್ಯರಲ್ಲಿ, ಒಟ್ಟು ೧೬೦ ಹಿಂದೂ ಸದಸ್ಯರ ಪೈಕಿ ೧೫೦ ಹಿಂದೂಗಳು ಹಾಜರಿದ್ದರು. ಒಟ್ಟು

೩೩ ಅನುಸೂಚಿತ ಜಾತಿ ಪ್ರತಿನಿಧಿಗಳಲ್ಲಿ ೩೦, ಎಲ್ಲ ಐವರು ಸಿಕ್ಖರು, ೭ ಮಂದಿ ಭಾರತೀಯ ಕ್ರೈಸ್ತ ಸದಸ್ಯರಲ್ಲಿ ೫, ಹಿಂದುಳಿದ ಬುಡಕಟ್ಟು ಜನಾಂಗದ ಎಲ್ಲ ಐವರು ಪ್ರತಿನಿಧಿಗಳು, ಎಲ್ಲ ಮೂವರು ಆಂಗ್ಲೋ ಇಂಡಿಯನ್‌ಗಳು, ಎಲ್ಲ ಮೂವರು ಪಾರಸಿಕರು ಒಟ್ಟು ೮೦ ಮಹಮ್ಮದೀಯರಲ್ಲಿ ೪ ಮಹಮ್ಮದೀಯರು ಸೇರಿದ್ದರು. ಗಮನಾರ್ಹವಾದ ಅನುಪಸ್ಥಿತಿ ಎಂದರೆ ಮುಸ್ಲಿಂ ಲೀಗ್ ಪಕ್ಷದ ಪ್ರತಿನಿಧಿಗಳು; ನಾವೆಲ್ಲರೂ ಅತಿಯಾಗಿ ವಿಷಾದಿಸುವ ಗೈರುಹಾಜರಿ. ಮುಸ್ಲಿಂ ಲೀಗ್ ಪ್ರತಿನಿಧಿಗಳ ಅನುಪಸ್ಥಿತಿಯನ್ನು ಹೊರತುಪಡಿಸಿ, ಆಯಾ ಸಮುದಾಯವನ್ನು ಪ್ರತಿನಿಧಿಸುವ ವ್ಯಕ್ತಿಗಳು ಯಾವ ಪಕ್ಷಕ್ಕೇ ಸೇರಿರಲಿ, ಪ್ರತಿಯೊಂದು ಸಮುದಾಯವನ್ನು ಸಭೆ ಪ್ರತಿನಿಧಿಸಿತ್ತೆಂಬುದು, ನಾನು ಉದ್ಧರಿಸಿದ ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ಆದುದರಿಂದ ಈ ಸಭೆ "ಭಾರತದ ಕೇವಲ ಒಂದೇ ಒಂದು ಪ್ರಮುಖ ಸಮುದಾಯವನ್ನು ಪ್ರತಿನಿಧಿಸುತ್ತದೆ" ಎಂದಾಗಲಿ "ಹಿಂದೂಗಳ ಸಮೂಹ" ವೆಂದಾಗಲಿ "ಮೇಲ್ವರ್ಗದ ಹಿಂದೂಗಳ ಸಮಾವೇಶ" ಎಂದಾಗಲಿ ಬಣ್ಣಿಸುವುದು, ಸಂಪೂರ್ಣ ವಾಸ್ತವಾಂಶಗಳ ವಿರೂಪ. (ಕರಘೋಷ).

**ಅಧ್ಯಕ್ಷರಿಂದ ಹೇಳಿಕೆ :** ಭಾರತದಲ್ಲಿ ಪ್ರಕಟಗೊಂಡ, ೧೯೪೬ರ ಮೇ ೧೬ರಂದು ಸಂಪುಟ ನಿಯೋಗದ ಹೇಳಿಕೆಗೂ, ಸದಸ್ಯರಿಗೆ ವಿತರಿಸಲಾದ ಮುದ್ರಿತ ಕರಪತ್ರಗಳ ನಡುವಣ ಅಂತರವನ್ನು ಕುರಿತು.

**ಸನ್ಮಾನ್ಯ ಅಧ್ಯಕ್ಷರು** : ಸಂವಿಧಾನ ರಚನಾಸಭೆಯಲ್ಲಿ ಪಂಡಿತ ಜವಾಹರಲಾಲ್ ನೆಹರು ಅವರು ಮಂಡಿಸಿದ ನಿರ್ಣಯವೊಂದರ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗ ೧೯೪೬ರ ಮೇ ೧೬ರಂದು ಕ್ಯಾಬಿನೆಟ್ ಮಿಷನ್ ಹೇಳಿಕೆಗಳು ಭಾರತದಲ್ಲಿ ಪ್ರಕಟಗೊಂಡಂತಹ ಆವೃತ್ತಿಗೂ, ವಿಧಾಯಕ ಸಭೆಯ ಕಛೇರಿಯಲ್ಲಿ ವಿತರಿಸಿದ ಮುದ್ರಿತ ಕರಪತ್ರಕ್ಕೂ ನಡುವಣ ಅಂತರವನ್ನು ಶ್ರೀ ಜೈಪಾಲ್ ಸಿಂಗ್ ಅವರು ಸದಸ್ಯರ ಗಮನಕ್ಕೆ ತಂದುದು ನೆನಪಿನಲ್ಲಿರಬಹುದು. ಉಲ್ಲೇಖಿತ ವ್ಯತ್ಯಯ ಇದ್ದುದು ಹೇಳಿಕೆಯ ೨೦ನೇ ಕಂಡಿಕೆಯಲ್ಲಿ. ಭಾರತದಲ್ಲಿ ಮೂಲತಃ ಪ್ರಕಟಗೊಂಡ ಹೇಳಿಕೆ, ಬಾಧಿತ ವರ್ಗಗಳ ಸಂಪೂರ್ಣ ಪ್ರಾತಿನಿಧ್ಯಕ್ಕೆ ಅನ್ವಯಿಸಿದ್ದು, ನಮ್ಮ ಪುನರ್ಮುದ್ರಣ ಕೇವಲ ಉಚಿತ ಪ್ರಾತಿನಿಧ್ಯಕ್ಕೆ ಅನ್ವಯಿಸುತ್ತದೆಂಬುದು ಅವರ ಆಕ್ಷೇಪ. ಅದರ ಬಗ್ಗೆ ತನಿಖೆಗೆ ಕ್ರಮ ಕೈಗೊಂಡಿದ್ದೇನೆ

ಭಾರತ ಸರ್ಕಾರದ ಪ್ರಧಾನ ವಾರ್ತಾಧಿಕಾರಿ, ಮೂಲತಃ ಭಾರತದಲ್ಲಿ ಹೇಳಿಕೆಯನ್ನು ಪ್ರಕಟಿಸಿದವರು, ಅವರೊಡನೆ ಸಮಾಲೋಚಿಸಿದಾಗ, ಕ್ಯಾಬಿನೆಟ್ ನಿಯೋಗದ ವಾರ್ತಾಧಿಕಾರಿ ನೀಡಿದ ಪ್ರತಿಯನ್ನು ಯಥಾರೂಪ ಮುದ್ರಿಸಿದುದಾಗಿ ತಿಳಿಸಿದ್ದಾರೆ. ನಮ್ಮ ಸ್ವಂತ ಕರಪತ್ರ, ಸಂಸತ್ತಿಗೆ ಸಲ್ಲಿಸಿದ ಶ್ವೇತಪತ್ರದ ತದ್ವತ್ ಪುನರ್ಮುದ್ರಣ, ಪ್ರಾಯಶಃ ಭಾರತದಲ್ಲಿ ಪ್ರಕಟಗೊಂಡ ಹೇಳಿಕೆ ಸಂಸತ್ತಿಗೆ ಸಲ್ಲಿಸುವ ಮುನ್ನ ಕ್ಯಾಬಿನೆಟ್ ನಿಯೋಗ ಕೆಲವು ಸಣ್ಣಪುಟ್ಟ ಮಾರ್ಪಾಟುಗಳನ್ನು ಮಾಡಿರಬೇಕೆನಿಸುತ್ತದೆ.

ಶ್ರೀ ಜೈಪಾಲ್ ಸಿಂಗ್ ಅವರು ಎತ್ತಿ ತೋರಿರುವ ವ್ಯತ್ಯಯವೊಂದೆ ಅಲ್ಲ. ಇನ್ನೂ ಕೆಲವಿವೆ. ಎಲ್ಲ ಪ್ರಕರಣಗಳಲ್ಲೂ ವಸ್ತುತಃ ಈ ವ್ಯತ್ಯಾಸಗಳು ಕೇವಲ ಮೌಖಿಕ ಎಂಬುದು ನನಗೆ ಸಮಾಧಾನ ತಂದಿದೆ. ೨೦ನೇ ಖಂಡಿಕೆಯಲ್ಲಿರುವ ವ್ಯತ್ಯಾಸಗಳು ಶುದ್ಧಾಂಗ ಮೌಖಿಕವೇ ಅಲ್ಲವೆ ಎಂಬುದು, ಅಭಿಪ್ರಾಯ ಭೇದದ ವಿಷಯ. ಯಾವುದೇ ಮುಖ್ಯವಾದ ವಸ್ತುಭೇದವಿದ್ದಂತೆ, ನನಗನಿಸುವುದಿಲ್ಲ.

## ನಿರ್ಣಯ : ಸಂಚಾಲಕ ಸಮಿತಿಯ ಬಗ್ಗೆ

**ಸನ್ಮಾನ್ಯ ಅಧ್ಯಕ್ಷರು :** ಕಾರ್ಯಸೂಚಿಯು ಮುಂದಿನ ಬಾಬು, ಶ್ರೀ ಸತ್ಯನಾರಾಯಣ್ ಸಿನ್ಹ ಅವರಿಂದ ಪ್ರಸಾವಮಂಡನೆ.

**ಶ್ರೀ ಸತ್ಯನಾರಾಯಣ್ ಸಿನ್ಹ** (ಬಿಹಾರ್ : ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ಮುಂದೆ ತಿಳಿಸುವ ಗೊತ್ತುವಳಿಯನ್ನು ನನ್ನ ಹೆಸರಿನಲ್ಲಿ ಮಂಡಿಸಲು ಅನುಮತಿ ಕೋರುತ್ತೇನೆ : "ಸಭೆಯು ಮುಂದೆ ಸಂವಿಧಾನ

೩೩ ಅನುಸೂಚಿತ ಜಾತಿ ಪ್ರತಿನಿಧಿಗಳಲ್ಲಿ ೩೦, ಎಲ್ಲ ಐವರು ಸಿಕ್ಖರು, ೭ ಮಂದಿ ಭಾರತೀಯ ಕ್ರೈಸ್ತ ಸದಸ್ಯರಲ್ಲಿ ೫, ಹಿಂದುಳಿದ ಬುಡಕಟ್ಟು ಜನಾಂಗದ ಎಲ್ಲ ಐವರು ಪ್ರತಿನಿಧಿಗಳು, ಎಲ್ಲ ಮೂವರು ಆಂಗ್ಲೋ ಇಂಡಿಯನ್‌ಗಳು, ಎಲ್ಲ ಮೂವರು ಪಾರಸಿಕರು ಒಟ್ಟು ೮೦ ಮಹಮ್ಮದೀಯರಲ್ಲಿ ೪ ಮಹಮ್ಮದೀಯರು ಸೇರಿದ್ದರು. ಗಮನಾರ್ಹವಾದ ಅನುಪಸ್ಥಿತಿ ಎಂದರೆ ಮುಸ್ಲಿಂ ಲೀಗ್ ಪಕ್ಷದ ಪ್ರತಿನಿಧಿಗಳು; ನಾವೆಲ್ಲರೂ ಅತಿಯಾಗಿ ವಿಷಾದಿಸುವ ಗೈರುಹಾಜರಿ. ಮುಸ್ಲಿಂ ಲೀಗ್ ಪ್ರತಿನಿಧಿಗಳ ಅನುಪಸ್ಥಿತಿಯನ್ನು ಹೊರತುಪಡಿಸಿ, ಆಯಾ ಸಮುದಾಯವನ್ನು ಪ್ರತಿನಿಧಿಸುವ ವ್ಯಕ್ತಿಗಳು ಯಾವ ಪಕ್ಷಕ್ಕೇ ಸೇರಿರಲಿ, ಪ್ರತಿಯೊಂದು ಸಮುದಾಯವನ್ನು ಸಭೆ ಪ್ರತಿನಿಧಿಸಿತ್ತೆಂಬುದು, ನಾನು ಉದ್ಧರಿಸಿದ ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ಆದುದರಿಂದ ಈ ಸಭೆ "ಭಾರತದ ಕೇವಲ ಒಂದೇ ಒಂದು ಪ್ರಮುಖ ಸಮುದಾಯವನ್ನು ಪ್ರತಿನಿಧಿಸುತ್ತದೆ" ಎಂದಾಗಲಿ "ಹಿಂದೂಗಳ ಸಮೂಹ" ವೆಂದಾಗಲಿ "ಮೇಲ್ವರ್ಗದ ಹಿಂದೂಗಳ ಸಮಾವೇಶ" ಎಂದಾಗಲಿ ಬಣ್ಣಿಸುವುದು, ಸಂಪೂರ್ಣ ವಾಸ್ತವಾಂಶಗಳ ವಿರೂಪ. (ಕರಘೋಷ).

**ಅಧ್ಯಕ್ಷರಿಂದ ಹೇಳಿಕೆ :** ಭಾರತದಲ್ಲಿ ಪ್ರಕಟಗೊಂಡ, ೧೯೪೬ರ ಮೇ ೧೬ರಂದು ಸಂಪುಟ ನಿಯೋಗದ ಹೇಳಿಕೆಗೂ, ಸದಸ್ಯರಿಗೆ ವಿತರಿಸಲಾದ ಮುದ್ರಿತ ಕರಪತ್ರಗಳ ನಡುವಣ ಅಂತರವನ್ನು ಕುರಿತು.

**ಸನ್ಮಾನ್ಯ ಅಧ್ಯಕ್ಷರು :** ಸಂವಿಧಾನ ರಚನಾಸಭೆಯಲ್ಲಿ ಪಂಡಿತ ಜವಾಹರಲಾಲ್ ನೆಹರು ಅವರು ಮಂಡಿಸಿದ ನಿರ್ಣಯವೊಂದರ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗ ೧೯೪೬ರ ಮೇ ೧೬ರಂದು ಕ್ಯಾಬಿನೆಟ್ ಮಿಷನ್ ಹೇಳಿಕೆಗಳು ಭಾರತದಲ್ಲಿ ಪ್ರಕಟಗೊಂಡಂತಹ ಆವೃತ್ತಿಗೂ, ವಿಧಾಯಕ ಸಭೆಯ ಕಛೇರಿಯಲ್ಲಿ ವಿತರಿಸಿದ ಮುದ್ರಿತ ಕರಪತ್ರಕ್ಕೂ ನಡುವಣ ಅಂತರವನ್ನು ಶ್ರೀ ಜೈಪಾಲ್ ಸಿಂಗ್ ಅವರು ಸದಸ್ಯರ ಗಮನಕ್ಕೆ ತಂದುದು ನೆನಪಿನಲ್ಲಿರಬಹುದು. ಉಲ್ಲೇಖಿತ ವ್ಯತ್ಯಯ ಇದ್ದುದು ಹೇಳಿಕೆಯ ೨೦ನೇ ಕಂಡಿಕೆಯಲ್ಲಿ. ಭಾರತದಲ್ಲಿ ಮೂಲತಃ ಪ್ರಕಟಗೊಂಡ ಹೇಳಿಕೆ, ಬಾಧಿತ ವರ್ಗಗಳ ಸಂಪೂರ್ಣ ಪ್ರಾತಿನಿಧ್ಯಕ್ಕೆ ಅನ್ವಯಿಸಿದ್ದು, ನಮ್ಮ ಪುನರ್ಮುದ್ರಣ ಕೇವಲ ಉಚಿತ ಪ್ರಾತಿನಿಧ್ಯಕ್ಕೆ ಅನ್ವಯಿಸುತ್ತದೆಂಬುದು ಅವರ ಆಕ್ಷೇಪ. ಅದರ ಬಗ್ಗೆ ತನಿಖೆಗೆ ಕ್ರಮ ಕೈಗೊಂಡಿದ್ದೇನೆ

ಭಾರತ ಸರ್ಕಾರದ ಪ್ರಧಾನ ವಾರ್ತಾಧಿಕಾರಿ, ಮೂಲತಃ ಭಾರತದಲ್ಲಿ ಹೇಳಿಕೆಯನ್ನು ಪ್ರಕಟಿಸಿದವರು, ಅವರೊಡನೆ ಸಮಾಲೋಚಿಸಿದಾಗ, ಕ್ಯಾಬಿನೆಟ್ ನಿಯೋಗದ ವಾರ್ತಾಧಿಕಾರಿ ನೀಡಿದ ಪ್ರತಿಯನ್ನು ಯಥಾರೂಪ ಮುದ್ರಿಸಿದುದಾಗಿ ತಿಳಿಸಿದ್ದಾರೆ. ನಮ್ಮ ಸ್ವಂತ ಕರಪತ್ರ, ಸಂಸತ್ತಿಗೆ ಸಲ್ಲಿಸಿದ ಶ್ವೇತಪತ್ರದ ತದ್ವತ್ ಪುನರ್ಮುದ್ರಣ, ಪ್ರಾಯಶಃ ಭಾರತದಲ್ಲಿ ಪ್ರಕಟಗೊಂಡ ಹೇಳಿಕೆ ಸಂಸತ್ತಿಗೆ ಸಲ್ಲಿಸುವ ಮುನ್ನ ಕ್ಯಾಬಿನೆಟ್ ನಿಯೋಗ ಕೆಲವು ಸಣ್ಣಪುಟ್ಟ ಮಾರ್ಪಾಟುಗಳನ್ನು ಮಾಡಿರಬೇಕೆನಿಸುತ್ತದೆ.

ಶ್ರೀ ಜೈಪಾಲ್ ಸಿಂಗ್ ಅವರು ಎತ್ತಿ ತೋರಿರುವ ವ್ಯತ್ಯಯವೊಂದೆ ಅಲ್ಲ. ಇನ್ನೂ ಕೆಲವಿವೆ. ಎಲ್ಲ ಪ್ರಕರಣಗಳಲ್ಲೂ ವಸ್ತುತಃ ಈ ವ್ಯತ್ಯಾಸಗಳು ಕೇವಲ ಮೌಖಿಕ ಎಂಬುದು ನನಗೆ ಸಮಾಧಾನ ತಂದಿದೆ. ೨೦ನೇ ಖಂಡಿಕೆಯಲ್ಲಿರುವ ವ್ಯತ್ಯಾಸಗಳು ಶುದ್ಧಾಂಗ ಮೌಖಿಕವೇ ಅಲ್ಲವೆ ಎಂಬುದು, ಅಭಿಪ್ರಾಯ ಭೇದದ ವಿಷಯ. ಯಾವುದೇ ಮುಖ್ಯವಾದ ವಸ್ತುಭೇದವಿದ್ದಂತೆ, ನನಗನಿಸುವುದಿಲ್ಲ.

## ನಿರ್ಣಯ : ಸಂಚಾಲಕ ಸಮಿತಿಯ ಬಗ್ಗೆ

**ಸನ್ಮಾನ್ಯ ಅಧ್ಯಕ್ಷರು :** ಕಾರ್ಯಸೂಚಿಯ ಮುಂದಿನ ಬಾಬು, ಶ್ರೀ ಸತ್ಯನಾರಾಯಣ್ ಸಿನ್ಹ ಅವರಿಂದ ಪ್ರಸಾವಮಂಡನೆ.

**ಶ್ರೀ ಸತ್ಯನಾರಾಯಣ್ ಸಿನ್ಹ** (ಬಿಹಾರ್ : ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ಮುಂದೆ ತಿಳಿಸುವ ಗೊತ್ತುವಳಿಯನ್ನು ನನ್ನ ಹೆಸರಿನಲ್ಲಿ ಮಂಡಿಸಲು ಅನುಮತಿ ಕೋರುತ್ತೇನೆ : "ಸಭೆಯು ಮುಂದೆ ಸಂವಿಧಾನ

ರಚನಾಸಭೆಯ ೪೦(೧)ನೇ ನಿಯಮದ ಅಡಿಯಲ್ಲಿ ಅಗತ್ಯಪಡಿಸುವಂತೆ ೧೧ ಸದಸ್ಯರನ್ನು (ಅಧ್ಯಕ್ಷರಲ್ಲದೆ) ಸಂಚಾಲಕ ಸಮಿತಿಯ ಸದಸ್ಯರನ್ನಾಗಿ ಚುನಾಯಿಸಬೇಕೆಂದು ನಿರ್ಣಯ ಕೈಗೊಳ್ಳಲಾಗಿದೆ".

ಮಾನ್ಯರೆ,

ಕಳೆದ ಅಧಿವೇಶನದಲ್ಲಿ ಈ ಸಮಿತಿಯ ಬಗ್ಗೆ ನಾವು ಚಾಲನೆ ನೀಡಿದ ನಿಯಮಗಳನ್ನು ಸದನದಲ್ಲಿ ವಾಚಿಸಲು ಅನುಮತಿ ಕೋರುತ್ತೇನೆ.

"ಈ ಸಭೆಯು ತನಗೆ ಯುಕ್ತವೆನಿಸಿದ ರೀತಿಯಲ್ಲಿ ಕಾಲಕಾಲಕ್ಕೆ ಹನ್ನೊಂದು ಸದಸ್ಯರ ಜೊತೆಗೆ ಇನ್ನೂ ಎಂಟು ಸದಸ್ಯರನ್ನು ಚುನಾಯಿಸಬಹುದು. ಅವರಲ್ಲಿ ನಾಲ್ವರನ್ನು ಭಾರತೀಯ ರಾಜ್ಯಗಳ ಪ್ರತಿನಿಧಿಗಳ ಪೈಕಿ ಚುನಾಯಿಸಲು ಕಾಯ್ದಿರಿಸಬೇಕು.

ಅಧ್ಯಕ್ಷರು ಸಂಚಾಲಕ ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ ಹಾಗೂ ಅದರ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಸಮಿತಿಯ ಅಧ್ಯಕ್ಷತೆ ವಹಿಸಲು ಸದಸ್ಯರ ಪೈಕಿ ಒಬ್ಬರನ್ನು ಉಪಾಧ್ಯಕ್ಷರನ್ನಾಗಿ ಸಮಿತಿಯು ಚುನಾಯಿಸಬಹುದು. ಸಭೆಯ ಕಾರ್ಯದರ್ಶಿ, ಸಂಚಾಲಕ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿ ಇರುತ್ತಾರೆ.

ಸಮಿತಿಯ ಪದವಿಗಳು ಸಾಂದರ್ಭಿಕವಾಗಿ ತೆರವಾದಾಗ, ಕೂಡಲೆ ಅಧ್ಯಕ್ಷರು ತೀರ್ಮಾನಿಸಿದ ರೀತಿಯಲ್ಲಿ ಚುನಾವಣೆಗಳ ಮೂಲಕ ಖಾಲಿ ಸ್ಥಾನಗಳನ್ನು ಸಭೆಯು ತುಂಬಬೇಕು.

೪.೧(೧) ಸಮಿತಿಯು :- ಎ) ದಿನದ ಕಾರ್ಯಕಲಾಪಗಳನ್ನು ಕ್ರಮಬದ್ಧಗೊಳಿಸಬೇಕು.

ಬಿ) ಸಮಾನ ಗೊತ್ತುವಳಿಗಳನ್ನೂ ತಿದ್ದುಪಡಿಗಳನ್ನೂ ಒಂದೆಡೆ ಗುಂಪುಗೂಡಿಸಿ, ಸಾಧ್ಯವಾದರೆ ಸಂಯುಕ್ತ ಗೊತ್ತುವಳಿಗಳು ಮತ್ತು ತಿದ್ದುಪಡಿಗಳಿಗೆ ಸಂಬಂಧಿಸಿದ ಪಕ್ಷಗಳ ಸಮ್ಮತಿಯನ್ನು ಪಡೆಯಬೇಕು.

ಸಿ) ಸಭೆ ಮತ್ತು ಪಕ್ಷಗಳ ನಡುವೆ, ಸಮಿತಿಯು ಸಾಮಾನ್ಯ ಸಮನ್ವಯ ಘಟಕವಾಗಿಯೂ, ಮತ್ತು ಪಕ್ಷಗಳ ನಡುವೆ ಪರಸ್ಪರ ಸಂಪರ್ಕ ಸೇತುವೆಯಾಗಿ, ಸಮಿತಿಯ ನಡುವೆ ಸಂಪರ್ಕ ಸಾಧನವಾಗಿ ವರ್ತಿಸಬೇಕು.

ಡಿ) ಸಭೆಯ ಅಧ್ಯಕ್ಷರು ಉಲ್ಲೇಖಿಸಿದ ನಿಯಮದ ಅಡಿಯಲ್ಲಿ ಇತರ ಯಾವುದೇ ವಿಷಯವನ್ನು ನಿರ್ವಹಿಸಬೇಕು.

ಇ) ಸಂಚಾಲಕ ಸಮಿತಿಯ ವ್ಯವಹಾರಗಳು ಸುಗಮಗೊಳ್ಳಲು ಅಧ್ಯಕ್ಷರು ಕಾಲಕಾಲಿಕ ಆದೇಶ ನೀಡಬಹುದು. ಸಭೆಯು ನನ್ನ ಗೊತ್ತುವಳಿಯನ್ನು ಅನುಮೋದಿಸಿದಲ್ಲಿ, ಅಧ್ಯಕ್ಷರು. ನಾಮಪತ್ರ ಸ್ವೀಕಾರದ ದಿನಾಂಕ ಮತ್ತು ವೇಳೆ ಹಾಗೂ ಅಗತ್ಯಬಿದ್ದರೆ ಚುನಾವಣೆಯನ್ನು ಘೋಷಿಸುವರು :

**ಶ್ರೀ ಮೋಹನ್‌ಲಾಲ್ ಸಕ್ಸೇನಾ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ನಾನು ಅನುಮೋದಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ಯಾರಾದರೂ ಈ ಪ್ರಸ್ತಾವವನ್ನು ಬಗ್ಗೆ ಮಾತನಾಡಲು ಇಚ್ಛಿಸುತ್ತಾರೆಯೇ?... ಯಾರೂ ಮಾತನಾಡಲು ಬಯಸುವುದಿಲ್ಲವಾದುದರಿಂದ ನಾನು ಈ ಪ್ರಸ್ತಾವ ಸದನದ ಮತಕ್ಕೆ ಹಾಕುತ್ತೇನೆ. ಗೊತ್ತುವಳಿಯು ಹೀಗಿದೆ :

"ಸಭೆಯು ಮುಂದೆ, ಸಂವಿಧಾನ ರಚನಾಸಭೆಯ ೪೦(೧)ನೇ ನಿಯಮದ ಅಡಿಯಲ್ಲಿ ಅಗತ್ಯ ಪಡಿಸುವಂತೆ ೧೧ ಸದಸ್ಯರನ್ನು (ಅಧ್ಯಕ್ಷರಲ್ಲದೆ) ಸಂಚಾಲಕ ಸಮಿತಿಯ ಸದಸ್ಯರನ್ನಾಗಿ ಚುನಾಯಿಸಬೇಕೆಂದು ನಿರ್ಣಯ ಕೈಗೊಳ್ಳಲಾಗಿದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

**ಸನ್ಮಾನ್ಯ ಅಧ್ಯಕ್ಷರು** : ಗೌರವಾನ್ವಿತ ಸದಸ್ಯರಿಗೆ ನಾನು ತಿಳಿಸುವುದೇನೆಂದರೆ, ಸಂಚಾಲಕ ಸಮಿತಿಗೆ, ನಾಮಪತ್ರಗಳನ್ನು ಈ ದಿನ ಸಂಜೆ ೫ ಘಂಟೆಯವರೆಗೆ ಸ್ವೀಕರಿಸಲಾಗುವುದು. ಅಗತ್ಯ ಬಿದ್ದರೆ ಚುನಾವಣೆಗಳನ್ನು ಅಧೀನ ಕಾರ್ಯದರ್ಶಿಗಳ ಕೋಣೆಯಲ್ಲಿ ನಡೆಸಲಾಗುವುದು. (ರೂಂ. ನಂ.೨೪, ನೆಲ ಅಂತಸ್ತು,

ಮಂತ್ರಾಲೋಚನ ಭವನ) ದಿನಾಂಕ: ೨೧ ಜನವರಿ ತಿಂಗಳು. ವೇಳೆ ಅಪರಾಹ್ನ ೩ ರಿಂದ ೫ ಘಂಟೆ ವರೆಗೆ.

**ನಿರ್ಣಯ : ಧ್ಯೇಯೋದ್ದೇಶಗಳ ಬಗ್ಗೆ**

**ಸನ್ಮಾನ್ಯ ಅಧ್ಯಕ್ಷರು :** ಗೌರವಾನ್ವಿತ ಪಂಡಿತ ಜವಾಹರ ಲಾಲ್ ನೆಹರು ಅವರು ಕಳೆದ ಅಧಿವೇಶನದಲ್ಲಿ ಮಂಡಿಸಿದ ನಿರ್ಣಯದ ಬಗ್ಗೆ ನಾವೀಗ ಚರ್ಚೆ ನಡೆಸೋಣ.

**ಸರ್. ಎಸ್.ರಾಧಾಕೃಷ್ಣನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ)

ಸನ್ಮಾನ್ಯ ಅಧ್ಯಕ್ಷರೆ,

ಮಾನ್ಯರೆ,

ಈ ನಿರ್ಣಯದ ಅಂಗೀಕಾರಕ್ಕಾಗಿ ಸಭೆಯ ಗಮನಕ್ಕೆ ತರಲು ನನಗೆ ಅತೀವ ಸಂತೋಷವಾಗುತ್ತದೆ. ಸಭೆಯಲ್ಲಿ ಮಂಡಿಸಿದ ತಿದ್ದುಪಡಿಗಳ ಪಟ್ಟಿಯಲ್ಲಿ ಮೂರು ವಿಭಿನ್ನ ಪ್ರಶ್ನೆಗಳನ್ನು ಪ್ರಸ್ತಾಪಿಸಿರುವುದು ನನ್ನ ಗಮನಕ್ಕೆ ಬಂದಿದೆ; ಇಂತಹ ಲಕ್ಷಣವುಳ್ಳ ಘೋಷಣೆ ಅವಶ್ಯಕವೆ? ಇಂತಹ ಘೋಷಣೆಯನ್ನು ಪರಿಶೀಲಿಸಲು ಇದು ಸಕಾಲವೇ? ಈ ನಿರ್ಣಯ ಒಳಗೊಂಡಿರುವ ಉದ್ದೇಶಗಳು, ಸಾಮಾನ್ಯ ಅನುಮೋದನೆಗೆ ಸಂಬಂಧಿಸಿದ ವಿಷಯಗಳೇ ಅಥವಾ ಅವುಗಳಿಗೆ ಪರಿಷ್ಕರಣ ಯಾ ತಿದ್ದುಪಡಿ ಅಗತ್ಯವೇ? ಅಂತಹ ಘೋಷಣೆ ಅಗತ್ಯವೆಂದು ನಂಬುತ್ತೇನೆ. ಕೆಲವರು ಸಂದೇಹಗ್ರಸ್ತರು, ಕೆಲವರು ಅಸ್ಥಿರಮತಿಗಳು, ಕೆಲವರು ವಿರೋಧಿಗಳು; ಅಂಥವರು, ಈ ಸಂವಿಧಾನ ರಚನಾ ಸಭೆಯ ಕಾರ್ಯಕಲಾಪಗಳನ್ನು, ಒಂದಿಷ್ಟು ತಪ್ಪು ಗ್ರಹಿಕೆಯಿಂದ ಪರಿಭಾವಿಸುವವರು. ಸಂಪುಟ ಯೋಜನೆಯ ಹಂದರದೊಳಗೆ ಸಹಜ ಏಕತೆಯನ್ನು ಅಥವಾ ಸಹಜ ಸ್ವಾತಂತ್ರ್ಯವನ್ನು ಅಥವಾ ಆರ್ಥಿಕ ಸುಭದ್ರತೆಯನ್ನು ರಾಷ್ಟ್ರದಲ್ಲಿ ನೆಲೆಗೊಳಿಸುವುದು ಅಸಾಧ್ಯವೆಂದು ಸಮರ್ಥಿಸುವವರಿದ್ದಾರೆ. ತಾವು ಈ ಹಿಂದೆ ಬಡಾಯಿಕೊಚ್ಚುವ ವಾಗ್ಭಟರನ್ನು ಕಂಡಿರುವುದಾಗಿಯೂ, ಸಂಪುಟದ ಹೇಳಿಕೆಗಳು, ಪತ್ರಗಳ ಇತಿಮಿತಿಯೊಳಗೆ, ರಾಷ್ಟ್ರದ ಕ್ರಾಂತಿಕಾರಿ ಬದಲಾವಣೆಯ ಗುರಿ ಸಾಧಿಸಲಾಗದೆಂದು ಹೇಳುತ್ತಾರೆ. ಸಾಮಾನ್ಯವಾಗಿ ಸ್ಥಾಪಿತ ಸರ್ಕಾರಗಳನ್ನು ಬುಡಮೇಲು ಮಾಡುವುದರಿಂದಷ್ಟೆ ಕ್ರಾಂತಿಕಾರಿ ಬದಲಾವಣೆಗಳನ್ನು ತರಬಹುದೆಂಬುದನ್ನು ತಾವು ಚರಿತ್ರೆಯ ಆಧಾರದಿಂದ ವಾದಿಸುತ್ತಾರೆ. ಆಳುವ ಅರಸರ ನಿರಂಕುಶ ಪ್ರಭುತ್ವಕ್ಕೆ ಇತಿಶ್ರೀ ಹಾಡಿದ ಬ್ರಿಟಿಷರು ಅಂತೆಯೇ ಯಶಸ್ವಿಯಾದುದು. ಅಮೆರಿಕದ ಸಂಯುಕ್ತ ರಾಷ್ಟ್ರಗಳು, ಪ್ರಾರಂಭಿಕ ಸ್ವಾತಂತ್ರ್ಯ ಗಳಿಸಿದ್ದೂ ನೇರ ಕಾಳಗದಿಂದಲೆ; ಫ್ರೆಂಚರು, ಬೋಲ್ಷೆವಿಸ್ಟ್ ಫ್ಯಾಸಿಸ್ಟ್ ಮತ್ತು ನಾಝಿ ಕ್ರಾಂತಿಗಳೂ ಸಹ ಇಂಥವೇ ವಿಧಾನಗಳಿಂದ ಕಾರ್ಯಗತಗೊಂಡಿದ್ದು, ಸಂವಿಧಾನ ರಚನಾ ಸಭೆಗಳಲ್ಲಿ ಶಾಂತಿಮಾರ್ಗಗಳಿಂದ, ಮಾತುಕತೆ, ಚರ್ಚೆಗಳಿಂದ, ಕ್ರಾಂತಿಕಾರಕ ಬದಲಾವಣೆಗಳನ್ನು ತರಲಾಗದೆಂದು ನಮಗೆ ತಿಳಿಸುತ್ತಾರೆ. ನಮ್ಮ ಗುರಿಯೂ ತತ್‌ಸಮಾನವಾದುದೆನ್ನುತ್ತೇವೆ; ಭಾರತೀಯ ಸಮಾಜದ ಸಂರಚನೆಯಲ್ಲಿ ಒಂದು ಮೂಲಭೂತ ಪರಿವರ್ತನೆಯನ್ನು ತರಲು ಆಶಿಸುತ್ತೇವೆ. ನಾವು ನಮ್ಮ ರಾಜಕೀಯ ಮತ್ತು ಆರ್ಥಿಕ ಪರಾವಲಂಬನೆಯನ್ನು ಕೊನೆಗಾಣಿಸಲು ಬಯಸುತ್ತೇವೆ. ಆದರೆ ದೃಢಚೇತನರು, ಸಂಕುಚಿತ ದೃಷ್ಟಿ ಇಲ್ಲದವರು, ಸಮಸ್ಯೆಗೆ ಎದೆಗೊಡುತ್ತಾರೆ. ಸಂದರ್ಭಗಳನ್ನು ಸೃಷ್ಟಿಸುತ್ತಾರೆ. ಇಲ್ಲೊಂದು ಅವಕಾಶ ನಮ್ಮೆದುರಾಗಿದೆ. ಗತ ಇತಿಹಾಸದ ಸಂದರ್ಭದಲ್ಲಿ, ಅಪರೂಪವೆನಿಸಬಹುದಾದ ವಿಧಾನಗಳಿಂದ ಕ್ರಾಂತಿಕಾರಕ ಗುರಿ ತಲುಪಲು ಸಾಧ್ಯವೆ ಎಂಬುದನ್ನು ಆವಿಷ್ಕರಿಸಲು ಈ ಅವಕಾಶವನ್ನು ಬಳಸಿಕೊಳ್ಳಲು ಬಯಸುತ್ತೇವೆ. ಗುಲಾಮಗಿರಿಯಿಂದ ಬಿಡುಗಡೆಗೆ ಒಂದು ನಯವಾದ ತ್ವರಿತಗತಿಯ ಸ್ಥಿತ್ಯಂತರ ಪಡೆಯಲು ಸಾಧ್ಯವಾಗದೆ ಎಂಬುದನ್ನು ಪ್ರಯತ್ನಿಸಿ ನೋಡಬಯಸುತ್ತೇವೆ. ಅಂತಹ ಜವಾಬ್ದಾರಿ, ಈ ಸಭೆಯ ಹೆಗಲೇರಿದೆ. ಯಾರೆಲ್ಲ ಈ ಸಭೆಗೆ ಹಾಜರಾಗುತ್ತಿಲ್ಲವೋ ಅವರಿಗೆ, ಒಂದು ವರ್ಗೀಯ ಸರ್ಕಾರವನ್ನು ರಚಿಸುವ ಅಭಿಲಾಷೆ ನಮಗಿಲ್ಲವೆಂಬುದನ್ನು ತಿಳಿಸಲು ಬಯಸುತ್ತೇವೆ. ನಾವಿಲ್ಲಿ ಯಾವುದೇ ನಿರ್ದಿಷ್ಟ ಸಮುದಾಯಕ್ಕಾಗಿ ಅಥವಾ ಸವಲತ್ತು ಪಡೆದ ವರ್ಗಕ್ಕಾಗಿ

ಏನನ್ನೂ ಅಪೇಕ್ಷಿಸುತ್ತಿಲ್ಲ. ಭಾರತೀಯರೆಲ್ಲರಿಗೋಸ್ಕರ ಸ್ವರಾಜ್ಯ ಸ್ಥಾಪನೆಗಾಗಿ ನಾವು ಕಾರ್ಯ ನಿರ್ವಹಿಸುತ್ತಿದ್ದೇವೆ. ನಿರಂಕುಶ ಪ್ರಭುತ್ವದ ಮೂಲೋತ್ಪಾಟನಕ್ಕೆ ಅಸಂಘಟಿತ ಪರಂಪರೆಯ ಧೂಳೀಪಟಕ್ಕೆ ಯತ್ನಿಸುತ್ತಿದ್ದೇವೆ. ಈ ರಾಷ್ಟ್ರದ ಶ್ರೀಸಾಮಾನ್ಯನ ಮೂಲಭೂತ ಅಗತ್ಯಗಳನ್ನು ಪೂರೈಸಲು ಕೃತಸಂಕಲ್ಪರಾಗಿದ್ದೇವೆ – ಜನಾಂಗ, ಮತ ಅಥವಾ ಸಮುದಾಯ ನಗಣ್ಯ, ಕಹಳೆಯ ಮೊಳಗು ಶಿಥಿಲವಾಗಿದ್ದರೆ, ನಮ್ಮ ಬೆಂಬಲಕ್ಕೆ ಜನರನ್ನು ಸಂಘಟಿಸಲಾಗದು. ಆದುದರಿಂದಲೇ ನಮ್ಮ ಕೊಂಬು ಕಹಳೆಯ ದನಿ ಕೇಳಿಸುವಂತಿರಬೇಕು. ಜನತೆಯಲ್ಲಿ ರೋಮಾಂಚನ ತರಬೇಕು; ಸಂದೇಹಗ್ರಸ್ತರಿಗೂ, ಗೈರು ಹಾಜರಾಗುವವರಿಗೂ, ಭಾರತದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನಾವಿಲ್ಲಿ ಬದ್ಧಕಂಕಣರಾಗಿದ್ದೇವೆಂದು ತಿಳಿಸಿ ಅವರಲ್ಲಿ ಹೊಸ ಭರವಸೆ ಮೂಡಿಸಬೇಕು. ಯಾವೊಬ್ಬ ವ್ಯಕ್ತಿಯೂ ಇಲ್ಲಿ ತನ್ನ ಆಶೋತ್ತರಗಳ ಪೂರೈಕೆಯಿಂದ ವಂಚಿತನಾಗಲಾರ, ಯಾವ ವರ್ಗದ ಸಾಂಸ್ಕೃತಿಕ ಮುನ್ನಡೆಗೂ ಅಡ್ಡಿಯಾಗದು ಎಂಬ ಆಶಾಭಾವನೆಯನ್ನು ಮೊಳಕೆಗಟ್ಟಿಸಬೇಕು. ಆದುದರಿಂದ ಇಂತಹ ಲಕ್ಷಣವುಳ್ಳ ಧ್ಯೇಯೋದ್ದೇಶದ ಘೋಷಣೆ ಅಗತ್ಯವೆಂದು ನಾನು ಭಾವಿಸುತ್ತೇನೆ. ಈಗಿನಂತಲ್ಲದೆ ಸಭೆಯಲ್ಲಿ ಸಂಪೂರ್ಣ ಹಾಜರಿ ಕಾಣುವವರೆಗೂ ಕಾಯುವ ಅಗತ್ಯ ನಮಗಿಲ್ಲ.

ಈಗ, ನಾವು ಧ್ಯೇಯೋದ್ದೇಶಗಳತ್ತ ಗಮನ ಹರಿಸೋಣ. ಭಾರತವು ಸರ್ವತಂತ್ರ ಸ್ವತಂತ್ರ ಗಣರಾಜ್ಯವಾಗಲೆಂಬ ದೃಢ ನಿಶ್ಚಯ ತಳೆಯೋಣ ಸ್ವಾತಂತ್ರ್ಯದ ವಿಷಯದಲ್ಲಿ ಎರಡು ಮಾತಿಲ್ಲ. ಮಾರ್ಚ್ ೧೫ರಂದು ಪ್ರಧಾನಿ ಅಟ್ಲಿ, ತಮ್ಮ ಮೊದಲ ಹೇಳಿಕೆಯಲ್ಲಿ ಹೀಗೆಂದರು :

“ಭಾರತೀಯರು ಬ್ರಿಟಿಷ್ ಕಾಮನ್‌ವೆಲ್ತ್ ಒಳಗೆ ಉಳಿಯುವುದನ್ನು ಆಯ್ಕೆ ಮಾಡುವರೆಂದು ನಂಬುತ್ತೇವೆ. ಹಾಗೆ ಮಾಡುವುದು ಆ ರಾಷ್ಟ್ರಕ್ಕೆ ಅತ್ಯಂತ ಪ್ರಯೋಜನಕಾರಿಯೆಂಬುದು ನನ್ನ ದೃಢ ನಿಶ್ಚಯ. ಆದರೆ ಅದು ಆ ರೀತಿ ಆಯ್ಕೆ ಮಾಡುವುದಾದರೆ, ಅದರ ಸ್ವಂತ, ಸ್ವಇಚ್ಛೆಯಿಂದಲೇ ಆಗತಕ್ಕದ್ದು. ಬಾಹ್ಯ ನಿರ್ಬಂಧಗಳಿಂದ, ಬ್ರಿಟಿಷ್ ಕಾಮನ್‌ವೆಲ್ತ್ ಹಾಗೂ ಸಾಮ್ರಾಜ್ಯವನ್ನು ಬಂಧಿಸಲಾಗದು. ಅನ್ಯಥಾ ಬಿಡುಗಡೆಯನ್ನು ಆಯ್ಕೆ ಮಾಡಿಕೊಂಡಲ್ಲಿ, ನಮ್ಮ ದೃಷ್ಟಿಯಲ್ಲಿ ಹಾಗೆ ಮಾಡುವುದು ಅದರ ಹಕ್ಕು ಮುಸ್ಲಿಂ ಲೀಗ್ ಮತ್ತು-ರಾಜರೆಲ್ಲರೂ ಒಪ್ಪಿದ್ದಾರೆ. ೧೨.೫.೧೯೪೬ರಂದು ರಾಜರ ಪ್ರಧಾನಾಧಿಕಾರಿಗೆ (ಛಾನ್ಸಲರ್‌ಗೆ) ಸಂಪುಟ ನಿಯೋಗ ರಾಜ್ಯಗಳ ಒಡಂಬಡಿಕೆಗಳು ಮತ್ತು ಪರಮಾಧಿಕಾರದ ಬಗ್ಗೆ ಜ್ಞಾಪನ ಪತ್ರವನ್ನು, ಸಂಪುಟ ನಿಯೋಗ ಸಲ್ಲಿಸಿದ್ದು ಅದರಲ್ಲಿ ಹೀಗೆ ಹೇಳಲಾಗಿದೆ:– “ಭಾರತ, ಈ ಕೂಡಲೆ ತನ್ನ ಸಂಪೂರ್ಣ ಉತ್ಕೃಷ್ಟತೆಯನ್ನು ಪಡೆಯಬೇಕೆಂಬ ರಾಷ್ಟ್ರದ ಸಾಮಾನ್ಯ ಆಶೋತ್ತರದಲ್ಲಿ ರಾಜ್ಯಗಳ ಸಮಗ್ರ ಪಾಲಿದೆ ಎಂಬುದನ್ನು ರಾಜಸಭೆ ದೃಢೀಕರಿಸಿದೆ. ಬ್ರಿಟಿಷ್ ಭಾರತದಲ್ಲಿ ಉತ್ತರಾಧಿಕಾರಿ ಸರ್ಕಾರ ಅಥವಾ ಸರ್ಕಾರಗಳು ಸ್ವಾತಂತ್ರ್ಯವನ್ನು ಘೋಷಿಸಿದರೆ, ಅವುಗಳ ದಾರಿಯಲ್ಲಿ ಯಾವ ತಡೆಯೂ ಇರದು ಎಂಬುದನ್ನು ಮಹಾ ಸನ್ನಿಧಾನದ ಸರ್ಕಾರ ಘೋಷಿಸಿದೆ. ಉದ್ಘೋಷದ ಫಲಶ್ರುತಿಯಾಗಿ ಭಾರತದ ಭವಿಷ್ಯದ ಕಾಳಜಿ ಹೊತ್ತವರೆಲ್ಲರೂ, ಅದು ಬ್ರಿಟಿಷ್ ಕಾಮನ್‌ವೆಲ್ತ್ ಸಹಿತ ಇಲ್ಲವೇ ರಹಿತ ಸ್ವಾತಂತ್ರ್ಯ ಪಡೆಯಲೆಂದು ಹಾರೈಸುತ್ತಾರೆ. ಭಾರತದ ಭವಿಷ್ಯದ ಬಗ್ಗೆ ಕಾಳಜಿ ಹೊತ್ತವರೆಲ್ಲರೂ – ಕಾಂಗ್ರೆಸ್, ಮುಸ್ಲಿಂ ಲೀಗ್, ಮತ್ತಿತರ ಸಂಸ್ಥೆಗಳು, ರಾಜರುಗಳೂ ಕೂಡ – ಬ್ರಿಟಿಷ್ ಕಾಮನ್‌ವೆಲ್ತ್‌ನ ಒಳಗೆ ಯಾ ಹೊರಗಿದ್ದು ಎಲ್ಲರೂ ಭಾರತಕ್ಕೆ ಸ್ವಾತಂತ್ರ್ಯ ಬಯಸುತ್ತಾರೆ.

ಚಕ್ರವರ್ತಿ ಸಾರ್ವಭೌಮರು, ಸ್ವಾತಂತ್ರ್ಯದ ಆಶ್ವಾಸನೆ ನೀಡಿದುದನ್ನು ಕೆಳಮನೆಯಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಉಲ್ಲೇಖಿಸಿದ ಮಿ। ಚರ್ಚಿಲ್ ೧.೭.೧೯೪೬ರಂದು ಹೀಗೆಂದರು. – “ಏನೇ ಆಗಲಿ, ನಾವು ಪ್ರಕ್ರಿಯೆಯನ್ನು ಮೊಟಕುಗೊಳಿಸಿ ಈಗ ಸ್ವಾತಂತ್ರ್ಯವನ್ನು ಪಡೆಯಿರಿ” ಎನ್ನುವುದು ಬೇರೆ ವಿಷಯ. ಅದುವೆ ಈ ಸರ್ಕಾರ ಪಡೆಯಲಿರುವುದು ಅದನ್ನು ಅವರು ಅತಿ ಶೀಘ್ರದಲ್ಲೇ ಪಡೆಯುತ್ತಾರೆ. ಆ ಭಾವನೆ ಅವರನ್ನು ಕುರುಡರನ್ನಾಗಿಸಬಾರದು. ತತ್‌ಕ್ಷಣದ ಪೂರ್ಣ ಪ್ರಮಾಣದ, ಸ್ವಾತಂತ್ರ್ಯ ಪಡೆಯಲು, ಈ ಸರ್ಕಾರ ಯಾರೊಡನೆ ವ್ಯವಹರಿಸುತ್ತಿದೆಯೋ, ಅವರಲ್ಲಿ ಕಿಂಚಿತ್ತೂ ಅಳುಕಿರಲಾರದು. ಮುಂದೆ ಸಂಭವಿಸುವುದು ಅದುವೆ.”

ನಮ್ಮ ಧ್ಯೇಯೋದ್ದೇಶಗಳ ಈ ನಿರ್ಣಯ ಮಿ। ಚರ್ಚಿಲ್ ಅವರನ್ನು ನಿರಾಸೆಗೊಳಿಸಲು ಬಯಸುವುದಿಲ್ಲ. (ಘೋಷಾನುಮೋದನೆ). ನಿರೀಕ್ಷಿಸಿದುದು ಸಂಭವಿಸಲಿದೆಯೆಂದು ಅದು ಅವರಿಗೆ ತಿಳಿಸುತ್ತದೆ. ಬ್ರಿಟಿಷ್ ಕಾಮನ್‌ವೆಲ್ತ್ ಬಿಟ್ಟು ಹೊರಬರಲು ನೀವು ನಮಗೊಂದು ಅವಕಾಶ ಕೊಟ್ಟಿರಿ. ನಾವು ಬ್ರಿಟಿಷ್ ಕಾಮನ್‌ವೆಲ್ತ್‌ನಿಂದ ನಿರ್ಗಮನವನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಏಕೆ ಗೊತ್ತೇ? ಭಾರತದ ಮಟ್ಟಿಗೆ ಹೇಳುವುದಾದರೆ, ಇದು ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಅಥವಾ ಕೆನಡಾ ಅಥವಾ ದಕ್ಷಿಣ ಆಫ್ರಿಕದಂತೆ ಸಾಮಂತ ರಾಷ್ಟ್ರಗಳಲ್ಲ. ಇವೆಲ್ಲ ರಾಷ್ಟ್ರಗಳೂ ದಿ ಗ್ರೇಟ್ ಬ್ರಿಟನ್‌ಗೆ ಜನಾಂಗೀಯ ಮತೀಯರಿಗೂ, ಸಾಂಸ್ಕೃತಿಕ ಬದ್ಧತೆ ಹೊಂದಿರುವಂಥವು. ಭಾರತದ ಜನಸಂಖ್ಯೆ ಅಪಾರ; ನೈಸರ್ಗಿಕ ಸಂಪನ್ಮೂಲಗಳು ಹೇರಳ; ಅತಿ ದೊಡ್ಡ ಸಾಂಸ್ಕೃತಿಕ ಪರಂಪರೆ ಇದೆ. ಸುದೀರ್ಘ ಕಾಲದಿಂದ ಸ್ವತಂತ್ರವಾದ ವೃತ್ತಿಯಲ್ಲಿ ತೊಡಗಿದೆ. ಇತರ ಸಾಮಂತ ರಾಷ್ಟ್ರಗಳಂತೆ ಭಾರತವೂ ಒಂದು ಸಾಮಂತ ರಾಷ್ಟ್ರವೆಂಬುದು ಅನೂಹ್ಯ.

ಎರಡನೆಯದಾಗಿ, ವಿಶ್ವಸಂಸ್ಥೆಯಲ್ಲಿ ನಡೆದುದರ ಪರಿಣಾಮವನ್ನು ಪರಿಶೀಲಿಸೋಣ; ನಮ್ಮ ಗಣ್ಯ ಸಹೋದ್ಯೋಗಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಅವರು, ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಹಕ್ಕನ್ನು ಸಮರ್ಥಿಸಿದಾಗ – ಗ್ರೇಟ್ ಬ್ರಿಟನ್ ತಳೆದ ನಿಲುವನ್ನು ನೋಡಿ. ಗ್ರೇಟ್ ಬ್ರಿಟನ್, ಕೆನಡ ಮತ್ತು ಆಸ್ಟ್ರೇಲಿಯಾ ಜೊತೆಗೂಡಿ ದಕ್ಷಿಣ ಆಫ್ರಿಕವನ್ನು ಬೆಂಬಲಿಸಿದುವು. ನ್ಯೂಜಿಲೆಂಡ್ ಮತದಾನದಿಂದ ಹೊರಗುಳಿಯಿತು. ಇದರರ್ಥ ಗ್ರೇಟ್ ಬ್ರಿಟನ್, ಮತ್ತಿತರ ಸಾಮಂತ ರಾಷ್ಟ್ರಗಳ ನಡುವೆ ಒಂದು ಸೈದ್ಧಾಂತಿಕ ಸಾಮುದಾಯಿಕತೆ ಇದ್ದು ಇದರಲ್ಲಿ ಭಾರತದ ಪಾಲಿಲ್ಲ ಎಂಬುದು. ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿ ಸಾಂಗತ್ಯ ಪ್ರಶ್ನೆಯಿಲ್ಲ. ಬ್ರಿಟಿಷ್ ಕಾಮನ್‌ವೆಲ್ತ್‌ನ ಒಂದು ಭಾಗವಾಗಿ, ನಾವೆಲ್ಲ ಸದಸ್ಯರೂ ಸಮಾನ ಹಕ್ಕುಗಳನ್ನೂ ಅನುಭವಿಸುತ್ತಿರುವ ಭಾವನೆ ನಮ್ಮಲ್ಲಿ ಮೂಡುವುದಿಲ್ಲ. ಗ್ರೇಟ್ ಬ್ರಿಟನ್‌ನ ಸಾರಥ್ಯದಲ್ಲಿ ಮತ್ತದರ ಕೃಪಾಪೋಷಣೆಯಲ್ಲಿ ಐರೋಪ್ಯ ಒಕ್ಕೂಟ ಸ್ಥಾಪನೆಗಾಗಿ ಮಿ। ಚರ್ಚಿಲ್ ಹಾಗೂ ಲಾರ್ಕ್ ಟೆಂಪಲ್‌ವುಡ್ ಒಂದು ಪ್ರಸ್ತಾವವನ್ನು ಇತ್ತೀಚೆಗೆ ಹುಟ್ಟು ಹಾಕಿದ್ದು, ತಮ್ಮಲ್ಲಿ ಕೆಲವರಿಗೆ ತಿಳಿದಿರಬಹುದು. ಆಲೋಚನಾಲಹರಿ ಎತ್ತ ಸಾಗುತ್ತಿದೆ ಎಂಬುದನ್ನೂ ಈ ಬೆಳವಣಿಗೆ ತಿಳಿಸುತ್ತದೆ.

ಇಷ್ಟಾದರೂ, ಬ್ರಿಟಿಷ್ ಕಾಮನ್‌ವೆಲ್ತ್‌ನಿಂದ ನಿರ್ಗಮಿಸಲು ಭಾರತ ಆಯ್ಕೆ ಮಾಡಿಕೊಂಡಿದ್ದರೂ, ಸ್ವಯಂ ಪ್ರೇರಿತ ಸಹಕಾರ, ಪರಸ್ಪರ ಸಹಯೋಗ ವಾಣಿಜ್ಯ, ರಕ್ಷಣೆ, ಸಾಂಸ್ಕೃತಿಕ ವಿನಿಮಯ ಮುಂತಾದ ನೂರು ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಯೋಗದಾನದ ಮಾರ್ಗಗಳಿವೆ. ಆದರೆ ಈ ಎಲ್ಲ ಬಗೆಯ ಪರಸ್ಪರ ಸಹಕಾರ ಸ್ನೇಹ ಸೌಹಾರ್ದ ಭಾವನೆಯಿಂದ ಬೆಳೆಯುತ್ತವೆಯೋ ನಂಬಿಕೆ, ಸಾಮರಸ್ಯದಿಂದ ಅಭಿವೃದ್ಧಿ ಹೊಂದುತ್ತವೆಯೋ ಅಥವಾ ಪರಸ್ಪರ ಅಪನಂಬಿಕೆ, ಆರೋಪ ಪ್ರತ್ಯಾರೋಪಗಳಲ್ಲಿ ಇವೆಲ್ಲವೂ ಕೊನೆಯುಸಿರೆಳೆಯುತ್ತವೆಯೋ ಎಂಬುದು ಗ್ರೇಟ್ ಬ್ರಿಟನ್ ತಾಳುವ ನಿಲುವನ್ನು ಅವಲಂಬಿಸಿದೆ. ಭಾರತ ಗಣರಾಜ್ಯ ಕುರಿತ ಈ ನಿರ್ಣಯ ಮಿ। ಚರ್ಚಿಲ್ ಮತ್ತು ಅವರ ಅನುಯಾಯಿಗಳಿಗೆ ಕಿರಿಕಿರಿ ಉಂಟುಮಾಡಿರಬೇಕು. ನಮ್ಮ ಅಧ್ಯಕ್ಷರು ಇಂದು ಮಿ। ಚರ್ಚಿಲ್ ಅವರ ಒಂದು ಹೇಳಿಕೆಯನ್ನು ಉಲ್ಲೇಖಿಸಿದರು. ನಾನು ಮತ್ತೆ ಕೆಲವನ್ನು ಪ್ರಸ್ತಾಪಿಸುತ್ತೇನೆ.

ಬರ್ಮಾ ಕುರಿತ ಚರ್ಚೆ ನಡೆದಾಗ ಮಿ। ಚರ್ಚಿಲ್ ಅವರು ತಮ್ಮ ತಂದೆ ಕಾರ್ಯದರ್ಶಿಯಾಗಿದ್ದಾಗ ಬರ್ಮಾದ ಸೇರ್ಪಡೆ ಆಗಿತ್ತು ಎಂದು ಹೇಳಿದರು. ಜೊತೆಗೆ ಈಗ, ಬರ್ಮಾಗೆ ಬ್ರಿಟಿಷ್ ಕಾಮನ್‌ವೆಲ್ತ್‌ನಿಂದ ನಿರ್ಗಮಿಸಲು ಸ್ವಾತಂತ್ರ್ಯ ನೀಡಲಾಗಿದೆ ಎಂದರು. ಬರ್ಮಾ ಮತ್ತು ಭಾರತ ತಮ್ಮ ಪಿತ್ರಾರ್ಜಿತ ಸ್ವತ್ತೆಂದು ಅವರು ಭಾವಿಸಿದಂತಿದೆ. ಅವೆರಡೂ ಈಗ ಕೈಬಿಟ್ಟು ಹೋಗುತ್ತಿರುವುದರಿಂದ ಅವರು ಕಳೆಗುಂದಿದ್ದಾರೆ. ಖಿನ್ನ ಮನಸ್ಕರಾಗಿದ್ದಾರೆ.

ಭಾರತವನ್ನು ಕುರಿತ ಚರ್ಚೆಯಲ್ಲಿ ಅವರು ಮಹಾರಾಜರ ಸರ್ಕಾರವನ್ನು ಹೀಗೆ ಕೇಳಿದ್ದರು: "ಭಾರತದ ಹೋರಾಟಗಾರರಲ್ಲಿ ಬಹು ಸಂಖ್ಯಾತರು ಮುಸಲ್ಮಾನರು; ಅವರ ಸಂಖ್ಯೆ ೯೦ ದಶಲಕ್ಷ. ಅವರ ಬಗ್ಗೆ ನಿಮ್ಮ

ಹೊಣೆಗಾರಿಕೆ ಏನೆಂದು ನೆನಪಿದೆಯಲ್ಲ?" ಭಾರತದಲ್ಲಿ ನಡೆಯುವ ಚರ್ಚೆಗಳಲ್ಲಿ ಮತ್ತು ಅಂತಾರಾಷ್ಟ್ರೀಯ ವಿಚಾರ ವಿನಿಮಯದಲ್ಲಿ ಸತ್ಯದ ಕಿಮ್ಮತ್ತು ಅತಿ ಕಡಿಮೆ "ಮತ್ತು ಏನಿಲ್ಲವೆಂದರೂ ೪೦ ರಿಂದ ೬೦ ದಶಲಕ್ಷ ಅಸ್ಪೃಶ್ಯರ ಬಗ್ಗೆ ನಿಮ್ಮ ಹೊಣೆ"? ಬೃಹತ್ ಕಾಂಗ್ರೆಸ್ ಪಕ್ಷದ ಪ್ರತಿನಿಧಿಗಳನ್ನು "ಸುವ್ಯವಸ್ಥಿತ ಮತ್ತು ಸಕ್ರಿಯ ಸಂಚುಗಾರರ" ಮುಖವಾಣಿ ಎಂದು ಕರೆಯುತ್ತಾರೆ. "ಇವರು ಬಲಪ್ರಯೋಗದಿಂದ ಅಧಿಕಾರವನ್ನು ಕಸಿದುಕೊಂಡವರು. ಇವರು ಮುನ್ನಡೆದು ಮೋಸಗಾರಿಕೆ, ವಂಚನೆಯಿಂದ ಪಡೆದ ಅಧಿಕಾರವನ್ನು, ಅಪಾರ ಜನಸ್ತೋಮದ ಹೆಸರಿನಲ್ಲಿ ಬಳಸಿಕೊಳ್ಳಲು ಹೊರಟವರು. ಈ ಸಮೂಹದೊಡನೆ ಬಹಳ ಹಿಂದಿನಿಂದ ಎಲ್ಲ ಪರಿಣಾಮಕಾರಿ ಸಂಪರ್ಕವನ್ನು ಕಳಚಿಕೊಂಡವರು".

ಬದುಕಿನ ಹಾದಿಯಲ್ಲಿ ಎಡತಾಕುವ ವಿಪ್ಲವಗಳಿಗೆ ಅಂಜದೆ, ಅಳುಕದೆ ಎದೆಯೊಡ್ಡಿದವರು. ತಮ್ಮ ದೇಶಾಭಿಮಾನಕ್ಕಾಗಿ ನೊಂದು ಬೆಂದವರು. ಇಡೀ ವಿಶ್ವದಲ್ಲಿ ಇವರ ರಾಷ್ಟ್ರಪ್ರೇಮ ಅದ್ವಿತೀಯ; ಇವರ ನೇತಾರ, ಭಾರತದ ಅಭುಕ್ತ ಮೂಲೆಯೊಂದರಲ್ಲಿ ಏಕಾಂಗಿಯಾಗಿ ಶ್ರಮಿಸುತ್ತಿರುವವ; ಮುಪ್ಪಡರಿದ ತನ್ನ ಭುಜಗಳ ಮೇಲೆ ರಾಷ್ಟ್ರದ ಅವಮಾನ, ದುಃಖ ದುಮ್ಮಾನಗಳನ್ನು ಹೊತ್ತು ನಡೆಯುತ್ತಿರುವ ನಾಯಕನ ಈ ಪಕ್ಷದ ಬಗ್ಗೆ ಮಿ। ಚರ್ಚಿಲ್ ಮಾತನಾಡಿರುವ ರೀತಿಯನ್ನು ನಾನು ಹೇಗೆಂದು ಬಣ್ಣಿಸಲಿ? [ಧಿಕ್ಕಾರದ ಕೂಗು], ಮಾನ್ಯ ಚರ್ಚಿಲ್‌ರ ಕೋಪೋದ್ಗಾರ, ಸಭ್ಯತೆ, ವಿವೇಕದ, ಸೋಂಕಿಲ್ಲದ ಅರಚಾಟ, ಪ್ರಚೋದನಕಾರಿಯಾದ, ಅಸಂಬದ್ಧ ಟೀಕೆಗಳು, ನಮ್ಮ ಜಾತಿ ವಿಭೇದಗಳ ಬಗ್ಗೆ ತಿರಸ್ಕಾರದ ನಗೆ, ಅವರ ಆ ಸಂದರ್ಭದ, ಮತ್ತಿತರ ಸಂದರ್ಭಗಳ ಭಾಷಣದಲ್ಲಿ ನಡುನಡುವೆ ಎದ್ದು ಕಾಣುತ್ತವೆ. ಅಂತಹ ಭಾಷಣಗಳು ಮತ್ತು ಹೇಳಿಕೆಗಳು ಗುರಿಗೆ ಅಡ್ಡಬರಲಾರವು; ಪರಂತು ಗುರಿಯನ್ನು ಮುಂದೂಡಬಹುದು ಮತ್ತು ತನ್ನಿಮಿತ್ತ ಲಂಬಿಸಬಹುದು ಎಂದಿಷ್ಟು ಮಾತು ನಾನು ಹೇಳಬಲ್ಲೆ. ಬ್ರಿಟಿಷ್ ಸಂಪರ್ಕ ಕೊನೆಗೊಳ್ಳುತ್ತದೆ, ಕೊನೆಗೊಳ್ಳಬೇಕು. ಅದು ಸ್ನೇಹ ಸೌಹಾರ್ದದಲ್ಲಿ ಪರಿಸಮಾಪ್ತಿಗೊಳ್ಳುವುದೋ, ಕೆರಳಿಕೆ ಮತ್ತು ವೇದನೆಯಲ್ಲೋ ಎಂಬುದು, ಈ ಬೃಹತ್ ಸಮಸ್ಯೆಯನ್ನು ಬ್ರಿಟಿಷರು ಹೇಗೆ ನಿಭಾಯಿಸುತ್ತಾರೆ ಎಂಬುದರ ಮೇಲೆ ಅವಲಂಬಿಸಿರುತ್ತದೆ.

ಗಣತಂತ್ರ ಎಂಬುದು ಈ ರಾಷ್ಟ್ರದ ರಾಜ್ಯ ಪ್ರತಿನಿಧಿಗಳಲ್ಲಿ ಕೆಲವರನ್ನು ಸಂದಿಗ್ಧತೆಯಲ್ಲಿ ಸಿಲುಕಿಸಿರುವ ಪದ. ಗಣತಂತ್ರ ಭಾರತ ಎಂದರೆ ಅರಸರ ಆಳ್ವಿಕೆಯನ್ನು ರದ್ದುಪಡಿಸುವುದಲ್ಲವೆಂದು, ನಾವು ಈ ವೇದಿಕೆಯಿಂದ ತಿಳಿಯಪಡಿಸಿದ್ದೇವೆ. ರಾಜರು ಮುಂದುವರೆಯಬಹುದು; ಎಲ್ಲಿಯವರೆಗೆ ಸಂವಿಧಾನಬದ್ಧರಾಗಿರುವರೋ ಅಲ್ಲಿಯವರೆಗೆ ರಾಜರು ಆಳ್ವಿಕೆ ನಡೆಸುತ್ತಾರೆ; ರಾಜ್ಯದ ಪ್ರಜೆಗಳಿಗೆ ಎಲ್ಲಿಯುವರೆಗೆ ಅವರು ಹೊಣೆಗಾರರಾಗಿರುತ್ತಾರೋ, ಅಲ್ಲಿಯವರೆಗೆ; ಈ ರಾಷ್ಟ್ರ ಗೆದ್ದುಕೊಂಡ ಸಾರ್ವಭೌಮತ್ವದ ಫಲ, ಅದರ ಪರಮಾಧಿಕಾರ, ಅದರ ಚಲಾವಣೆಯಿಂದ, ಜವಾಬ್ದಾರಿಯನ್ನು ಜನತಾ ಪ್ರತಿನಿಧಿಗಳಿಗೆ ವರ್ಗಾಯಿಸುವುದಾದರೆ, ಆ ಪರಮಾಧಿಕಾರವನ್ನು ಅವಲಂಬಿಸಿರುವವರು, ಬ್ರಿಟಿಷರಂತೆ. ಹಸ್ತಾಂತರಿಸಬೇಕಾಗುವುದು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ; ಅರ್ಥಾತ್ ಹೊಣೆಗಾರಿಕೆಯನ್ನು ಜನತೆಗೆ ವಹಿಸಿಕೊಡಬೇಕಾಗುತ್ತದೆ.

ಗಣತಂತ್ರ ಪದ್ಧತಿ ಈ ರಾಷ್ಟ್ರದ ಮೇಧಾಶಕ್ತಿಗೆ ನಿಲುಕದ ಹೊಸತೊಂದು ಪರಿಕಲ್ಪನೆ ಎಂದು ನಾವು ಹೇಳಲಾಗದು. ಇತಿಹಾಸದ ಪ್ರಾರಂಭದಲ್ಲಿ ನಾವಿದನ್ನು ಪಡೆದಿದ್ದೇವೆ. ಕೆಲ ವರ್ತಕರು ಉತ್ತರದಿಂದ, ದಕ್ಷಿಣದತ್ತ ಪಯಣಿಸಿದಾಗ, ದಕ್ಷಿಣದ ಒಬ್ಬ ದೊರೆ ಕೇಳಿದ – "ನಿಮ್ಮ ರಾಜನಾರೂ" ಉತ್ತರ – "ನಮ್ಮಲ್ಲಿ ಕೆಲವರು ಸಭೆಗಳ ಆಡಳಿತಕ್ಕೆ ಒಳಪಟ್ಟವರು : ಮತ್ತೆ ಕೆಲವರು ರಾಜರ ಆಳ್ವಿಕೆಯಲ್ಲಿರುವವರು."

"ಕೇಚಿತ್ ದೇಶೋ ಗಣಾಧೀನಾಃ ಕೇಚಿತ್ ರಾಜಾಧೀನಾಃ".

ಪಾಣಿನಿ, ಮೆಗಾಸ್ತನೀಸ್ ಮತ್ತು ಕೌಟಿಲ್ಯ, ಪ್ರಾಚೀನ ಭಾರತದ ಗಣರಾಜ್ಯಗಳನ್ನು ಉಲ್ಲೇಖಿಸುತ್ತಾರೆ. ಮಹಾ ಬುದ್ಧ ಕಪಿಲವಸ್ತು ಗಣರಾಜ್ಯಕ್ಕೆ ಸೇರಿದವ.

ಜನತೆಯ ಸಾರ್ವಭೌಮತ್ವದ ಬಗ್ಗೆ ಬಹಳಷ್ಟು ಉಲ್ಲೇಖಿಸಲಾಗಿದೆ. ಅಂತಿಮವಾಗಿ ಸಾರ್ವಭೌಮತ್ವ,

ನೈತಿಕ ಕಾನೂನು, ಮನುಕುಲದ ಆತ್ಮಸಾಕ್ಷಿಯ ಮೇಲೆ ನೆಲೆಗೊಂಡಿದೆ ಎಂಬುದು ನಮ್ಮ ತೀರ್ಮಾನ. ಜನತೆ ಮತ್ತು ರಾಜರುಗಳೆಲ್ಲ ಅದರ ಅಧೀನ.

ಧರ್ಮ, ಸನ್ನಡತೆ ಎಂಬುದು ದೊರೆಗಳ ದೊರೆ.

"ಧರ್ಮಂ ಕ್ಷಾತ್ರಸ್ಯ ಕ್ಷಾತ್ರಂ"

ಅದು ಜನತೆ ಮತ್ತು ಆಳುವವರು – ಇಬ್ಬರನ್ನೂ ಆಳುತ್ತದೆ. ಕಾನೂನಿನ ಸಾರ್ವಭೌಮತ್ವವನ್ನು ನಾವು ಪ್ರತಿಪಾದಿಸಿದ್ದೇವೆ.

ರಾಜರುಗಳು – ಅವರಲ್ಲಿ ಹಲವಾರು ಜನರು ನನ್ನ ವೈಯಕ್ತಿಕ ಗೆಳೆಯರು – ಅವರಿಗೆ ಸಂಪುಟದ ಹೇಳಿಕೆಯ ಬಗ್ಗೆ ಸಹಮತವಿದೆ. ಈ ರಾಷ್ಟ್ರದ ಪುರೋಭಿವೃದ್ಧಿಗೆ ಯೋಗದಾನ ನೀಡಲು ಬಯಸುತ್ತಾರೆ. ಅವರ ಪ್ರಜೆಗಳನ್ನು ಹುರಿಗೊಳ್ಳುವ ಭರವಸೆಗಳನ್ನು ಗಮನಕ್ಕೆ ತಂದುಕೊಳ್ಳುವುದು ಅವರ ಹೊಣೆಗಾರಿಕೆ ಎಂದೂ, ಕರ್ತವ್ಯವೆಂದೂ ನಾನು ನಂಬಿದ್ದೇನೆ. ಅವರು ಹೊಣೆಗಾರರಾಗುತ್ತಾರೆಂಬ ಭರವಸೆ ನನಗಿದೆ. ಅವರು ಹಾಗೆ ಮಾಡಿದಲ್ಲಿ, ಈ ದೇಶವನ್ನು ರೂಪಿಸುವುದರಲ್ಲಿ ಗಣನೀಯ ಪಾತ್ರ ವಹಿಸಿದಂತಾಗುತ್ತದೆ. ನಮಗೆ ರಾಜರಲ್ಲಿ ವೈಮನಸ್ಯವಿಲ್ಲ. ಗಣತಂತ್ರದ ಪ್ರತಿಪಾದನೆ, ಜನತೆಯ ಸಾರ್ವಭೌಮತ್ವದ ಪ್ರತಿಪಾದನೆ; ಅದು ಅರಸರ ಆಳ್ವಿಕೆಯನ್ನು ಎದುರು ಹಾಕಿಕೊಳ್ಳುವುದೆಂಬ ಭಾವನೆ ಮೂಡಿಸುವುದಿಲ್ಲ. ಅವು ಭಾರತೀಯ ರಾಜ್ಯಗಳ ಪ್ರಾಚೀನ ಇತಿಹಾಸವನ್ನು ವರ್ತಮಾನದೊಡನೆ ಮುಖಾಮುಖಿಯಾಗಿಸುವುದಿಲ್ಲ; ಆದರೆ ಅವು ರಾಜ್ಯಗಳ, ಪ್ರಜಾಸಂಕುಲದ ಭಾವೀ ಆಶೋತ್ತರಗಳನ್ನು ಬಿಂಬಿಸುತ್ತವೆ.

ಈ ನಿರ್ಣಯದ ಮುಂದಿನ ಅಂಶವೆಂದರೆ ಭಾರತದ ಒಕ್ಕೂಟ. ಸಂಪುಟದ ಹೇಳಿಕೆ, ಭಾರತದ ವಿಭಜನೆಯನ್ನು ನಿರಾಕರಿಸುತ್ತದೆ. ಭೂಗೋಳ, ವಿಭಜನೆಯ ವಿರೋಧಿ, ಸೇನಾ ತಂತ್ರ ಅದನ್ನು ವಿರೋಧಿಸುತ್ತದೆ. ಪ್ರಾರಂಭದಿಂದಲೂ ಹಿಂದೂ ಮುಸ್ಲಿಂ ಮತ್ತು ಸಿಖ್ಖರ ಆಶೋತ್ತರಗಳು ಅದಕ್ಕೆ ವ್ಯತಿರಿಕ್ತ. ದೊಡ್ಡ ದೊಡ್ಡ ಸಮಸ್ಯೆಯ ಸಂವರ್ಧನೆಯೇ ಪ್ರಸ್ತುತ ಪ್ರವೃತ್ತಿ ಅಮೆರಿಕ. ಕೆನಡ ಮತ್ತು ಸ್ವಿಟ್ಜರ್‌ಲೆಂಡ್‌ನಲ್ಲಿ ಏನಾಯಿತೆಂಬುದನ್ನು ನೋಡಿ. ಈಜಿಪ್ಟ್, ಸುಡಾನ್‌ನ ಸಾಂಗತ್ಯ ಬಯಸುತ್ತದೆ; ದಕ್ಷಿಣ ಐರ್ಲೆಂಡ್‌ಗೆ ಉತ್ತರ ಐರ್ಲೆಂಡ್‌ನೊಡನೆ ಬೆಸೆಯುವ ಆಸೆ.

ಪ್ಯಾಲೆಸ್ಟೀನ್, ಯಾವುದೇ ವಿಭಜನೆಯನ್ನು ಪ್ರತಿಭಟಿಸುತ್ತಿದೆ. ಮತ್ತೆ, ಆಧುನಿಕ ಜೀವನಕ್ಕೆ ಆಧಾರ ರಾಷ್ಟ್ರೀಯತೆ; ಮತವಲ್ಲ. ಈಜಿಪ್ಟ್‌ನಲ್ಲಿ ಅಲೆನ್‌ಬಿಯ ವಿಮೋಚನಾಂದೋಳನ, ಅರೇಬಿಯಾದಲ್ಲಿ ಲಾರೆನ್ಸ್‌ನ ಸಾಹಸಗಳು, ಕೆಮಲ್ ಪಾಷಾನಿಂದ ಜಾತ್ಯತೀತ ತುರ್ಕಿಯ ಸೃಷ್ಟಿಯ ಅದಮ್ಯ ಸಂಕಲ್ಪ ಈ ಎಲ್ಲ ಬೆಳವಣಿಗೆಗಳು, ಮತೀಯ ರಾಜ್ಯಗಳ ದಿನಗಳು ಕಳೆದು ಹೋದುದನ್ನು ಸೂಚಿಸುತ್ತವೆ. ಈಗಿರುವವು ರಾಷ್ಟ್ರೀಯತೆಯ ದಿನಗಳು ಸಾವಿರ ವರುಷಗಳಿಗೂ ಹೆಚ್ಚಿನ ಕಾಲ ಹಿಂದೂ ಮುಸ್ಲಿಮರು ಸಹಬಾಳ್ವೆ ನಡೆಸಿದ್ದಾರೆ. ಅವರೆಲ್ಲ ಒಂದೇ ರಾಷ್ಟ್ರದವರು, ಮಾತನಾಡುವ ಭಾಷೆಯೂ ಒಂದೆ. ಅವರೆಲ್ಲರಿಗೂ ಸಮಾನವಾದ ಜನಾಂಗೀಯ ಮೂಲರೂಪವಿದೆ. ಸಮಾನ ಗುರಿಗಾಗಿ ಶ್ರಮಿಸುತ್ತಿದ್ದಾರೆ. ಪರಸ್ಪರ ಹೊಂದಾಣಿಕೆ, ಸ್ಪಂದನ ಪ್ರತಿಸ್ಪಂದನವಿದೆ. ಇಬ್ಬರನ್ನೂ ವಿಭಜಿಸುವುದಕ್ಕೆ ಅದೇನೂ ಅಲ್‌ಸ್ಟರ್ ಮೇಲಂಗಿಯಂತಲ್ಲ. ಆದರೆ ನಮ್ಮ ಮೇಲಂಗಿ ಸರ್ವವ್ಯಾಪಿ. ನಾವು ಎರಡೇ ರಾಜ್ಯಗಳನ್ನು ಹೊಂದಿದ್ದರೂ ಅಲ್ಲಿ ಅಲ್ಪ ಸಂಖ್ಯಾತರ ವ್ಯಾಪ್ತಿ ಹೆಚ್ಚಿರುತ್ತದೆ. ಅವರು ದಮನಕ್ಕೊಳಗಾದವರೋ ಅಲ್ಲವೊ, ಏನೇ ಆಗಲಿ ರಕ್ಷಣೆಗಾಗಿ ಗಡಿಯತ್ತ ಕಣ್ನೋಟ ಬೀರುತ್ತಾರೆ. ಇದು ಖಂಡ ಖಂಡಗಳ ನಡುವೆ ಬಿರುಕು ಭಿನ್ನಾಭಿಪ್ರಾಯಕ್ಕೆ ಮೂಲಕಾರಣವಾಗಿ ಪರಿಣಮಿಸುತ್ತದೆ. ಮತ್ತು ಸಂಘಟಿತ ಭಾರತದ ರಚನೆಯಾಗುವವರೆಗೆ ಈ ತಾಕಲಾಟ ಮುಂದುವರೆಯುತ್ತದೆ. ಸಮಗ್ರ ಜನತಾ ರಾಷ್ಟ್ರವನ್ನು ಕಟ್ಟಲು, ಒಂದು ಬಲಶಾಲಿಯಾದ ಕೇಂದ್ರ ಸರ್ಕಾರದ ಅಗತ್ಯವಿದೆ ಎಂಬುದನ್ನು ನಾವು ಮನಗಂಡಿದ್ದೇವೆ. ನೈಜ ಯಾ ಕಾಲ್ಪನಿಕ ಕುಂದುಕೊರತೆ, ಅಸಮಾಧಾನದ ಕಾರಣದಿಂದಾಗಿ, ಕೇವಲ ಮೂರು

ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಕೇಂದ್ರ ಸರ್ಕಾರ ಸೀಮಿತಗೊಳ್ಳಬೇಕಿದೆ. ಈ ಮೂರು ವಿಷಯಗಳನ್ನು, ಸಂಪುಟ ಯೋಜನೆ ನಮ್ಮ ಮುಂದಿಟ್ಟಿದೆ. ಆದುದರಿಂದ, ಪ್ರಾಂತೀಯ ಸ್ವಾಯತ್ತತೆಯೊಡನೆ ನಾವು ಮುನ್ನಡೆಯುತ್ತಿದ್ದೇವೆ. ಶೇಷ (ಉಳಿಕೆ) ಅಧಿಕಾರಗಳು ಸ್ವಯಂ ಪ್ರಾಂತಗಳಿಂದಲೆ ಚಲಾಯಿಸಲ್ಪಡುತ್ತವೆ. ಬಿಹಾರ ಮತ್ತು ಪಶ್ಚಿಮ ಬಂಗಾಳದ ಘಟನೆಗಳು, ನಮಗೊಂದು ಬಲಶಾಲಿ ಕೇಂದ್ರದ ತುರ್ತು ಅಗತ್ಯವಿದೆ ಎಂಬುದನ್ನು ಸೂಚಿಸುತ್ತವೆ. ಈ ತೊಂದರೆಗಳಿದ್ದಾಗ್ಯೂ, ಒಂದು ಬಹುರಾಷ್ಟ್ರೀಯ, ರಾಜ್ಯವನ್ನು ಅಭಿವೃದ್ಧಿ ಪಡಿಸುವ ಉದ್ದೇಶ ಹೊಂದಿದ್ದೇವೆ. ಇದು ವಿಭಿನ್ನ ಸಾಂಸ್ಕೃತಿಕ ವೈವಿಧ್ಯದ ಅಭಿವ್ಯಕ್ತಿಗೆ ಸಾಕಷ್ಟು ಸಾಧ್ಯತೆಗಳನ್ನು ಒದಗಿಸುತ್ತದೆ.

ಗುಂಪುಗಾರಿಕೆ ನಮಗೆ ಸಾಕಷ್ಟು ತೊಂದರೆ ಕೊಟ್ಟಿದೆ. ಆದರೆ ಇದರಲ್ಲಿ ಎರಡು ಅತ್ಯಾವಶ್ಯಕ ಅಂಶಗಳು ಅಡಕವಾಗಿವೆ. ಇವು ಸಂಪುಟ ಯೋಜನೆಯ ಅವಿಭಾಜ್ಯ ಭಾಗಗಳು. ಒಂದು ಕೇಂದ್ರ ಒಕ್ಕೂಟ ಮತ್ತು ಪ್ರಾಂತೀಯ ಮಟ್ಟದಲ್ಲಿ ಉಳಿಕೆ ಅಧಿಕಾರಗಳು : ಈ ಗುಂಪುಗಳಲ್ಲೂ, ದೊಡ್ಡ ಪ್ರಮಾಣದ ಅಲ್ಪ ಸಂಖ್ಯಾತರು ಇರುತ್ತಾರೆ. ಯಾರು ಅಲ್ಪಸಂಖ್ಯಾತರ ಹಕ್ಕೊತ್ತಾಯ ಮಾಡುತ್ತಾರೋ ಅವರು, ಗುಂಪಿನೊಳಗಣ ಇತರರಿಗೂ ಈ ಹಕ್ಕುಗಳು ಲಭ್ಯವಾಗಲು ಸಿದ್ಧರಿರಬೇಕು. ೧೯೪೬ರ ಜುಲೈ ೧೮ ರಂದು ಸರ್ ಸ್ಟಾಫರ್ಡ್ ಕ್ರಿಪ್ಸ್ ನೀಡಿದ ಹೇಳಿಕೆಯಲ್ಲಿ, ಅವರು ಹೀಗೆಂದರು :–

"ಹೇಗಾದರೂ ಒಂದಿಲ್ಲೊಂದು ಬಗೆ ನೂತನ ಪ್ರಾಂತೀಯ ಸಂವಿಧಾನಗಳನ್ನು ಕುತಂತ್ರದಿಂದ ರೂಪಿಸಿ, ಮುಂದೆ, ಪ್ರಾಂತ್ಯಗಳು ಹೊರ ಬರಲಾರದಂತೆ. ಮಾಡಲಾಗುವುದೆಂಬ ಭೀತಿ ವ್ಯಕ್ತವಾಯಿತು. ಅದು ಹೇಗೆ ಸಾಧ್ಯವೆಂಬುದು ನನಗೆ ತೋರುತ್ತಿಲ್ಲ. ಹಾಗೇನಾದರೂ ಆಗಲು ಪ್ರಯತ್ನಿಸಿದಲ್ಲಿ, ಈ ಯೋಜನೆಯ ಮೂಲ ತಿಳಿವಳಿಕೆಯೇ ಛಿದ್ರಗೊಂಡಂತೆ ಎಂಬುದು ಸ್ಪಷ್ಟವಾಗುತ್ತದೆ.".

ಸರ್ ಸ್ಟಾಫರ್ಡ್ ಕ್ರಿಪ್ಸ್ ಹೇಳಿದ್ದು ಅದುವೆ. ಮತದಾರನ ಮೇಲೆ ಪ್ರಭಾವ ಬೀರಿ, ಪ್ರಾಂತ್ಯಗಳಿಗೆ ಹೊರಬರಲು ಸಾಧ್ಯವಾಗದಂತೆ ಯತ್ನಿಸಿದರೆ ಸರ್ ಸ್ಟಾಫರ್ಡ್ ಅವರ ಮಾತಿನಲ್ಲೆ ಹೇಳುವುದಾದರೆ "ಸ್ಪಷ್ಟವಾಗಿ ಈ ಮೂಲ ತಿಳುವಳಿಕೆಯೇ ಬಿರುಕುಬಿಟ್ಟಂತೆ." ಏನಾದರೂ ನಾವು ಒಂದಾಗಿ ಬಾಳಬೇಕು. ಜನತೆ ಸಂವಿಧಾನಕ್ಕೆ ಬದ್ಧರಾಗಿರಬೇಕು. ಹಾಗಿರುವಾಗ ಜನತೆಯ ಮನೋಭಿಲಾಷೆಗೆ ವಿರುದ್ಧವಾಗಿ ಯಾವುದೇ ಸಂವಿಧಾನವನ್ನು ಹೇರಲಾಗದು.

ಈ ನಿರ್ಣಯದಲ್ಲಿ ಮೂಲಭೂತ ಹಕ್ಕುಗಳ ಬಗ್ಗೆಯೂ ಒಂದು ಉಲ್ಲೇಖವಿದೆ. ಅಂತಹ ಒಂದು ಸಮಾಜೋ ಆರ್ಥಿಕ ಕ್ರಾಂತಿ ತರಲು ನಾವು ಪ್ರಯತ್ನಿಸುತ್ತಿದ್ದೇವೆ. ಆದುದರಿಂದ ನಾವು ಪ್ರಕೃತ ಸ್ಥಿತಿಗತಿಗಳನ್ನು ಪುನರ್ ರೂಪಿಸುವುದು ಅಗತ್ಯ. ಜೊತೆಗೆ ಮಾನವ ಚೇತನ ಸ್ವಾತಂತ್ರ್ಯವನ್ನು ನಾವು ಸಂರಕ್ಷಿಸುವುದು ಅನಿವಾರ್ಯವಾಗುತ್ತದೆ. ಸ್ವಾತಂತ್ರ್ಯ ಪ್ರಜ್ಞೆಯನ್ನು ಹುಟ್ಟುಹಾಕದೆ, ಕೇವಲ ಸ್ವಾತಂತ್ರ್ಯದ ವಾತಾವರಣವನ್ನು ಸೃಷ್ಟಿಸಿ ಪ್ರಯೋಜನವಿಲ್ಲ. ಮನುಷ್ಯನ ಮನೋವಿಕಸನಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು; ಬುದ್ಧಿ ಪರಿಪಕ್ವವಾಗಬೇಕು; ಬೆಳೆದು ತನ್ನ ಸಮಗ್ರ ಔನ್ನತ್ಯ ಕಾಣಬೇಕು. ಮನುಷ್ಯನ ಪ್ರಗತಿ ಅವನ ಬೌದ್ಧಿಕ ವ್ಯವಹಾರಗಳಿಗೆ ಅನುಗುಣವಾಗಿರುತ್ತದೆ. ಕ್ವಚಿತ್ ಸೃಷ್ಟಿ ಕ್ವಚಿತ್ ನಾಶ; ನಿರಂತರ ಪರಿವರ್ತನಶೀಲ. ರಾಜ್ಯದ ಅಧಿಕಾರದ ಸೀಮೋಲ್ಲಂಘನೆಯಿಂದ ಮಾನವ ಚೇತನ ಸ್ವಾತಂತ್ರ್ಯವನ್ನು ಸಂರಕ್ಷಿಸಬೇಕು. ಆರ್ಥಿಕ ಸ್ಥಿತಿಗಳ ಸುಧಾರಣೆಗೆ ಆಡಳಿತ ನಿಯಂತ್ರಣ ಅಗತ್ಯ. ಆದರೆ ಅದು ಮಾನವ ಚೇತನಕ್ಕೆ ಬಾಧಕವಾಗಬಾರದು.

ಮಹಾಚಾರಿತ್ರಿಕ ನಾಟಕದಲ್ಲಿ ನಾವಿಂದು ಪಾತ್ರಧಾರಿಗಳು; ನಾವು ಅದರಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದೇವೆ. ಆದುದರಿಂದ ಅದರ ವಿಸ್ತೃತ ಸಮಪಾತಳಿಗಳು ನಮಗೆ ಗೋಚರಿಸುತ್ತಿಲ್ಲ. ನಾವಿಂದು ರಚಿಸುತ್ತಿರುವ ಈ ನಿರ್ಣಯ, ನಮ್ಮ ಜನತೆಗೆ ಮಾಡುತ್ತಿರುವ ಪ್ರಮಾಣದ ರೂಪದಲ್ಲಿದೆ. ಜೊತೆಗೆ ಇದು ನಾಗರಿಕ ಜಗತ್ತಿನೊಡನೆ ಮಾಡಿಕೊಂಡ ಒಡಂಬಡಿಕೆ.

ಈ ಸಭೆಯ ಪ್ರಕಾರ್ಯಗಳಿಗೆ ಮಾನ್ಯತೆಯುಂಟೆ ಎಂಬ ಪ್ರಶ್ನೆಯನ್ನು ಮಾನ್ಯ ಚರ್ಚಿಲ್, ಮಾನ್ಯ ಅಲೆಕ್ಸಾಂಡರ್ ಅವರ ಮುಂದೆ ಒಡ್ಡಿದ್ದರು. ಮಾನ್ಯ ಅಲೆಕ್ಸಾಂಡರ್ ಹೀಗೆಂದು ಉತ್ತರಿಸಿದರು:

"ಸಂವಿಧಾನ ರಚನಾ ಸಭೆಯ ಚುನಾವಣಾ ಯೋಜನೆ ಕಾರ್ಯಗತಗೊಂಡಿತು ಎಂಬುದನ್ನು ಪುನರುಚ್ಚರಿಸುತ್ತೇನೆ. ಮುಸ್ಲಿಂ ಲೀಗ್, ಅದರ ಸಮಾವೇಶದಲ್ಲಿ ಹಾಜರಿರಲಿಲ್ಲವಾದರೆ, ವಿಧ್ಯುಕ್ತವಾಗಿ ಆಯ್ಕೆಗೊಂಡ, ಸಭೆಯನ್ನು ತನ್ನ ಕಾರ್ಯ ಕಲಾಪಗಳಲ್ಲಿ ತೊಡಗದಂತೆ ತಡೆಯಲಾದೀತೆ?"

ಮಾನ್ಯ ಅಲೆಕ್ಸಾಂಡರ್ ಹೇಳಿದ್ದು ಇದುವೆ. ವರ್ಗೀಕರಣದ ವ್ಯಾಖ್ಯಾನದ ಬಗ್ಗೆ ಒಂದಿಷ್ಟು ಸಮಸ್ಯೆ ಇತ್ತು. ಕಾಂಗ್ರೆಸ್ ಪಕ್ಷ ತನ್ನ ಇಚ್ಛೆಗೆ ವಿರುದ್ಧವಾಗಿ ಮಹಾಪ್ರಭುಗಳ ಸರ್ಕಾರದ ವ್ಯಾಖ್ಯಾನವನ್ನು ಒಪ್ಪಿಕೊಂಡಿತು. ಉಳಿದಿರುವ ಕೇವಲ ಎರಡೇ ಖಂಡಗಳು ಅಲ್ಪ ಸಂಖ್ಯಾತರ ಹಿತರಕ್ಷಣೆಗೆ ಹಾಗೂ ಅಧಿಕಾರ ಹಸ್ತಾಂತರದಿಂದ ಉದ್ಭವಿಸುವ ಸಮಸ್ಯೆಗಳ ನಿವಾರಣೆಗೆ ಸಮರ್ಪಕವಾಗುತ್ತದೆ. ಸಂವಿಧಾನ ರಚನಾ ಸಭೆ ಕಾನೂನುಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯಾಡಳಿತ ಪತ್ರದ ಪ್ರತಿಯೊಂದು ಭಾಗವನ್ನೂ ಸಂಪೂರ್ಣವಾಗಿ ಅಂಗೀಕರಿಸಲಾಗಿದೆ; ಹಾಗೂ ನಾವು ಅಲ್ಪ ಸಂಖ್ಯಾತರ ರಕ್ಷಣೆಗಾಗಿ ರಚಿಸುವ ನೀತಿ ನಿಯಮಗಳು ಸಮರ್ಪಕವಾಗಿದ್ದರೆ, ಅವುಗಳ ಸಮರ್ಪಕತೆ ಬ್ರಿಟಿಷರಿಗಾಗಲಿ, ನಮ್ಮವರಿಗೇ ಆಗಲಿ ತೃಪ್ತಿ ತರದಿರಬಹುದು– ಪರಂತು ನಾಗರಿಕ ಜಗತ್ತಿನ ಸಾಕ್ಷಿಪ್ರಜ್ಞೆಯಾಗಬಹುದು,

ಏನೇ ಆಗಲಿ ಅವುಗಳಿಗೆ ಚಾಲನೆ ನೀಡುವ ಅಧಿಕಾರ ಬ್ರಿಟಿಷರ ಕೈಯಲ್ಲಿ ಅವರು ಈ ಸಂವಿಧಾನಕ್ಕೆ ಕಾನೂನಿನ ಚೈತನ್ಯ ತುಂಬಬೇಕು. ಅವರು ಹಾಗೆ ಮಾಡಲೇಬೇಕಾದುದು ಅನಿವಾರ್ಯ. ಈ ಎಲ್ಲ ಷರತ್ತುಗಳ ಪೂರೈಕೆಯಾದ ನಂತರವೂ ಭಾರತ ಸ್ವಾತಂತ್ರ್ಯ ಪ್ರದಾನವನ್ನು ಮುಂದೂಡಲು, ಏನಾದರೂ ಕುಂಟುನೆಪ ಸೃಷ್ಟಿಯಾದಲ್ಲಿ, ಅದು ಇತಿಹಾಸಕ್ಕೆಸಗಿದ ಅತ್ಯಂತ ಸಂವೇದನಾರಹಿತ ವಿದ್ರೋಹ, ಬದಲಿಗೆ, ಸಂವಿಧಾನ ರಚನಾಸಭೆ ಸಂಪುಟ ಯೋಜನೆಯ ಆಧಾರದ ಮೇಲೆ ಪ್ರಾರಂಭಿಸಿದೆಯೆಂದೂ, ಮೇ ೧೬ರ ರಾಜ್ಯಪತ್ರದ ಪ್ರತಿಯೊಂದು ವಾಕ್ಯಖಂಡವನ್ನು ಅವರು ಒಪ್ಪಿರುವರೆಂದೂ, ಅಲ್ಪ ಸಂಖ್ಯಾತರಿಗೆ ಎಲ್ಲ ರಕ್ಷಣಾ ಸೌಲಭ್ಯಗಳನ್ನು ಒದಗಿಸಿತು. ಹಾಗಾಗಿ ಅವುಗಳನ್ನು ಕಾರ್ಯರೂಪಕ್ಕೆ ತರಬೇಕೆಂದೂ ಬ್ರಿಟಿಷರು ವಾದಿಸಿದರೆ ಅದು ಇತಿಹಾಸದ ಮಹತ್ವದ ಸಾಧನೆಯಾಗುತ್ತದೆ. ಅದು ಎರಡು ರಾಷ್ಟ್ರಗಳ ಮಹಾ ಜನತೆಯ ಬೆಂಬಲವನ್ನು ಪಡೆಯಲಿದೆ.

ಮಾರ್ಚ್ ೧೫ರಂದು ಪ್ರಧಾನಿಯಾಗಿ ಮಾನ್ಯ ಅಟ್ಲಿ ಅವರು ಮಾಡಿದ ಭಾಷಣದಲ್ಲೆ, ಹೀಗೆಂದಿದ್ದಾರೆ:–

ವಿಧ್ವಂಸಕಾರಿ ಸಮರದಲ್ಲಿ ನಲುಗಿ ನಶಿಸಿದ ಏಷ್ಯಾ ಬೃಹತ್ ಖಂಡದಲ್ಲಿ, ಪ್ರಜಾಪ್ರಭುತ್ವ ತತ್ತ್ವಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನದಲ್ಲಿರುವ ಒಂದು ರಾಷ್ಟ್ರ ನಮ್ಮ ಮುಂದಿದೆ. ರಾಜಕೀಯವಾಗಿ ಬಲಿಷ್ಠ ಭಾರತ, ಏಷ್ಯಾ ಖಂಡಕ್ಕೆ "ದಾರಿದೀಪವಾಗುವುದೆಂದು ನನ್ನಲ್ಲೆ ನಾನು ಯಾವಾಗಲೂ ಭಾವಿಸಿದುದುಂಟು."

ಅಲ್ಲ, ಅದು ಜಗತ್ತಿಗೇ ದಾರಿದೀಪ. ಪ್ರಕ್ಷುಬ್ಧ ಮನಸ್ಸಿಗೆ ದೂರದೃಷ್ಟಿಯನ್ನು ಕರುಣಿಸುತ್ತದೆ. ಭಯಾವಿಷ್ಟ ಮನಸ್ಸಿಗೆ ಉನ್ನತಿಯ ದಿಗ್ದರ್ಶನ ಮಾಡಿಸುತ್ತದೆ.

ಇಲ್ಲಿ ಎರಡು ಆಯ್ಕೆಗಳುಂಟು. ಸಂವಿಧಾನ ರಚನಾ ಸಭೆಯನ್ನು ಅಂಗೀಕರಿಸಿ ಅದರ ನಿರ್ಣಯಗಳನ್ನು ಸ್ವೀಕರಿಸಿ. ಅದರಲ್ಲಿ ಅಲ್ಪ ಸಂಖ್ಯಾತರ ರಕ್ಷಣೆಗಾಗಿ ಸಮರ್ಪಕ ಕ್ರಮಗಳಿವೆಯೇ ಇಲ್ಲವೇ ಎಂಬುದನ್ನು ಆವಿಷ್ಕರಿಸಿ, ಅವೆಲ್ಲವೂ ಲಭ್ಯವಾಗುವುದಾದರೆ ಅವಕ್ಕೆ ಕಾನೂನಿನ ಬಲ ನೀಡಿ ಸಹಕಾರ ನಿಮ್ಮ ಪಾಲಿಗೆ ದಕ್ಕುತ್ತದೆ. ಇಷ್ಟೆಲ್ಲ ನಿಬಂಧನೆಗಳ ಪೂರೈಕೆಯಾದ ಮೇಲೂ, ಇನ್ನೂ ಕಿಂಚಿತ್ ನ್ಯೂನತೆ ಇದೆ ಎಂದು ವಾದಿಸಲು ಯತ್ನಿಸಿದರೆ, ಇಡೀ ರಾಜ್ಯಪತ್ರದ ಭಾವವನ್ನು ತಿರಸ್ಕರಿಸಿದವರು ಬ್ರಿಟಿಷರು ಎಂಬ ನಿರ್ಧಾರಕ್ಕೆ ಬರಬೇಕಾಗುತ್ತದೆ. ವರ್ತಮಾನದ ಜಾಗತಿಕ ಸ್ಥಿತಿಯಲ್ಲಿ ಮುಂದೊದಗಬಹುದಾದ ಕರಾಳ ಸಾಧ್ಯತೆಗಳನ್ನು ನಾನು ಆಲೋಚಿಸಲಾರೆ.

**ಮಾನ್ಯ ಎಂ.ವಿ. ಗಾಡ್ಗಿಲ್** (ಬಾಂಬೆ : ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಪಂಡಿತ ಜವಾಹರ್ ಲಾಲ್ ಅವರು ಮುಂದಿಟ್ಟ ನಿರ್ಣಯವನ್ನು ಬೆಂಬಲಿಸಲು ನನಗೆ ಅತೀವ ಸಂತೋಷವಾಗುತ್ತದೆ. ಈ ಬಗ್ಗೆ ನಡೆದ ಚರ್ಚೆಯಲ್ಲಿ ಈ ಲಕ್ಷಣದ ನಿರ್ಣಯವನ್ನು ಅಂಗೀಕರಿಸಲು, ಸಂವಿಧಾನ ರಚನಾಸಭೆ ಸಮರ್ಥವಲ್ಲ ಎಂಬ ಮಾತು ಕೇಳಿಬಂತು. ಈ ಸಂದರ್ಭದಲ್ಲಿ ಮಿ। ಅಟ್ಲಿ ಅವರ ಭಾಷಣವನ್ನು ಉಲ್ಲೇಖವನ್ನು ಒಳಗೊಂಡ ಪ್ರಾರಂಭಿಕ ಕಂಡಿಕೆಯನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತೇನೆ. ಅದರಲ್ಲಿ ಅವರು ಹೀಗೆಂದಿದ್ದಾರೆ:

"ಭಾರತವು ತನ್ನ ಸ್ವಾತಂತ್ರ್ಯವನ್ನು ತ್ವರಿತವಾಗಿಯೂ, ಸಂಪೂರ್ಣವಾಗಿಯೂ ಪಡೆಯುವಂತಾಗಲು, ಸರ್ವ ಪ್ರಯತ್ನಗಳನ್ನು ಮಾಡಲೋಸುಗ ನನ್ನ ಸಹೋದ್ಯೋಗಿಗಳು ಭಾರತಕ್ಕೆ ತೆರಳಲಿದ್ದಾರೆ. ಪ್ರಸ್ತುತ ಸರಕಾರಕ್ಕೆ ಬದಲಾಗಿ ಬೇರಾವ ಸರ್ಕಾರವನ್ನು ಪ್ರತಿಯೋಜಿಸಬೇಕೆಂಬುದು ಭಾರತ ನಿರ್ಧರಿಸಬೇಕಾದ ವಿಷಯ. ಆದರೆ ಆ ನಿರ್ಧಾರ ಕೈಗೂಡಲು ಅಗತ್ಯವಿರುವ ವ್ಯವಸ್ಥೆಯನ್ನು ತರುವಲ್ಲಿ, ಆ ರಾಷ್ಟ್ರಕ್ಕೆ ನೆರವಾಗುವುದು ನಮ್ಮ ಅಭಿಲಾಷೆ."

ಮಾನ್ಯರೆ, ಈ ಸಭೆ ಇಲ್ಲಿ ಸಮಾವೇಶಗೊಂಡಿರುವುದು ಕೇವಲ ಪರ್ಯಾಯ ಸರ್ಕಾರದ ಬಗ್ಗೆ ಆಲೋಚಿಸಲು ಮಾತ್ರವಲ್ಲದೆ, ಅದರ ಒಳ ಅಂಶ ಏನಿರಬೇಕೆಂದು, ನಿರ್ಧರಿಸುವುದಕ್ಕೂ ಸಹ ಎಂಬುದು ಸ್ಪಷ್ಟವಾಗಿದೆ. ನಾವಿಲ್ಲಿ ಸೇರಿರುವುದು ಬರೆ ಕರಡು ತಯಾರಕರಾಗಿಯೋ ಅಥವಾ ತರ್ಕದ ಕಸಾಯಿಗೋ ಅಲ್ಲ. ನಾವಿಲ್ಲಿ ವಾಸ್ತವವಾಗಿ ಸಮಾವೇಶಗೊಂಡಿರುವುದು ಕ್ರಿಯಾಲೋಚಕರಾಗಿ, ಸಂವಿಧಾನ ರಚನಾ ಸಭೆಯ ಸಮಾವೇಶ, ಸ್ವಾತಂತ್ರ್ಯದ ಹೋರಾಟದ ಪ್ರಗತಿಪಥದಲ್ಲಿ, ಒಂದು ಹೆಜ್ಜೆ. ಇದು ಅಂತಿಮ ಸಮರದ ಉಪಸಂಹಾರವಾಗುವುದು ಸಾಧ್ಯ. ಅಥವಾ ಪೀಳಿಗೆಯಿಂದ ಪೀಳಿಗೆಗೆ ಕಳೆದ ಎಪ್ಪತ್ತೈದು ವರುಷಗಳಿಗೂ ಮಿಗಿಲಾಗಿ ನಡೆಸುತ್ತ ಬಂದಿರುವ ಕಾಳಗದ ಸರಣಿಯಲ್ಲಿ ಇದು ಅಂತಿಮ ಕಾಳಗವಾಗಿ, ಸಮರಕ್ಕೆ ಇತಿಶ್ರೀ ಹಾಕಬಹುದು. ನಮ್ಮ ಪೂರ್ವಿಕರು ನಮ್ಮನ್ನು ಹೋರಾಟದ ಉತ್ತರಾಧಿಕಾರಿಗಳನ್ನಾಗಿ ಮಾಡಿದ್ದಾರೆ. ಈ ಪೀಳಿಗೆ ಅಂತ್ಯಗೊಂಡಂತೆ, ವಾರಸು ಇಲ್ಲವಾಗುತ್ತದೆ. ಅದು ಹೋರಾಟದ ಉತ್ತರಾಧಿಕಾರವಾಗುವುದಿಲ್ಲ. ಅದು ಕ್ರಿಯಾಶೀಲ ಪ್ರಯತ್ನವಾಗುತ್ತದೆ. ಅದರಿಂದಲೇ ಭಾರತೀಯ ಸಮಾಜದ ಭವಿಷ್ಯದ ನಿರ್ಮಾಣವಾಗಲಿದೆ.

ಮಾನ್ಯರೆ,

ನಮ್ಮ ಗುರಿಗೊಂದು ವ್ಯಾಖ್ಯೆಯ ಸ್ಪಷ್ಟ ಅಗತ್ಯವಿದೆ. ಹಿಂದೆ ಈ ಹೋರಾಟಕ್ಕೆ ಕೊಡುಗೆ ನೀಡಿದವಾದರೂ ಪ್ರಾಧ್ಯಾಪಕರಾಗಲಿ, ಬ್ರಿಟಿನ್ ರಾಜ / ರಾಣಿಯ ಆಪ್ತಸಮಾಲೋಚಕರ (ಪ್ರಿವಿ ಕೌನ್ಸಿಲರ್ಸ್) ಸಭೆಯ ಸದಸ್ಯರಾಗಿರಲಿಲ್ಲ. ಆದರೆ ಅವರೆಲ್ಲರೂ ಬಡತನ, ಅಜ್ಞಾನದಲ್ಲಿ ಬೇಯುತ್ತಿದ್ದವರು. ಅವರು, ತಾವೇತಕ್ಕೆ ಇದುವರೆಗೆ ಹೋರಾಡುತ್ತಿದ್ದೆವೆಂಬುದನ್ನು ತಿಳಿಯಬೇಕು. ಒಂದೇ ನಾನಿಲ್ಲಿ ರಚಿಸುವ ಸಂವಿಧಾನ ಬ್ರಿಟಿಷ್ ಸರ್ಕಾರಕ್ಕೆ ಒಪ್ಪಿಗೆಯಾಗದಿದ್ದಲ್ಲಿ, ಅಂತಿಮವಾಗಿ ಯಾರ ಗುರಿಸಾಧನೆಗೆ ಹೋರಾಡಲು ಅವರಿಗೆ ಕರೆ ನೀಡಲಾಗುತ್ತಿದೆ ಎಂಬುದು ಅವರಿಗೆ ಮನವರಿಕೆಯಾಗಬೇಕು. ಮಾನ್ಯರೆ, ಈ ನಿರ್ಣಯದಲ್ಲಿ, ನಾನು ಕಂಡಂತೆ, ಸ್ವಾತಂತ್ರ್ಯ ಗಳಿಸಲು ಕಾತರನಾಗಿರುವ ಯಾರೇ ಒಬ್ಬ ವ್ಯಕ್ತಿ ಯಾ ಪಕ್ಷ ಆಕ್ಷೇಪಿಸುವಂತಹುದೇನಿಲ್ಲ. ಮೊಟ್ಟ ಮೊದಲಿಗೆ, ಮೊದಲನೆ ಧ್ಯೇಯ, ಭಾರತೀಯ ಸರ್ವತಂತ್ರ ಸ್ವತಂತ್ರ ಸಾರ್ವಭೌಮ ಗಣರಾಜ್ಯ, ಎಂದು ವ್ಯಾಖ್ಯಾನಿಸಲಾಗಿದೆ. ನನಗೆ ತಿಳಿದಮಟ್ಟಿಗೆ, ಕಳೆದ ೬ ವರುಷಗಳಿಂದ ಮುಸ್ಲಿಂ ಲೀಗ್‌ನಿಂದ ಅಂಗೀಕೃತವಾಗುತ್ತಿರುವ ವಿವಿಧ ನಿರ್ಣಯಗಳಲ್ಲಿ, ಅವರು ಪ್ರಜಾಪ್ರಭುತ್ವ ಸ್ವಾತಂತ್ರ್ಯದ ಪರವಾಗಿರುವುದಾಗಿ ಯಾವಾಗಲೂ ಹೇಳುತ್ತ ಬಂದಿದ್ದಾರೆ. ವಾಸ್ತವವಾಗಿ ಇಸ್ಲಾಂ ರಾಷ್ಟ್ರಗಳಲ್ಲಿ ಮುಂಚೂಣಿಯಲ್ಲಿರುವ ತುರ್ಕಿ, ಒಂದು ಗಣರಾಜ್ಯ. ಆದುದರಿಂದ ಮುಸ್ಲಿಂ ಲೀಗ್ ಆಕ್ಷೇಪಿಸಬಹುದಾದ ಅಂಶ ಇದರಲ್ಲಿ ಯಾವುದೂ ಇಲ್ಲ. ಆದುದರಿಂದ ಈ ನಿರ್ಣಯದಲ್ಲಿ ಇರುವ ಯೋಗ್ಯತೆಗಳೇನೆಂಬುದನ್ನು ನಾವು ಪರಾಮರ್ಶಿಸೋಣ. ಒಂದು

ವೇಳೆ ಆಕ್ಷೇಪಣಾರ್ಹ ಅಂಶಗಳೇನಾದರೂ ಇದ್ದಲ್ಲಿ, ಆಕ್ಷೇಪಣೆ ಎತ್ತಿದವರು ಇಲ್ಲಿ ಹಾಜರಿರುವಾಗ, ಅದನ್ನು ಖಂಡಿತ ಸರಿಪಡಿಸೋಣ. ಆದರೆ ನನ್ನ ಗಮನಕ್ಕೆ ಬಂದಿರುವಂತೆ, ಈ ನಿರ್ಣಯದಲ್ಲಿ ಯಾರೊಬ್ಬರೇ ಆಗಲಿ ಆಕ್ಷೇಪಿಸುವಂತಹ ಒಂದು ಪದಗುಚ್ಛವಾಗಲಿ ಖಂಡವಾಗಲಿ ಇಲ್ಲ.

ಈ ನಿರ್ಣಯದ ಹಲವಾರು ಉಪಕಂಡಿಕೆಗಳನ್ನು ಅವಲೋಕಿಸಿದಾಗ, ಇಲ್ಲಿ ಪ್ರಸ್ತಾಪಿಸಿರುವ ಪ್ರಮುಖ ಅಂಶವೆಂದರೆ, ಒಂದು ರಾಜ್ಯ ಅಥವಾ ಒಂದು ಒಕ್ಕೂಟವಷ್ಟೆ. ಅದೇ ವೇಳೆ ಪ್ರತಿಯೊಂದು ಪ್ರಾಂತ್ಯದ ಪುರೋಭಿವೃದ್ಧಿಗೆ ವಿಸ್ತರಣೆಗೆ ಇಲ್ಲಿ ಸಾಕಷ್ಟು ಆಸ್ಪದವಿದೆ. ಸಾಮಾನ್ಯ ಹೊಣೆಗಾರಿಕೆಗೆ ಬದ್ಧವಾಗಿ ಒಂದು ಪ್ರಾಂತ್ಯದ ತನ್ನ ಅಂತಿಮ ಗುರಿ ತಪ್ಪಲು ತಡೆಯೊಡ್ಡುವ ಯಾವುದೇ ನಿರ್ಬಂಧವಿಲ್ಲ. ಅದೇ ವೇಳೆ ಉನ್ನತ ರಾಜನೈತಿಕತೆ ರೂಪುಗೊಳ್ಳಲು, ಉನ್ನತ ಪಾಂಡಿತ್ಯಕ್ಕೆ ಉತ್ತಮ ವಾಣಿಜ್ಯ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಇಲ್ಲಿ ಅಪಾರ ಅವಕಾಶವಿದೆ ಎಂಬುದನ್ನು ನಾನು ತಿಳಿಸಲು ಬಯಸುತ್ತೇನೆ. ಹೆಚ್ಚಿನ ರಾಜಕೀಯ ಸುಭದ್ರತೆ ಇರುವುದೆಂಬುದು ಅದರ ಅರ್ಥ. ಆರ್ಥಿಕ ರಂಗದಲ್ಲಿ ಒಕ್ಕೂಟಕ್ಕೆ, ಅಧಿಕ ಪ್ರಮಾಣದ ಕರಾರು ಮಾಡಿಕೊಳ್ಳುವ ಷರತ್ತುಗಳನ್ನು ವಿಧಿಸುವ ಅಧಿಕಾರವಿರುತ್ತದೆ. ಯಾವುದೇ ದೃಷ್ಟಿಕೋನದಿಂದ ಪರಿಭಾವಿಸಿದರೂ, ಪ್ರತಿಯೊಂದು ಪ್ರಾಂತ್ಯ ಕೂಡ ಪ್ರತಿಯೊಂದು ಅಂಗರಾಜ್ಯವೂ, ಈ ಒಕ್ಕೂಟದ ಒಂದು ಘಟಕವಾಗಲು, ಭಾರತ ಎಂಬ ಹೆಸರಿನಲ್ಲಿ, ಎಲ್ಲ ಭೌಗೋಳಿಕ ಘಟಕಗಳನ್ನು ತನ್ನ ತೆಕ್ಕೆಯೊಳಗೆ ತಂದುಕೊಳ್ಳುವ ಒಂದು ಏಕೈಕ ರಾಜ್ಯದ ಅಗತ್ಯವಿದೆ. ಹಾಗೆ ಒಗ್ಗೂಡುವುದರಿಂದ, ಅವರು ಕಳೆದುಕೊಳ್ಳುವುದೇನಿಲ್ಲ; ಲಾಭವೇ ಹೆಚ್ಚೆಂಬುದು ನನ್ನ ವಿನಮ್ರ ಅನಿಸಿಕೆ.

ಮಾನ್ಯರೆ, ಅಂತಹ ಏಕೀಕರಣದಿಂದ ಮೂಲಭೂತ ಹಕ್ಕುಗಳಿಗೆ ಅವಕಾಶವಿದೆ. ಈ ಹಕ್ಕುಗಳು ಶ್ರೀಸಾಮಾನ್ಯನಿಗೆ ಅತಿಪ್ರಿಯವಾದವು. ಅದು ಸಂಘ ಸ್ವಾತಂತ್ರ್ಯವನ್ನು ನೀಡುತ್ತದೆ. ಅಂತೆಯೇ ಪ್ರತಿಯೊಂದು ರಾಷ್ಟ್ರದ ಸಂವಿಧಾನದಲ್ಲಿ, ವ್ಯಕ್ತವಾಗುವಂತಹ ವಾಕ್ ಸ್ವಾತಂತ್ರ್ಯ ಮತ್ತು ಇತರ ಎಲ್ಲ ಬಗೆಯ ನಾಗರಿಕ ಸ್ವಾತಂತ್ರ್ಯವನ್ನು ಒದಗಿಸುತ್ತದೆ. ಇಲ್ಲಿ ಅನೇಕ ಅಂಶಗಳು ಸ್ಪಷ್ಟವಾಗಿಲ್ಲ. ಹಾಗಾಗಿ, ಕೆಲವೊಂದು ಆಕ್ಷೇಪಣೆಗಳನ್ನು ಎತ್ತಲಾಯಿತು. ಸ್ಪಷ್ಟವಾಗಿ ಹೇಳಬೇಕೆಂದರೆ ಈ ತೆರನಾದ ನಿರ್ಣಯದಲ್ಲಿ ಎಲ್ಲ ಅಂಶಗಳನ್ನು ಅಡಕಗೊಳಿಸುವುದು ಸಾಧ್ಯವಿಲ್ಲ. ಮೂಲಭೂತ ಹಕ್ಕುಗಳ ಮುಖ್ಯ ಭಾಗಗಳನ್ನು ನೋಡುವುದಾದರೆ, ಆರ್ಥಿಕ ಸ್ವಾತಂತ್ರ್ಯವನ್ನು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಇದು ಅಂತಿಮವಾಗಿ ರಾಷ್ಟ್ರದ ಸಾಮಾಜಿಕ ಸ್ವಾಮ್ಯಕ್ಕೆ, ನಮ್ಮ ಉತ್ಪಾದನೆಯನ್ನು ಒಳಪಡಿಸಿದಾಗಲೆ ಸಾಧ್ಯವಾಗುವುದು. ಒಂದು ಸೀಮಿತ ವ್ಯಾಪ್ತಿಯೊಳಗೆ ಖಾಸಗಿ ಉದ್ಯಮ ಅಸ್ತಿತ್ವದಲ್ಲಿ ಇರಬಹುದು. ಆದುದರಿಂದ, ರಾಜ್ಯದ ಸ್ವಾಮ್ಯದಲ್ಲಿ, ಉತ್ಪಾದನಾ ಸಾಧನಗಳು ಇದ್ದಾಗಷ್ಟೇ ಆರ್ಥಿಕ ಸ್ವಾಮ್ಯ ಲಭ್ಯವಾಗುವುದು. ಈಗ ಈ ವಿಷಯಗಳೆಲ್ಲ ಅಸ್ಪಷ್ಟವಾಗಿ ತೋರಬಹುದು. ಆದರೆ ಸಂವಿಧಾನದೊಳಗೆ, ಈ ತತ್ವಗಳೆಲ್ಲ ಅಡಕಗೊಂಡಾಗ ವಿಷಯ ಸ್ಪಷ್ಟವಾಗುವುದೆಂಬ ವಿಶ್ವಾಸ ನನಗಿದೆ.

ಮಾನ್ಯರೆ, ಇದೊಂದು ರೀತಿಯಲ್ಲಿ ಕಟ್ಟಡ ಇದ್ದಂತೆ. ಈಗ ನಾವಿರುವ ಈ ಸಭಾಂಗಣದಂತೆ, ಇಡೀ ನಿರ್ಣಯದಲ್ಲಿ ಒಂದು ಐಕ್ಯತೆ ಇದೆ. ಕೆಳಗಣ ಕಮಾನುಗಳ ಮೇಲೆ ಗೋಪುರ ನಿಂತಿದೆ. ಹಾಗೆ, ಉದ್ದೇಶಿತ ಸ್ವಾತಂತ್ರ್ಯ ವಿವಿಧ ತತ್ತ್ವಗಳ ನೆಲೆಗಟ್ಟಿನ ಮೇಲೆ ನಿಂತಿದೆ. ಈ ತತ್ತ್ವಗಳನ್ನೂ ನಿರ್ಣಯದಲ್ಲಿ ಅಳವಡಿಸಲಾಗಿದೆ. ಅವು ಸಂವಿಧಾನದ ಸಮತೋಲನವನ್ನು ಕಾಯ್ದುಕೊಂಡಿವೆ. ನಾನು ಈ ಹಿಂದೆ ತಿಳಿಸಿದಂತೆ, ಈ ನಿರ್ಣಯ ಅತ್ಯಾವಶ್ಯಕ ಪಥ್ಯವಾಗಿ, ಅದು ಅಂತಿಮವಾಗಿ ರಚಿತವಾಗುವ ವಿವರಪೂರ್ಣ ಸಂವಿಧಾನದ ಒಂದು ಭಾಗವಾಗದಿರಬಹುದು. ಆದರೆ, ಅದೊಂದು ಚೈತನ್ಯಪೂರ್ಣ ಪ್ರಸ್ತಾವನೆಯಂತೆ, ಎಲ್ಲ ಭಾಗಗಳನ್ನೂ ಆವರಿಸಿಕೊಳ್ಳುತ್ತದೆ. ಎಲ್ಲ ಖಂಡಕ್ಕೂ ಅನುಸೂಚಿಗಳಿಗೂ ವ್ಯಾಪಿಸುತ್ತದೆ. ಹಾಗಾಗಿ ಅದು ಅವಶ್ಯಕವಾಗುತ್ತದೆ. ಅದೊಂದು ಸಂಚಲನ ಶಕ್ತಿಯಾಗಿ, ಸಂವಿಧಾನದ ಸವಿವರ ರಚನೆಯ ಹೊಣೆ ಹೊತ್ತವರಿಗೆ ಬೋಧಕವಾಗಿ ಒದಗುತ್ತದೆ. ವಾಸ್ತವವಾಗಿ ಇದೇ ಬುನಾದಿ. ಜನತೆಗೆ ತನ್ನ ಬೇಡಿಕೆಯೇನೆಂಬುದೂ, ತಾನು ಪಡೆಯಲಿರುವುದು

ಏನೆಂಬುದೂ ಅರಿವಾಗುತ್ತದೆ. ತನ್ನ ಆಡಳಿತಕ್ಕೆ ಒಳಪಡುವ ನಾಗರಿಕನಿಂದ ನಿರೀಕ್ಷಿಸುವ ವಿಧೇಯತೆಯನ್ನು ಈ ಸಂವಿಧಾನ ಮನವರಿಕೆ ಮಾಡಿಕೊಡುತ್ತದೆ; ಪ್ರೇರೇಪಿಸುತ್ತದೆ. ಏಕೆಂದರೆ ಅಂತಹ ಸಂವಿಧಾನವನ್ನು ಪ್ರತಿಪಾದಿಸುವ, ಸಮರ್ಥಿಸುವ ನಾಗರಿಕನಿಗೆ, ತನ್ನ ಪ್ರಾಣಾರ್ಪಣೆಗೂ ಸಿದ್ಧವಿರುವಂತೆ ಸ್ಫೂರ್ತಿ ನೀಡದೆ ಯಾವುದೇ ಸಂವಿಧಾನ, ಅವನಿಂದ ವಿಧೇಯತೆಯನ್ನು ನಿರೀಕ್ಷಿಸಲಾಗದು, ಅಗತ್ಯ ಸಂವೇದನೆಯನ್ನು ಪಡೆಯಲಾಗದು. ಇದು, ನಾವಿಲ್ಲಿ ಕೇವಲ ಸಂವಿಧಾನದ ಕರಡು ತಯಾರಕರಾಗಿ ಸೇರಿರುವ ಸಭೆಯಲ್ಲ. ಇದೊಂದು ಕ್ರಿಯಾಶೀಲ ಮಂಡಳಿ. ಜನತೆಯ ಹೋರಾಟದ ಕಾರಣದಿಂದಲೆ ನಾವಿಲ್ಲಿ ಸಭೆ ಸೇರಿದ್ದೇವೆ; ನಾವು ಸಂವಿಧಾನವನ್ನು ರಚಿಸಬೇಕಾಗಿರುವುದು ಆ ಕಾರಣಕ್ಕಾಗಿಯೇ. ಈಗ, ಸಂವಿಧಾನ ರಚನೆಗೊಂಡು, ಅದು ಅಂಗೀಕೃತವಾಗದಿದ್ದರೆ, ಅದರ ಮಂಜೂರಾತಿಯ ಬಗ್ಗೆ ಜನರು ಪ್ರಶ್ನಿಸುತ್ತಾರೆ. ಇದಕ್ಕೆ ಎರಡು ಬಗೆಯ ಮಂಜೂರಾತಿ ದೊರೆಯುವುದೆಂಬುದು ನನ್ನ ವಿನಮ್ರ ಉತ್ತರ; ಒಂದು ನೈತಿಕ ಮಂಜೂರಾತಿ, ಮತ್ತೊಂದು ಭೌತಿಕ. ಸಂವಿಧಾನವು ನ್ಯಾಯಸಮ್ಮತವಾಗಿಯೂ, ಯೋಗ್ಯವಾಗಿಯೂ ಮತ್ತು ಉಚಿತವಾಗಿಯೂ ಇದ್ದರೆ, ಅದಕ್ಕೆ ಮೊದಲನೆಯ ವರ್ಗದ ಮಂಜೂರಾತಿ ದೊರೆಯುತ್ತದೆ. ಅದು ಪ್ರತಿಯೋರ್ವ ನ್ಯಾಯನಿರೀಕ್ಷಕನಿಗೂ ಸಮ್ಮತವಾಗಿದ್ದಲ್ಲಿ ಮಾತ್ರ. ಎರಡನೆಯದು, ಜನತೆಯ ದೃಢನಿಶ್ಚಯದ ಮಂಜೂರಾತಿ. ತಮ್ಮ ಆಯ್ಕೆಯ ಸರ್ಕಾರವನ್ನು ತಾವು ಪಡೆಯಬೇಕೆಂಬ ನಿಚ್ಚಳ ನಿರ್ಧಾರ. ಯಾವುದೇ ಅಧಿಕಾರದ ಮುಖೇನ ಈಡೇರದಿದ್ದಲ್ಲಿ, ಆ ನಿರ್ಧಾರ ಕೇವಲ ಶೈಕ್ಷಣಿಕ ಆಸಕ್ತಿಯನ್ನು ಮಾತ್ರ ಕೆರಳಿಸದೆ, ಕೃತಿರೂಪಕ್ಕಿಳಿಯುತ್ತದೆ. ಆ ರೂಪಗಳೇನೆಂಬುದನ್ನು ಇಲ್ಲಿ ವಿಶದೀಕರಿಸಬಹುದು. ನನ್ನ ನಿವೇದನೆ ಇಷ್ಟೆ: ಸಂವಿಧಾನ, ಖಂಡದಿಂದ ಖಂಡಕ್ಕೆ, ಪ್ರಕರಣದಿಂದ ಪ್ರಕರಣಕ್ಕೆ ಮುಂದುವರೆಯುತ್ತಿದ್ದಂತೆ ನಾವು ಕ್ರಮಿಸುತ್ತಿರುವ ಹಾದಿಯಲ್ಲಿ ಹೆಜ್ಜೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕ್ರಾಂತಿ ಬೇಡುವ ಮನೋಭಾವಕ್ಕೆ, ಇಂಬುಗೊಡುವ ವಾತಾವರಣದ ಸೃಷ್ಟಿಯಾಗುತ್ತದೆಂದು ನಾನು ಭಾವಿಸುತ್ತೇನೆ. ಭಾವನೆಗಳು ದಟ್ಟೈಸಿದಂತೆ, ಅವು ಸಾಕಾರಗೊಳ್ಳುತ್ತವೆ.

ನಾವು ಖಂಡದಿಂದ ಖಂಡಕ್ಕೆ, ಕಲಮಿನಿಂದ ಕಲಮಿಗೆ ಮುಂದುವರೆದಂತೆ, ಈ ರಾಷ್ಟ್ರದಲ್ಲಿ ಬ್ರಿಟಿಷ್ ಅಧಿಕಾರ ಸೊರಗುತ್ತ ಹೋಗುತ್ತದೆ. ಕೊನೆಯ ಅನುಸೂಚಿಯನ್ನು ತಲುಪುತ್ತಿದ್ದಂತೆ, ಬ್ರಿಟಿಷ್ ಸರ್ಕಾರ ಸಂಪೂರ್ಣ ಸೊರಗಿರುತ್ತೆಂಬುದು ನನ್ನ ಅನಿಸಿಕೆ. ಉಳಿದದ್ದು, ಬ್ರಿಟಿಷ್ ಸರ್ಕಾರದ ಔಪಚಾರಿಕ ರದ್ದತಿ. ಈಗಾಗಲೆ ವಿದ್ಯಮಾನಗಳು ಸ್ಪಷ್ಟವಾಗುತ್ತಿಲ್ಲವೇ? ಅಸಾಧಾರಣ ಕಾನೂನುಗಳು ಮತ್ತು ಅಧ್ಯಾದೇಶಗಳಿಂದ, ದಯೆ ದಾಕ್ಷಿಣ್ಯವಿಲ್ಲದೆ ದಮನಕಾರಿ ಆಡಳಿತ ನಡೆಸುತ್ತಿದ್ದ ಬ್ರಿಟಿಷರ ಭಯಾನಕ ಚಿತ್ರಗಳು ಕಣ್ಮರೆಯಾಗುತ್ತಿಲ್ಲವೆ? ಆ ದೃಶ್ಯಗಳೆಲ್ಲಿ? ಅವೆಲ್ಲ ಕಾಣೆಯಾಗಿವೆ. ಅಧ್ಯಕ್ಷರೆ, ಅಲ್ಲಿ ಭಿತ್ತಿಯ ಮೇಲಣ ಸ್ಪಷ್ಟ ಚಿತ್ರಗಳು ಕಾಣುತ್ತಿವೆ. ಬ್ರಿಟಿಷರು ದೇಶವನ್ನು ಬಿಟ್ಟು ಹೊರಡಲು ತೀವ್ರ ಕಾತುರರಾಗಿದ್ದಾರೆಂದು ಸೂಚಿಸಲಾಗಿದೆ. ಬ್ರಿಟಿಷರು ದೇಶದಿಂದ ನಿರ್ಗಮಿಸಬೇಕೆಂದು, ಭಾರತೀಯರು ಆಗ್ರಹಪಡಿಸಿದ ದಿನ, ಬ್ರಿಟಿಷರಿಗೆ ಅತ್ಯಮೋಘ ದಿನವಾಗಿ ಪರಿಣಮಿಸುತ್ತೆಂದು ಹಲವಾರು ವರುಷಗಳ ಹಿಂದೆ ಮೆಕಾಲೆ ಬರೆದಿದ್ದರು. ಬಹಳ ಹಿಂದಿನಿಂದಲೂ, ನಾವು ಅದನ್ನೆ ಒತ್ತಾಯಿಸುತ್ತಿದ್ದೇವೆ. ಮೆಕಾಲೆಯವರ ಹೇಳಿಕೆಯಲ್ಲದೆ, ಕ್ಲೈರ್ ಮತ್ತು ಹೇಸ್ಟಿಂಗ್ ಅವರ ಹುಸಿನುಡಿಗಳು, ಸುಳ್ಳು ನೆವಗಳ ಸ್ಪಷ್ಟನೆಯಿಂದ ಪ್ರಾರಂಭವಾದ ಬ್ರಿಟಿಷ್ ಸಾಮ್ರಾಜ್ಯ ಮುರಿದ ಆಶ್ವಾಸನೆಗಳ ಸಮರ್ಥನೆಯ ಮೇಲೆ ನಿರುಪಾಧಿಕವಾಗಿ ನಡೆಯುತ್ತ ಬಂತು. ಈಗಲೂ ಸಮಜಾಯಿಷಿ ನೀಡುತ್ತ ವ್ಯರ್ಥಾಲಾಪದಿಂದ ಅದೇ ಧಾಟಿಯಲ್ಲಿ ಮುನ್ನಡೆಯುತ್ತಿದೆ. ಅದು ಕೊನೆಗಾಣಬೇಕು. ಈ ಸಮರ್ಥನೆಗಳು, ವಿವರಣೆಗಳು, ಇನ್ನೊಂದು ದಿನವೂ ಈ ಸರ್ಕಾರವನ್ನು ಉಳಿಸಲಾರವು. ವಿದೇಶಿ ಆಳ್ವಿಕೆಯಲ್ಲಿ ಸುದೀರ್ಘಕಾಲ ನೊಂದು ನಲುಗಿರುವ ಜನತೆಯ ಕೈಗೆ, ಅಧಿಕಾರವನ್ನು ಹಸ್ತಾಂತರಿಸುವ ಒಂದು ಪ್ರಾಮಾಣಿಕ ಕೆಲಸ ನಡೆಯಬೇಕು. ಅವರು ತಾವಾಗಿಯೇ ಈ ಕ್ರಿಯೆಯಲ್ಲಿ ತೊಡಗುವ ದಿನ ಬರಬೇಕು. ಹಸ್ತಾಂತರ ಪ್ರಕ್ರಿಯೆ ಶಾಂತವಾಗಿ ನಡೆದರೆ ಒಳಿತು. ಅಲ್ಲವಾದರೆ ನಾನು ಹೇಳುವುದಿಷ್ಟೆ; ಹೋರಾಟ ಅನಿವಾರ್ಯವಾದರೆ, ಹೋರಾಟ

ನಡೆಯಲೇಬೇಕೆಂಬುದು ಇತಿಹಾಸದ ಬೇಡಿಕೆಯಾಗಿದ್ದರೆ; ನಾವು ಕಾದಾಡಲು ಬಯಸುವುದಿಲ್ಲ. ಒಂದು ವೇಳೆ ಕಾದಾಡಲೇಬೇಕಿದ್ದರೆ, ನಮ್ಮಲ್ಲಿ ಜನಬಲ, ಸಾಧನಬಲವಿದ್ದು, ಮನೋಭೂಮಿಕೆಯೂ ಸಜ್ಜುಗೊಂಡಿದೆ. ಆ ಸಂದರ್ಭದಲ್ಲಿ ಮುಂದೆ ನಡೆಯುವುದೇನು? ಬ್ರಿಟಿಷರು ನಿರ್ಗಮಿಸುತ್ತಾರೆ. ಷೇರುಪತ್ರಗಳು, ವಿನಿಮಯಪತ್ರಗಳು, ಅಂಗಡಿಗಳು, ಕಾರ್ಯಾಗಾರಗಳು ಯಾವೊಂದನ್ನೂ ಅವರು ಹಿಂದೆ ಬಿಟ್ಟು ತೆರಳಲಾರರು; ಸೌಹಾರ್ದ, ಸವಿನೆನಪು ಎಲ್ಲವನ್ನೂ ಹೊತ್ತೊಯ್ಯುವರು. ಅವರ ವ್ಯಾಪಾರ, ಅದರೊಟ್ಟಿಗೆ ಅವರ ಧ್ವಜ ಎಲ್ಲವೂ ಮರೆಯಾಗುತ್ತವೆ. ಲಾರ್ಡ್ ಮೆಕಾಲೆ ಹೇಳಿದಂತೆ, ಆದರ್ಶಕ್ಕೆ ಕಟ್ಟುಬೀಳುವುದೇ ಅಥವಾ ಇನ್ನೂ ಅಧಿಕಾರಕ್ಕೆ ಜೋತುಬಿದ್ದು, ನಾನು ಈಗ ಕಲ್ಪಿಸಿಕೊಳ್ಳುತ್ತಿರುವ ಪರಿಣಾಮವನ್ನು ಎದುರುಗೊಳ್ಳುವುದೇ ಎಂಬುದನ್ನು ನಿರ್ಧರಿಸುವುದು ಅವರಿಗೇ ಬಿಟ್ಟಿದ್ದು.

ಮಾನ್ಯ ಅಧ್ಯಕ್ಷರೆ, ನಮ್ಮ ಬೇಕು ಬೇಡಗಳನ್ನು ಸಾಧ್ಯವಾದಷ್ಟು ಸ್ಪಷ್ಟವಾಗಿ ತಿಳಿಸುವುದು ಅನಿವಾರ್ಯವೆಂಬ ಹಂತ ತಲುಪಿದ್ದೇವೆ. ಕೆಲವು ಅಪರಿಹಾರ್ಯ ಸಮಸ್ಯೆಗಳ ಬಗ್ಗೆ ನಮಗೆ ತಿಳಿಸಲಾಗಿದೆ. ಉದಾ:– ಅಲ್ಪ ಸಂಖ್ಯಾತರ ಪ್ರಶ್ನೆ. ನಾನು ಒಂದು ಅಂಶವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ಮಾನ್ಯರೆ, ಈ ಪ್ರಶ್ನೆ ವಿದೇಶ ಅಧಿಕಾರದ ಸೃಷ್ಟಿ. ಅಲಹಾಬಾದಿನಿಂದಾಚೆ, ಗಂಗಾ ಜಮುನಾ ಸಂಗಮವನ್ನು ಯಾರೂ ತಡೆದಿಲ್ಲ. (ಘೋಷಾನುಮೋದನೆ) ಏಕೆಂದರೆ, ಮೂರು ನದಿಗಳು ಗಂಗಾ–ಜಮುನಾ–ಸರಸ್ವತಿ ಮೂರು ನದಿಗಳು ಸಂಗಮಿಸುತ್ತವೆ. ನಂತರ ಮುಂದೆ ಹರಿಯುವ ನೀರನ್ನು ಇದು ಗಂಗಾ, ಇದು ಯಮುನಾ ಎಂದು ಭೇದವೆಣಿಸಲಾಗದು. ನಮ್ಮ ಎರಡೂ ಸಮುದಾಯಗಳಲ್ಲಿ ವಿವೇಕ ಅಂಕುರಿಸುವ ಕಾಲ ಬಂದಿದೆ. ಇದರ ಫಲಶ್ರುತಿಯಲ್ಲಿ ಅವು ಉನ್ನತ ಸ್ತರದಲ್ಲಿ, ಒಗ್ಗೂಡಿ. ಉನ್ನತ ಮಟ್ಟದ ಸಂಶ್ಲೇಷಣೆ ಏರ್ಪಡುತ್ತದೆ. ಇದರಿಂದ ಜೀವನದ ಹಾದಿಯಲ್ಲಿ, ವ್ಯಕ್ತಿತ್ವ ರೂಪುಗೊಳ್ಳುವ ನಿಟ್ಟಿನಲ್ಲಿ ಉತ್ತುಂಗಕ್ಕೇರುವಲ್ಲಿ ಪ್ರತಿಯೊಬ್ಬನಿಗೂ ಅವಕಾಶ ದೊರೆಯುತ್ತದೆ. ಮುಂದಿನ ದಿನಗಳಲ್ಲಿ, ನಮ್ಮ ಬಯಕೆ ಈಡೇರುವುದಿಲ್ಲವೆಂದು ಹೇಳಲಾಗುತ್ತಿದೆ. ಅದು ಅಲ್ಪ ಕಾಲಾವಧಿಯ ಇಲ್ಲವೆ ದೀರ್ಘ ಕಾಲಾವಧಿಯ ಹೋರಾಟವಿರಬಹುದು. ಅದು ಮುಖ್ಯವಲ್ಲ. ಯಾವುದಾದರೂ ಆಗಲಿ, ನಾವು ಬಯಸದಿದ್ದರೂ, ಪ್ರಾರ್ಥಿಸದಿದ್ದರೂ, ಅದು ಯಾದೃಚ್ಛಿಕವಾಗಿ ಒದಗಿ ಬಂದರೆ, ನಮ್ಮಲ್ಲಿ ಪ್ರತಿಯೊಬ್ಬರೂ ಅದಕ್ಕೆ ಸಿದ್ಧರಿರಬೇಕು. ಮಾನ್ಯರೆ, ಈ ಸಭೆಯಲ್ಲಿ ನೆರೆದ ಪ್ರತಿನಿಧಿಗಳ ಹೆಗಲಿನ ಮೇಲೆ ಅತಿ ಹೆಚ್ಚಿನ ಐತಿಹಾಸಿಕ ಕರ್ತವ್ಯವನ್ನು ಹೊರಿಸಲಾಗಿದೆ. ಅವರೆಲ್ಲರೂ ಸನ್ನಿವೇಶಕ್ಕೆ ತಕ್ಕಂತೆ ಸ್ಪಂದಿಸಿ, ಈ ಪ್ರಾಚೀನ ರಾಷ್ಟ್ರವನ್ನು ತನ್ನ ಬಿಡುಗಡೆಯ ಗುರಿಯತ್ತ ತಲುಪಿಸುವರೆಂಬ ಭರವಸೆ ನನಗಿದೆ. ಮನುಷ್ಯರ ಸಿರಿಸಂಪದಕ್ಕಿಂತ ಭಿನ್ನವಾಗಿ ಅವರ ವ್ಯಕ್ತಿತ್ವಕ್ಕೆ ಜನರು ಬೆಲೆ ಕೊಡುತ್ತಾರೆ. ಅಂತಹ ಸಮಾಜಕ್ಕೆ ಬೆಲೆ ಕೊಡುತ್ತಾರೆ. ನಡತೆಯನ್ನು ಆಧರಿಸಿ ಮನುಷ್ಯನ ಮೌಲ್ಯಮಾಪನ ನಡೆಯತ್ತದೆ ವಿನಾ ನಾಣ್ಯವನ್ನಲ್ಲ. ಸ್ತ್ರೀ ಪುರುಷರು ತಲೆ ಎತ್ತಿ ನಡೆಯಬಹುದು. ಬಿಂಕ ಬಿಗುಮಾನ, ಗರ್ವ, ಪೂರ್ವಾಗ್ರಹಗಳೆಲ್ಲಕ್ಕೂ ಉಸಿರುಗಟ್ಟುತ್ತದೆ. ಅಲ್ಲಿ ಅವರು ಸಂತಸದಿಂದ ಬಾಳ್ವೆ ನಡೆಸುತ್ತಾರೆ. ಏಕೆಂದರೆ ಅವರೆಲ್ಲರೂ ಸಮಾನರಾಗಿ ಜೀವನ ಸಾಗಿಸುತ್ತಾರೆ. ಮತ ಯಾ ಧರ್ಮ ಸಮರಾಂಗಣವಾಗಲಾರದು. ಏಕೆಂದರೆ ಎಲ್ಲರೂ ಪೂಜಿಸುವುದು ಒಂದೇ ದೇವತೆಯನ್ನೇ; ಅದು ಕರ್ತವ್ಯ ದೇವತೆಯನ್ನು. ಒಂದೆಡೆ ಇಲ್ಲಿಯ ಜನಾಂಗ, ಹಮ್ಮಿಗೆ ಹೇತುವಾಗಲಾರದು; ಮತ್ತೊಂದೆಡೆ ಹೀನಾಯಿಸಿ ಸಂವೇದನೆಗಳನ್ನು ಘಾಸಿಗೊಳಿಸಲಾರದು. ಕಾರಣ, ಇಲ್ಲಿ ಎಲ್ಲರ ಜನಾಂಗವೂ ಒಂದೇ ಎಂದರೆ ದುಡಿಯುವವರ ಜನಾಂಗ, ಪಂಥಗಳು, ಜನತೆಯನ್ನು ಛಿದ್ರಗೊಳಿಸಲಾರವು. ಏಕೆಂದರೆ ಅವರೆಲ್ಲರ ಪಂಥ ಒಂದೇ – ಅದು ಮಾನವ ಸೇವಾ ಪಂಥ. ಇಲ್ಲಿ ಸ್ವಾತಂತ್ರ್ಯ, ಸಂಮೃದ್ಧಿ ಎಲ್ಲವೂ ಲಭ್ಯ. ಏಕೆಂದರೆ ಇಲ್ಲಿ ಯಾರದೂ ಏಕಸ್ವಾಮ್ಯ ಎಂಬುದು ಇರುವುದಿಲ್ಲ. ಅಭಿವೃದ್ಧಿ ಯಾರೊಬ್ಬರ ಸ್ವತ್ತಾಗದೆ ಎಲ್ಲರ ಸ್ವತ್ತಾಗುತ್ತದೆ. ಎಲ್ಲರೂ ಸಮಾನರು; ಹಾಗಾಗಿ ಎಲ್ಲರೂ ಸುಖಿಗಳು. ಅದೊಂದು ಕಲ್ಪನೆಯಿರಬಹುದು; ಆದರೆ ಬದುಕಲು ಒಂದು ದೃಷ್ಟಿ ಎಂಬುದು ಇರಬೇಕು. ಬದುಕಿಗೊಂದು

ಗುರಿ ಇರಬೇಕು. ಧ್ಯೇಯವಿರಬೇಕು; ದೃಷ್ಟಿ ಇರಬೇಕು. ಇಲ್ಲವಾದಲ್ಲಿ ಅದು ಕಾಗೆಯ ಬದುಕಾಗುತ್ತದೆ.

'ಕಾಕೋ ಹಿ ಜೀವತಿ ಚಿರಾಯ ಬಲಿಂ ಚ ಭುಂಕ್ತೇ'.

ನಮಗೆ ಆ ಬದುಕು ಬೇಡ. ಅದೊಂದು ಕೇವಲ ದರ್ಶನವಾಗಿಯೇ ಇರಬಹುದು. ಕೊನೆಯದಾಗಿ ನಾನು ಹೇಳುವುದಿಷ್ಟೆ. ನಮ್ಮಲ್ಲಿ ಜೀವನ ದೃಷ್ಟಿ ಎಂಬುದೊಂದಿಲ್ಲವಾದರೆ, ನಾವು ಅಭಿವೃದ್ಧಿ ಹೊಂದಲಾರೆವು. ಜೀವನ ದೃಷ್ಟಿ ಇಲ್ಲದ ಜನಾಂಗ ನಶಿಸಿಹೋಗುತ್ತದೆ. (ಘೋಷಾನುಮೋದನೆ)

ಗೌರವಾನ್ವಿತ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ : (ಸಂಯುಕ್ತ ಸಂಸ್ಥಾನಗಳು ಸಾಮಾನ್ಯ)

ಸನ್ಮಾನ್ಯ ಅಧ್ಯಕ್ಷರೆ,

ನನ್ನ ಪ್ರಾಂತ್ಯಕ್ಕೆ, ಪ್ರಾಂತೀಯ ಸ್ವಾಯತ್ತತೆಯ ಉದ್ಘಾಟನೆಯ ನಂತರ, ೧೯೩೭ರಲ್ಲಿ ಮೊದಲ ನಿರ್ಣಯವನ್ನು ಮುಂದಿಡುವ ಸುಯೋಗ ನನ್ನ ಪಾಲಿನದಾಯಿತು. ಅದರಲ್ಲಿ, ಸ್ವತಂತ್ರ ಭಾರತಕ್ಕೆ ಒಂದು ಸಂವಿಧಾನ ರಚಿಸುವ ಸಲುವಾಗಿ ಸಂವಿಧಾನ ರಚನಾಸಭೆಯ ಆಯೋಜನೆಯ ಬೇಡಿಕೆಯನ್ನು ಆಗ ಮುಂದಿಡಲಾಗಿತ್ತು. ಹತ್ತು ವರುಷಗಳ ನಂತರ ಆ ಸಭೆ ಇಲ್ಲಿ ಸಮಾವೇಶಗೊಳ್ಳುತ್ತಿದೆ. ಇದು ಸ್ವಾತಂತ್ರ್ಯದ ಹಾದಿಯಲ್ಲೊಂದು ಐತಿಹಾಸಿಕ ಮುನ್ನಡೆ. ಆದರೂ, ಮಾನ್ಯರೆ, ಸ್ವಾತಂತ್ರ್ಯವೆಂಬುದು ನಮ್ಮ ಹಿಡಿತಕ್ಕೆ ಸಿಗದೆ ಒಂದಷ್ಟು ದೂರ ಉಳಿದಿದೆ. ಸಾಮ್ರಾಜ್ಯಶಾಹಿ ತತ್ತ್ವ ಬಲು ಬೇಗನೆ ಸುಲಭವಾಗಿ ಸಾಯುವಂತಹುದಲ್ಲ. ಹಾಗೂ, ಅದು ತನ್ನ ಅವಸಾನಕಾಲ ಸನ್ನಿಹಿತವಾಗಿರುವುದೆಂದು ಗೊತ್ತಿದ್ದೂ, ಉಳಿವಿಗಾಗಿ ಹೋರಾಡುತ್ತದೆ. ಬರ್ಮಾ, ಇಂಡೋನೇಷ್ಯಾ, ಇಂಡೋಚೈನಾದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ನಮ್ಮ ಮುಂದಿವೆ. ಆ ದೇಶಗಳಲ್ಲಿ, ಜನತೆ ತನ್ನ ಬಿಡುಗಡೆಗಾಗಿ ಮಾಡುತ್ತಿರುವ ಅಪಾರ ಪ್ರಯತ್ನಗಳು ನಮ್ಮ ಕಣ್ಣ ಮುಂದಿವೆ. ಸಾಮ್ರಾಜ್ಯಶಾಹಿಯ ಹಿಡಿತ, ಅದೆಷ್ಟು ಭದ್ರವಾದ ಹಿಡಿತವೆಂದರೆ, ಜನರಿಗೆ, ಅದರಿಂದ ಕೊಡವಿಕೊಳ್ಳುವುದು, ದುಸ್ತರವಾಗುತ್ತದೆ.

ಪ್ರತಿಗಾಮಿ ಶಕ್ತಿಗಳು ಒಂದುಗೂಡುತ್ತಿವೆ. ರಕ್ಷಣೆಯ ನೆಪ ಒಡ್ಡಿ ಸಾಮ್ರಾಜ್ಯಶಾಹಿ ಅಧಿಕಾರಕ್ಕೆ ಆತುಕೊಂಡು, ಅದನ್ನು ಬಲಿಷ್ಠಗೊಳಿಸುವ ಪ್ರಯತ್ನ ನಡೆಯುತ್ತಿದೆ. ಸ್ಯಾನ್‌ಫ್ರಾನ್ಸಿಸ್ಕೋದ ದಾರುಣ ದೃಶ್ಯ ನಮ್ಮ ಕಣ್ಣೆದುರಿಗಿದೆ; ಆಗ ವಿಶ್ವಸಂಸ್ಥೆ ಹುಟ್ಟಿದ ಸಂದರ್ಭ. ಏಷ್ಯಾ ರಾಷ್ಟ್ರಗಳು ಅಲ್ಲಿ ಸಮಾವೇಶಗೊಂಡಿದ್ದರೂ. ಅವರ ಮೇಲೆ ಸಾಮ್ರಾಜ್ಯಶಾಹಿ ಶಕ್ತಿಗಳು ದಬಾವಣೆ ಮಾಡಿದುವು. ಹಾಗಾಗಿ ಸ್ವತಂತ್ರವಾಗಿ, ಮುಕ್ತವಾಗಿ ಮಾತನಾಡಲು ಅವರಿಗೆ ಸಾಧ್ಯವಾಗಲಿಲ್ಲ. ಆಯಾ ಸಾಮ್ರಾಜ್ಯಶಾಹಿ ಅಧಿಕಾರದ ಚುಕ್ಕಾಣಿ ಹಿಡಿದವರ ದನಿಗೆ ದನಿಗೂಡಿಸಿದರಷ್ಟೆ. ಅದರ ಪರಿಣಾಮ ಈಗಾಗಲೇ ಸುವ್ಯಕ್ತ ಪ್ರಣಾಳಿಕೆಯ ದಿಟ್ಟ ನುಡಿಗಳ ನಡುವೆಯೂ (ಅದು ಆಗ ಅಸ್ತಿತ್ವದಲ್ಲಿತ್ತು) ಅದರ ಅನುಷ್ಠಾನ ಸಾಧ್ಯವಾಗಲಿಲ್ಲ. ಏಕೆಂದರೆ ಅದಕ್ಕೆ ಬೆಂಬಲವಿಲ್ಲದೆ ಬಲಹೀನವಾಗಿತ್ತು. ಏಷ್ಯಾ ಜನತೆಯೂ ಮೌನ ಸಾಧಿಸಿತು. ಅದರ ಅನುಷ್ಠಾನದ ಮೇಲೆ ಒತ್ತಾಯ ಹೇರಲು ಸಾಧ್ಯವಾಗಲಿಲ್ಲ. ಇವತ್ತಿಗೂ ವಿಶ್ವಸಂಸ್ಥೆಯಲ್ಲಿ, ಏಷ್ಯಾ, ಯೂರೋಪ್‌ಗಿಂತ ಬಲು ಹಿಂದೆ ಉಳಿದಿದ್ದು, ಅದಕ್ಕೆ ಪ್ರಾತಿನಿಧಿಕ ಶಕ್ತಿ ಕುಂದಿದೆ. ಪ್ರಾಯಶಃ ಇತಿಹಾಸ ಮೊಟ್ಟಮೊದಲ ಬಾರಿಗೆ, ವಿಶ್ವಸಂಸ್ಥೆಯ ಕಳೆದ ಸಭೆಯಲ್ಲಿ ಇನ್ನೂ ಬಿಡುಗಡೆಯಾಗದ ಒಂದು ರಾಷ್ಟ್ರ ವಿಶ್ವಾದ್ಯಂತ ತುಳಿತಕ್ಕೊಳಗಾದವರ ಮತ್ತು ಆಶ್ರಿತ ಜನಸಮೂಹದ ಸ್ವಾತಂತ್ರ್ಯಕ್ಕಾಗಿ ದನಿ ಎತ್ತರಿಸಿತು. (ಘೋಷಾನುಮೋದನೆ). ವಿಶ್ವಸಂಸ್ಥೆಯ ಸಭೆ, ಇದನ್ನು ಮಾನ್ಯಮಾಡಿದ್ದು ಏಕೆಂದರೆ ಇಡೀ ಜಗತ್ತಿನ ಮುಂದಾಳತ್ವ ವಹಿಸುವ ತನ್ನ ಸಾಮರ್ಥ್ಯವನ್ನು ಒಳಗೊಂಡಿದೆ. ಸ್ವತಂತ್ರ ಭಾರತ, ಬರೆ ಏಷ್ಯಾಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿನ ಮುಂದಾಳತ್ವ ವಹಿಸುವ ಸಾಧ್ಯತೆ ಇದೆ. ಆದುದರಿಂದ ನಾವಿಲ್ಲಿ ನಮ್ಮ ರಾಷ್ಟ್ರದ ಮುಂದಿನ ಸಂವಿಧಾನ ರಚಿಸಲು ಸಿದ್ಧಪಡಿಸಲು, ಸಭೆ ಸೇರಿರುವಾಗ, ಅದು ಕೇವಲ ನಮ್ಮ ದೇಶಕ್ಕಾಗಿ ಮಾತ್ರವಲ್ಲದೆ, ನಮ್ಮತ್ತ ಮಾರ್ಗದರ್ಶನಕ್ಕೆಂದು ವೀಕ್ಷಿಸುತ್ತಿರುವ ಇಡೀ ಜಗತ್ತಿಗೆ ನಾವು ನೆರವೇರಿಸಬೇಕಾಗಿರುವ ಕರ್ತವ್ಯವೆಂಬುದನ್ನು ಮರೆಯಬಾರದು.

ನಮ್ಮ ಮುಂದಿರುವ ನಿರ್ಣಯ ವ್ಯಕ್ತಿಯ ಸಂಪೂರ್ಣ ಸ್ವಾತಂತ್ರ್ಯಕ್ಕೆ ಒತ್ತು ನೀಡುತ್ತದೆ. ಪ್ರತಿಯೊಂದು ಕಾನೂನು ಸಮ್ಮತವಾದ ಸಮೂಹಕ್ಕೆ ಸವಲತ್ತುಗಳ ಖಾತರಿ ನೀಡಲು ಸಮ್ಮತಿಸುತ್ತದೆ. ಆದುದರಿಂದ ಇದರಲ್ಲಿ ಅಲ್ಪ ಸಂಖ್ಯಾತರ ಹಿತ ಸಂರಕ್ಷಣೆಯ ಬಗ್ಗೆ ಭೀತಿ ಅಸಮರ್ಥನೀಯ. ಕೆಲವು ಅಲ್ಪ ಸಂಖ್ಯಾತ ಕೋಮುಗಳು ತಮ್ಮ ಕೆಲವು ವಿಶೇಷ ಆಸಕ್ತಿಗಳ ಭದ್ರತೆ ಬಯಸಿದರು, ಅವರು ಇಡೀ ಸಮಷ್ಟಿಯ ಒಂದು ಭಾಗವೆಂಬುದನ್ನು ಮರೆಯಬಾರದು. ದೊಡ್ಡ ಆಸಕ್ತಿಗಳನ್ನು ಧಕ್ಕೆ ಬಂದರೆ ಯಾವುದೇ ಅಲ್ಪ ಸಂಖ್ಯಾತ ವರ್ಗದ ವಾಸ್ತವಿಕ ಹಿತಸಂರಕ್ಷಣೆ ಅಸಂಭವ. ಸ್ವತಂತ್ರ ಭಾರತದಲ್ಲಿ ಅಲ್ಪ ಸಂಖ್ಯಾತರು ತಮ್ಮ ನೆರವಿಗಾಗಿ ಬಾಹ್ಯ ಶಕ್ತಿಗಳತ್ತ ಕಣ್ಣು ಹಾಯಿಸಿದರೆ, ಅವರನ್ನು ದೇಶದ್ರೋಹಿಗಳೆಂದು ಕರೆಯಲಾಗುವುದು. ನಾವು ಇತ್ತೀಚಿನ ವರುಷಗಳಲ್ಲಿ ಬರೆ ಹಕ್ಕುಗಳ ಬಗ್ಗೆ ಮಾತನಾಡಿದ್ದೇವೆ. ಬಾಧ್ಯತೆಗಳ ಬಗ್ಗೆ ಮಾತನಾಡಿದ್ದು ಅತ್ಯಲ್ಪ. ನಮ್ಮ ಸಮಸ್ಯೆಯತ್ತ ತಾಳುವ ಇಂತಹ ದೃಷ್ಟಿಕೋನ ದುರದೃಷ್ಟಕರ. ನಮ್ಮೆಲ್ಲರ ಮುಂದಿರುವ ಸಮಸ್ಯೆಗಳನ್ನು ಈ ನಿರ್ಣಯ ವಿವೇಚಿಸುತ್ತದೆ. ಅದರ ಪರಿಹಾರ ಸಾಧ್ಯತೆಗಷ್ಟೆ ನಾವು ಯಾವುದೇ ವಿಶೇಷ ಅಲ್ಪ ಸಂಖ್ಯಾತ ವರ್ಗದ ಹಕ್ಕನ್ನು ಕಾಯ್ದುಕೊಳ್ಳಬಹುದು. ಸ್ವತಂತ್ರ ಭಾರತದಲ್ಲಿ ಪ್ರತಿಯೊಬ್ಬನ ಮತ್ತು ಪ್ರತಿ ಸಮೂಹದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ನ್ಯಾಯವನ್ನು ಒದಗಿಸುವ ಖಾತರಿಯನ್ನು ಸ್ಪಷ್ಟವಾಗಿ ನಿರ್ಣಯ ಸೂಚಿಸುತ್ತದೆ; ಹಾಗೂ ನಮ್ಮ ಜೀವನ ಕ್ರಮದ ಮೂಲಕ, ಇತರ ರಾಷ್ಟ್ರಗಳ ಜೀವನ ವಿನ್ಯಾಸವನ್ನು ನಿರ್ಧರಿಸಲು ನೆರವಾಗಬೇಕು. ಹಾಗಾಗಿ, ನಮ್ಮ ವ್ಯವಸ್ಥೆಯೇ ಮೊದಲು ಸರಿಯಾಗಿರಬೇಕು. ಇದಕ್ಕೆ ನಮ್ಮ ರಾಷ್ಟ್ರದ ಸಹಕಾರ ಮತ್ತು ಶಕ್ತಿಯ ಅಗತ್ಯವಿದೆ.

ಹಲವಾರು ವರುಷಗಳಿಂದಲೂ ಏಷ್ಯಾದ ಎಲ್ಲ ರಾಷ್ಟ್ರಗಳ ಪೈಕಿ ಭಾರತವೊಂದೆ ಪ್ರಜಾಪ್ರಭುತ್ವದ ಪರವಾಗಿ ಎದೆ ಚಾಚಿ ನಿಂತಿರುವುದು. ನಮ್ಮೆಲ್ಲ ವೈವಿಧ್ಯಮಯ ಇತಿಹಾಸದುದ್ದಕ್ಕೂ, ಜನಮನದ ಗೆಲುವಿನ ಪರವಾಗಿ ಸೆಣಸುತ್ತ ಬಂದಿದ್ದೇವೆ. ಇತ್ತೀಚಿನ ದಿನಗಳಲ್ಲಿ, ಗಂಡಾಂತರದ ನಡುವೆ ಸಿಕ್ಕು ಮತ್ತು ಪ್ರಾಣವನ್ನು ಬಲಿ ಕೊಟ್ಟು, ಈ ರಾಷ್ಟ್ರದ ಜನರು, ಪ್ರಜಾಪ್ರಭುತ್ವದ ಆದರ್ಶಕ್ಕೆ ಕಟ್ಟುಬಿದ್ದಿದ್ದಾರೆ; ಮತ್ತು ನಾವಿಂದು, ನಮ್ಮ ಆದರ್ಶವನ್ನು ಕಾರ್ಯರೂಪಕ್ಕೆ ತರಬಲ್ಲೆವೆಂಬುದನ್ನು ಜಾಗತಿಕ ಮಟ್ಟದಲ್ಲಿ ತೋರಿಸಿಕೊಟ್ಟಿದ್ದೇವೆ. ಚರ್ಚೆಗೆ ಇಟ್ಟಿರುವ ನಿರ್ಣಯದಲ್ಲಿ ವಿಷಯವನ್ನು ಸ್ಪಷ್ಟವಾದ ಪದಗಳಲ್ಲಿ ನಿರೂಪಿಸಲಾಗಿದೆ. ಆದರೆ ನಾನಿಲ್ಲಿ ಎರಡು ಅಂಶಗಳನ್ನು ಸ್ಪಷ್ಟಪಡಿಸಲು ಇಷ್ಟಪಡಿಸುತ್ತೇನೆ.

ನಮ್ಮ ಮುಂದೆ ಎರಡು ಅಂಶಗಳಿವೆ – ಸಕಾರಾತ್ಮಕ ಮತ್ತು ನಕಾರಾತ್ಮಕ. ನಮ್ಮ ರಾಷ್ಟ್ರದ ಮೇಲೆ ಸಾಮ್ರಾಜ್ಯಶಾಹಿ ದಬ್ಬಾಳಿಕೆಯ ದಮನಕ್ಕೆ ಸಂಬಂಧಿಸಿದ ನಕಾರಾತ್ಮಕ ಅಂಶ. ಅದು ನಮ್ಮೆಲ್ಲರಿಗೂ ಸಮ್ಮತ. ಇದಕ್ಕಿಂತಲೂ ಹೆಚ್ಚಿನ ಪ್ರಾಮುಖ್ಯ ಪಡೆಯುವುದು, ಪ್ರಶ್ನೆಯ ಸಕಾರಾತ್ಮಕ ಮಗ್ಗಲು; ಭಾರತ, ತನ್ನ ಗುರಿ ಸಾಧಿಸಿ, ವಿಶ್ವಕ್ಕೆ ನಿರಂತರ ಶಾಂತಿ ಮತ್ತು ಅಭಿವೃದ್ಧಿಯ ಹಾದಿ ತೋರುವುದಕ್ಕೆ ಒದಗುವ ಒಂದು ಪ್ರಜಾಪ್ರಭುತ್ವ ಸಮಾಜವಾದಿ ರಾಜ್ಯವನ್ನು ನಿರ್ಮಾಣ ಮಾಡುವುದು. ಈ ಕಾಲಘಟ್ಟದಲ್ಲಿ, ನಮ್ಮ ರಾಷ್ಟ್ರದ ಇತಿಹಾಸದಲ್ಲಿ, ನಾವು ಯಾವುದೇ ಮಾತುಕತೆ ಅಥವಾ ಕೃತ್ಯದಲ್ಲಿ ತೊಡಗುವಾಗ, ಅದು ನಮ್ಮ ಧ್ಯೇಯವನ್ನು ಭ್ರಮನಿರಸನಗೊಳಿಸುವಂತಹ ಮಾತಾಗಲಿ, ಕ್ರಿಯೆಯಾಗಲಿ ಆಗಬಾರದು. ಅಥವಾ ಅತಾರ್ಕಿಕ ಭೀತಿಯನ್ನು ಬಡಿದೆಬ್ಬಿಸುವ ಕೆಲಸದಲ್ಲಿ ಉದ್ಯುಕ್ತರಾಗಬಾರದು. ಸವಾಲಿಗೆ ಎದೆಯೊಡ್ಡಿ ಸಮಸ್ಯೆಯ ಸಕಾರಾತ್ಮಕ ಮಗ್ಗಲಿನತ್ತ ಮುನ್ನಡೆಯ ಗುರಿ ಸಾಧಿಸಬೇಕು.

ಸಮರ ಮುಗಿಯುತ್ತಿದ್ದಂತೆ ಹಲವಾರು ಸಮಸ್ಯೆಗಳು ತಲೆಯೆತ್ತಿವೆ. ತಮ್ಮೊಳಗೆ ಕಷ್ಟಸಾಧ್ಯವೆನಿಸುವ ಸಮಸ್ಯೆಗಳು ಪರಿಸ್ಥಿತಿಯನ್ನು ಸಂಕೀರ್ಣಗೊಳಿಸಿವೆ. ಸಮಷ್ಟಿಯ ಆಸಕ್ತಿಯನ್ನು ಬದಿಗೊತ್ತಿ, ವೈಯಕ್ತಿಕ ಬೇಡಿಕೆಗಳನ್ನು ಮುಂದಿಡಲಾಗುತ್ತಿದೆ; ಇನ್ನೂ ಪರಾವಲಂಬಿಯಾಗಿರುವ (ಮತ್ತು ಪರಾಧೀನರಾಗಿರುವ) ಹಲವಾರು ರಾಷ್ಟ್ರಗಳು, ಬೆಂಬಲಕ್ಕಾಗಲಿ, ಪ್ರತಿಭಟನೆಗಾಗಲಿ ಸಾಮರ್ಥ್ಯವಿಲ್ಲದಾಗಿವೆ. ಆದರೆ ಪ್ರಸ್ತುತ ಸಮಸ್ಯೆಗಳಿಗೆ

ಪರಿಹಾರಕ್ಕಾಗಿ ಮಹತ್ತರ ಕೊಡುಗೆ ನೀಡುವ ಸಾಮರ್ಥ್ಯ ಪಡೆದಿದೆ. ಜೊತೆಗೆ ವಿಶ್ವಶಾಂತಿ ಹಾಗೂ ಭದ್ರತೆಯನ್ನೂ ಕಾಪಾಡುತ್ತಿದೆ. ಸ್ವತಂತ್ರ ಭಾರತ, ಪ್ರಗತಿಪರ ಶಕ್ತಿಗಳಿಗೆ ಬೆನ್ನೆಲುಬಾಗಿರುತ್ತದೆ. ಇದು ಒಂದು ಸಮಗ್ರ ವಿಶ್ವದ ಸಂರಚನೆಗಾಗಿ ಹಪಹಪಿಸುತ್ತಿರುವ ಕಾಲ. ಈ ಹಂತದಲ್ಲಿ ಪ್ರತ್ಯೇಕ ರಾಷ್ಟ್ರಗಳ ಮಾತೆತ್ತುವುದು ಸಾಧುವಲ್ಲ. ಒಂದು ಜಗತ್ತಿನ ಕಟ್ಟೋಣಕ್ಕಾಗಿ ನಾವು ಶ್ರಮಿಸಬೇಕು. ಆ ಸಮಗ್ರತೆಯಲ್ಲಿ ಭಾರತ ಯೋಗ್ಯ ಪಾಲುದಾರನಾಗಿರುತ್ತದೆ. ಭಾರತ, ತನ್ನ ಪಾರಂಪರಿಕ ವೈಭವದಿಂದಾಗಿ ಅಗ್ರಸ್ಥಾನವನ್ನು ಅಲಂಕರಿಸಿ, ಜಗತ್ತನ್ನು ಮುನ್ನಡೆಸುವ ಹಕ್ಕು ಪಡೆದಿದೆ. ಜೊತೆಗೆ ತನ್ನದೆ ಸಂಕೀರ್ಣ ಸಮಸ್ಯೆಗಳೊಡನೆ ಮುಖಾಮುಖಿಯಾಗುತ್ತಿದ್ದರೂ ಎದೆಗುಂದದೆ ತಲೆಯೆತ್ತಿ ನಿಂತಿದೆ; ಮೌಲ್ಯಗಳನ್ನು ಗೌರವಿಸಿದೆ; ತನ್ನ ಮುಂದಣ ಆದರ್ಶಗಳನ್ನು ಬಿಟ್ಟುಕೊಟ್ಟಿಲ್ಲ. ಭವಿಷ್ಯಕ್ಕೆ ನಮ್ಮ ಕೊಡುಗೆ ಎಂದರೆ, ರಾಜಕೀಯ ಹಾಗೂ ಸಾಮಾಜಿಕ ಅಸಂತೃಪ್ತಿಗಳನ್ನು ನಿವಾರಿಸುವುದು. ಆ ಗುರಿಯನ್ನು ಸ್ವತಂತ್ರ ಭಾರತದ ಸ್ಥಾಪನೆಯ ಮೂಲಕ ಸಾಧಿಸಿ, ಪ್ರಪಂಚದ ಇತರ ರಾಷ್ಟ್ರಗಳ ಬಿಡುಗಡೆಗಾಗಿ ತಹತಹಿಸುತ್ತಿರುವವರಿಗೆ ನೆರವಾಗಬೇಕು. ಏಷ್ಯಾ ಸಂಘಟಿತಗೊಳ್ಳದೆ, ಈ ಜಗತ್ತು ಸಮಗ್ರವಾಗಿ ಕಾರ್ಯನಿರ್ವಹಿಸಲಾಗದು. ಗುಂಪುಗುಂಪುಗಳಾಗಿ ವಿಭಜನೆ ಹೊಂದಿದ ಜಗತ್ತು ಅಭದ್ರ. ಒಬ್ಬ ಖ್ಯಾತ ಅಮೆರಿಕಾ ನಿವಾಸಿ ಹೀಗೆ ಹೇಳಿದ್ದಾನೆ: "ಒಂದು ರಾಷ್ಟ್ರ ಅರೆ ದಾಸ್ಯದಲ್ಲೂ ಅರೆ ಮುಕ್ತವಾಗಿಯೂ ಯಾವ ರಾಷ್ಟ್ರವೂ ಅಸ್ತಿತ್ವದಲ್ಲಿರಲಾರದು" ಇದು ಇಡೀ ಜಗತ್ತಿಗೆ ಅನ್ವಯಿಸುತ್ತದೆ; ಸ್ವಾತಂತ್ರ್ಯವನ್ನು ವಿಭಜಿಸಲಾಗದು. ಭಾರತ ಮೊದಲು ಸ್ವತಂತ್ರ ರಾಷ್ಟ್ರವಾಗಬೇಕು. ಸಾಮಾಜಿಕವಾಗಿ, ಆರ್ಥಿಕವಾಗಿ ಈ ನಿರ್ಣಯದಲ್ಲಿ, ಆ ಗುರಿಸಾಧನೆಯ ಪ್ರಯತ್ನವನ್ನು ವಿಶ್ಲೇಷಿಸಲಾಗಿದೆ. ಆ ನಿರ್ಣಯದಿಂದ, ನಮ್ಮ ಶಪಥ ಈಡೇರುತ್ತದೆ. ನಮ್ಮ ಸನಾತನ ಭೂಮಿಗೆ, ತನ್ನ ಮುಂದಣ ಸವಾಲಿನ ಅರಿವಿದೆ ಎಂದೂ, ನಮ್ಮ ಪ್ರಾಚೀನರ ಆದರ್ಶಗಳ ಪಾಲನೆಗೆ ಸಿದ್ಧವಿದ್ದು ತನ್ನನ್ನು ಮುಡಿಪಾಗಿಟ್ಟುದನ್ನು ತೋರಿಸಲು, ಈ ಸದನದ ಸದಸ್ಯರು ನಿರ್ಣಯವನ್ನು ಅಂಗೀಕರಿಸಲೆಂದು ಪ್ರಾರ್ಥಿಸುತ್ತೇವೆ.

**ಪ್ರೊ. ಎನ್.ಜಿ. ರಂಗ** (ಮದರಾಸು : ಸಾಮಾನ್ಯ)

ಸನ್ಮಾನ್ಯ ಅಧ್ಯಕ್ಷರೆ ಮತ್ತು ಸ್ನೇಹಿತರೆ,

ಈ ನಿರ್ಣಯಕ್ಕೆ ಬೆಂಬಲ ನೀಡಲು ಸಾಧ್ಯವಾದುದಕ್ಕೆ ನನಗೆ ಪರಮ ಸಂತೋಷವಾಗುತ್ತದೆ. ಇದರ ಅರ್ಥ ನನಗೆ ಈ ನಿರ್ಣಯ ಸಂಪೂರ್ಣ ತೃಪ್ತಿ ತಂದಿದೆ ಎಂದಲ್ಲ. ಆದರೆ ನಿರ್ಣಯದ ಬಗ್ಗೆ ಹೇಳುವುದಾದರೆ, ಒಮ್ಮೆ ನಮ್ಮ ನೂತನ ಸಂವಿಧಾನ ಅಸ್ತಿತ್ವಕ್ಕೆ ಬಂದಿತೆಂದರೆ, ಜನತೆ ನಿರೀಕ್ಷಿಸಬಹುದಾದ ಭವಿಷ್ಯವನ್ನು ಕುರಿತ ವ್ಯಾಪಕವಾದ, ಪರಿಣಾಮಕಾರಿಯಾದ ಮತ್ತು ಉದಾರ ಕಲ್ಪನೆಯಿಂದ ಕೂಡಿದ ತಿಳುವಳಿಕೆಯನ್ನು ನಮ್ಮ ಮುಂದಿಡುತ್ತದೆ. ಅದು ಕೇವಲ ಜನತೆಯ ಮುಂದೆ ಹಿರಿಯ ಆದರ್ಶಗಳನ್ನು, ಉದಾತ್ತ ಭಾವನೆಗಳನ್ನು ಪ್ರಸ್ತುತ ಪಡಿಸುವುದರಿಂದ ತೃಪ್ತಿ ಪಡೆದಿಲ್ಲ. ಪರಿಸ್ಥಿತಿಯ ಉದಾರ ದೃಷ್ಟಿಗಿಂತಲೂ ಮೇಲಾದ ಗುಣ ಆ ನಿರ್ಣಯಕ್ಕಿದೆ. ಅದು, ನಮ್ಮ ಜನತೆಗೆ ನೀಡಲಿರುವ ಹಕ್ಕಿನ ಅಸಲಿ ಅನುಭವದ ಖಾತರಿಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಈ ರೀತಿಯಲ್ಲಿ ಪ್ರಸ್ತುತ ನಿರ್ಣಯ, ಇತರ ಸಂವಿಧಾನ ರಚನಾಸಭೆಗಳಲ್ಲಿ ಕೈಗೊಳ್ಳಲಾದ ನಿರ್ಣಯ ಮತ್ತದರ ಆಲೋಚನೆಗಳನ್ನು ಸಂವಿಧಾನಗಳಲ್ಲಿ ನಿಗಮನಗೊಳಿಸಿದ ರೀತಿಗಿಂತ, ಅತೀತವಾದುದು.

ಇನ್ನೂ ಒಂದು ಅಂಶದಲ್ಲಿ ಈ ನಿರ್ಣಯ, ಬಹಳಷ್ಟು ಮುನ್ನಡೆ ಪಡೆದಿದೆ. ಇತರ ಸಂವಿಧಾನಗಳಲ್ಲಿ, ಜನರು ತಮ್ಮ ಆದರ್ಶಗಳ ಸಾಕಾರಕ್ಕೆ ಬೇಡುವ ಕ್ರಿಯಾಸ್ವಾತಂತ್ರ್ಯದ ಖಾತರಿಗಾಗಿ, ಯಾವೊಂದು ನಿರ್ದಿಷ್ಟ ಉಲ್ಲೇಖವೂ ಕಾಣಸಿಗದು. ಅಂತೆಯೇ ಅದರಲ್ಲಿ ಗುರಿ ಸಾಧನೆಗೆ ಭರವಸೆ ನೀಡಿಲ್ಲ. ಇದರಲ್ಲಿ ನಮಗೆ ಅಗತ್ಯವೆನಿಸಿದಾಗ ಸಕ್ರಿಯರಾಗುವ ಸ್ವಾತಂತ್ರ್ಯವಿದೆ. ಇದು ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವುದನ್ನು ಕಾಣುತ್ತೇವೆ. ಪರಂತು ಆ ಕ್ರಿಯೆ ಕಾನೂನಿನ ಹಂದರದೊಳಗೆ ನಡೆಯಬೇಕು ಮತ್ತು ಜನತೆಯ ನೈತಿಕ ಮಾನಕಗಳಿಗೆ ಹೊಂದುವಂತಿರಬೇಕು. ಅದು ಬಹಳ ಮುಖ್ಯ; ಆಗಿಂದಾಗ್ಗೆ, ಈ ರಾಷ್ಟ್ರದಲ್ಲೂ ಪರ ರಾಷ್ಟ್ರಗಳಲ್ಲೂ, ಯಾವುದೇ

ಒಂದು ನಿರ್ದಿಷ್ಟ ಕಾನೂನಿನ ವಿರುದ್ಧ ಬಂಡೆದ್ದು ನಿಲ್ಲಲು ಆಯಾ ಸರ್ಕಾರಗಳು, ಜನತೆಗಿರುವ ಹಕ್ಕನ್ನು ನಿರಾಕರಿಸುತ್ತಿದ್ದುವು. ಭಯಪಡಿಸುತ್ತಿದ್ದವು. ಮತ್ತು ಸ್ಥಾಪಿತ ಕಾನೂನಿನ ವಿರುದ್ಧ ಅಧ್ಯಾದೇಶದ ವಿರುದ್ಧ, ಯಾಕೆ, ಆ ನಿರ್ದಿಷ್ಟ ದೇಶದ ನಿರ್ದಿಷ್ಟ ಆಜ್ಞೆಯ ವಿರುದ್ಧ ವರ್ತಿಸಲು ಯಾವುದೇ ಸಂಪೂರ್ಣ ಹಕ್ಕಿಲ್ಲವೆಂದು, ಹೇಳುತ್ತಿದ್ದುವು. ಮಾನ್ಯರೆ, ಇತರೆ ದೇಶಗಳಲ್ಲಾದರೋ, ರಾಜನೈತಿಕ ಚಿಂತಕರು, ಹೆರಾಲ್ಡ್ ಲಸ್ಕಿ ಮತ್ತಿತರರು– ಜನರಿಗೆ, ತಮ್ಮ ಹಕ್ಕುಗಳು, ಬಾಧ್ಯತೆಗಳು ಮತ್ತು ನಾಗರಿಕ ಸ್ವಾತಂತ್ರ್ಯವನ್ನು ಒತ್ತಾಯಿಸಲು ಸದಾ ಸಿದ್ಧವಿರುವಂತೆ ಬೋಧಿಸುವುದರಲ್ಲಿ ತೃಪ್ತಿಪಟ್ಟುಕೊಂಡಿದ್ದರೆ, ಭಾರತದಲ್ಲಿ ಮಾತ್ರ ಮಹಾತ್ಮಾ ಗಾಂಧಿಯವರ ಮುಂದಾಳತ್ವದಲ್ಲಿ ಇದಕ್ಕೊಂದು ಅವಕಾಶ ಕಲ್ಪಿಸಲಾಗಿದೆ. ಬೃಹತ್ ಪ್ರಮಾಣದಲ್ಲಿ, ಕೇವಲ ದೊಡ್ಡ ದೊಡ್ಡ ಸಂಘಟಿತ ಮತ್ತು ಅಸಂಘಟಿತ ಸಮೂಹಗಳಿಗೆ ಮಾತ್ರವಲ್ಲದೆ ವ್ಯಕ್ತಿಗಳನ್ನೂ ಪ್ರತ್ಯೇಕವಾಗಿ ಪ್ರಚೋದಿಸಿ ಸತ್ಯಾಗ್ರಹದಲ್ಲಿ ತೊಡಗಿಸಲಾಗಿದೆ. ಅನ್ಯಾಯದ ವಿರುದ್ಧ ಸೆಟೆದು ನಿಲ್ಲಲು, ಯಾವೊಂದು ನಿರ್ದಿಷ್ಟ ಕಾನೂನು ಯಾ ವ್ಯವಸ್ಥೆಗೆ ವಿರುದ್ಧವಾಗಿ ಬಂಡೇಳಲು, ಪದೇ ಪದೇ ನಮಗಿರುವ ಹಕ್ಕೊತ್ತಾಯಿಸಿ, ಆ ಕ್ರಮದಿಂದ ಮಾತ್ರವೆ ಜನತೆಯ ನಾಗರಿಕ ಸ್ವಾತಂತ್ರ್ಯ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕಾಯ್ದುಕೊಳ್ಳಬಹುದೆಂದು ಪ್ರತಿಪಾದಿಸುತ್ತ ಬಂದಿದ್ದೇವೆ. ಸರ್ಕಾರ(ರಾಜ್ಯ)ವಾಗಲಿ, ಮಾನವಜೀವಿಗಳಾಗಲಿ, ಎಡಹುವುದು ಸಹಜ. ಆ ಪ್ರಮಾದಗಳು ನಡೆಯದಂತೆ ಕೆಲ ರಕ್ಷಣಾ ಕ್ರಮಗಳು, ಪ್ರತಿರೋಧಗಳು ಅಗತ್ಯ. ಅದು ಕೇವಲ ಸತ್ಯಾಗ್ರಹದಿಂದ ಮಾತ್ರವೆ ಸಾಧ್ಯ. ಮಾನ್ಯರೆ, ಆ ಕಾರಣಕ್ಕಾಗಿಯೂ ನಾನು ಈ ನಿರ್ಣಯವನ್ನು ಸ್ವಾಗತಿಸುತ್ತೇನೆ.

ಕೆಲವೊಂದು ಪಕ್ಷಗಳು ಈ ಸಭೆಗೆ ಹಾಜರಿಲ್ಲವೆಂಬ ಆಕ್ಷೇಪಣೆಯನ್ನು, ರಾಷ್ಟ್ರದಲ್ಲಿ ಹಲವಾರು ಮಂದಿ ಮಾಡುತ್ತಿದ್ದಾರೆ. ಮತ್ತೆ ಕೆಲವು ವರ್ಗಗಳು, ಈ ಸಭೆಯ ಪರಿಧಿಯೊಳಗೆ ಪ್ರವೇಶಿಸುವ ಅವಕಾಶ ಪಡೆದಿಲ್ಲವೆಂಬ ಕೂಗು ಕೇಳಿಬರುತ್ತಿದೆ. ಅವರ ಸಕ್ರಿಯ ಪಾತ್ರವಿಲ್ಲದೆ, ಇಂತಹ ನಿರ್ಣಯವನ್ನು ಪರಿಶೀಲಿಸುವ ಹಕ್ಕು ನಮಗಿಲ್ಲವೆಂಬ ವಾದವೂ ಅಲ್ಲಲ್ಲಿ ಕೇಳಿಬರುತ್ತಿದೆ. ಒಂದು ಕುಟುಂಬದ ಸಮಗ್ರ ಆಸ್ತಿಯ ಸಂವೃದ್ಧಿಗಾಗಿ, ಮಾತುಕತೆ ನಡೆದಿರುವಾಗ ಕುಟುಂಬದ ಎಲ್ಲ ಸದಸ್ಯರೂ ಹಾಜರಿರಬೇಕೆಂಬ ಅಗತ್ಯವೇನಿದೆ? ಯಾವುದೇ ಕುಟುಂಬದ ನೈತಿಕ, ಭೌತಿಕ ಸ್ವತ್ತಿನ ಸಂವೃದ್ಧಿ ಮತ್ತು ಹಕ್ಕುಗಳ ಸ್ಥಾಪನೆಗೆ, ವಿರೋಧ ವ್ಯಕ್ತಪಡಿಸುವ ಒಬ್ಬ ಸದಸ್ಯನಿರಲು ಸಾಧ್ಯವೇ? ಈ ನಿರ್ಣಯವೂ ಅಂತೆಯೇ. ಈ ದೇಶದ ಪ್ರತಿಯೊಬ್ಬ ವ್ಯಕ್ತಿಯ, ಸಮೂಹದ, ಅಂತೆಯೇ ಇಡೀ ದೇಶದ ಹಕ್ಕು ಬಾಧ್ಯತೆಗಳನ್ನು ಅಧಿಕಾರ ಮತ್ತು ಕರ್ತವ್ಯಗಳನ್ನು ಹೆಚ್ಚಿಸಿ, ಬೆಳೆಸುವ ಬಗ್ಗೆ ಪರ್ಯಾಲೋಚಿಸಲು ನಾವಿಲ್ಲಿ ಸಭೆ ಸೇರಿದ್ದೇವೆ. ಈ ಹಂತದಲ್ಲಿ ಕೆಲವರು ನಮ್ಮೊಡನೆ ಇಲ್ಲಿ ಹಾಜರಿಲ್ಲವಾದರೆ, ಬಾಧಕವಿಲ್ಲ. ಪ್ರಾಯಶಃ ತಮ್ಮದೇ ಬೇರೆ ಬೇರೆ ಕಾರಣಗಳಿಗಾಗಿ ಕೆಲ ಪಕ್ಷಗಳು ದೂರ ಉಳಿದಿರಬಹುದು. ನಮ್ಮ ಜನರ ಪರಂಪರೆಯ ಸಾಂಸ್ಕೃತಿಕ ಸಂಪತ್ ಸಂವೃದ್ಧಿಗಾಗಿ ಮುಂದಡಿ ಇಡಲು ಅವು ತಡೆಯೊಡ್ಡುವ ಕಾರಣವಿಲ್ಲ. ನಮ್ಮ ಇಡೀ ಹಕ್ಕುಗಳನ್ನು ಬೆಳೆಸುವಲ್ಲಿ ಅಂತೆಯೇ ನಮ್ಮ ಬಲಸಂವರ್ಧನೆಯ ಹಾದಿಯಲ್ಲಿ ಇದು ತಡೆಯೊಡ್ಡುವುದಿಲ್ಲ.

ಮಾನ್ಯರೆ, ಅದೇ ವೇಳೆ, ಇದು ಇಷ್ಟೆ ಸಾಲದೆಂದು ನಾನು ಹೇಳಿದ ಮಾತನ್ನು ಪುನರುಚ್ಚರಿಸುತ್ತೇನೆ. ಹಾಗೂ ಇದಕ್ಕೆ ಪೂರಕವಾಗಿ ನಾನು ಕೆಲವೊಂದು ವಿಷಯಗಳನ್ನು ಆಡಲು ಬಯಸುತ್ತೇನೆ. ನಾವು ಮತ್ತೆ ನಮ್ಮ ಹಳ್ಳಿಗಳಿಗೆ ಹಿಂತಿರುಗಿ, ಇಂಥದೊಂದು ನಿರ್ಣಯವನ್ನು ಅಂಗೀಕರಿಸಿದ್ದೇವೆಂದು, ನಮ್ಮ ಗೆಳೆಯರಿಗೆ ತಿಳಿಸುವುದೆಲ್ಲವೂ ಸರಿ. ಅವರ ಎಲ್ಲ ಹಕ್ಕುಗಳನ್ನೂ ಕಾಯ್ದುಕೊಳ್ಳಲಾಗುವುದೆಂದೂ, ಭವಿಷ್ಯದ ಬಗ್ಗೆ ನಿಶ್ಚಿಂತೆಯಾಗಿರಬಹುದೆಂಬ ಭರವಸೆ ಕೊಡುವುದೂ ಸರಿಯೆ. ಅವರು ತಮ್ಮ ಸಭೆಗಳನ್ನು ಸಮ್ಮೇಳನಗಳನ್ನು ನಡೆಸಬಹುದೆಂದೂ, ಸಂಘ ಸಂಸ್ಥೆಗಳನ್ನು ಕಟ್ಟಿಕೊಳ್ಳಬಹುದೆಂದೂ ಇತರ ವಿವಿಧ ನಾಗರಿಕ ಸ್ವಾತಂತ್ರ್ಯವನ್ನು ಸ್ಥಾಪಿಸಬಹುದೆಂಬ ಆಶ್ವಾಸನೆ ನೀಡಿದರಷ್ಟೆ ಸಾಕೆ? ಈ ಜನರು, ತಾವು ಬದುಕುವ ಹಕ್ಕನ್ನು, ಸಂಪೂರ್ಣ ಉದ್ಯೋಗಾವಕಾಶಗಳನ್ನು, ತಮ್ಮ ಮೂಲಭೂತ ಹಕ್ಕುಗಳನ್ನು ಪಡೆದರಷ್ಟೆ ಸಾಕೇ? ಇಲ್ಲಿ ನಾವು ಪಟ್ಟಿ

ಮಾಡಿರುವ ಹಕ್ಕುಗಳನ್ನು ಅನುಭವಿಸಲು, ಸೂಕ್ತ ಪರಿಸರವನ್ನು ನಿರ್ಮಿಸಲು ಅವರಿಗೆ ನೆರವಾಗುವುದು ಅಗತ್ಯವಲ್ಲವೆ? ಮಾನ್ಯರೆ, ಇದೊಂದು ದುರದೃಷ್ಟಕರ ಸಂಗತಿ; ಇಲ್ಲಿ ನಾವು ಪ್ರತಿಪಾದಿಸಿರುವ ವಿವಿಧ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು, ಕೋಟ್ಯಾನುಕೋಟಿ ದೇಶವಾಸಿಗಳಿಗೆ ಇನ್ನೂ ಸಾಧ್ಯವಾಗಿಲ್ಲ. ನಾವಿಲ್ಲಿ ಪ್ರಸ್ತಾಪಿಸುತ್ತಿರುವ ವಿವಿಧ ಸವಲತ್ತುಗಳು ಮುಕ್ತವಾಗಿ ಅವರ ಕೈಸೇರಿಲ್ಲ. ಅವರು ಅಶಿಕ್ಷಿತರು. ಆರ್ಥಿಕವಾಗಿ ಅವರು ಕುಗ್ಗಿದ್ದರೆ, ದಮನಕ್ಕೊಳಗಾಗಿದ್ದಾರೆ. ಸಾಮಾಜಿಕವಾಗಿ ಅವರು ಹಿಂದುಳಿದವರು, ತುಳಿತಕ್ಕೆ ಸಿಕ್ಕವರು. ಈ ಎಲ್ಲ ಜನರಿಗೂ ಇನ್ನಷ್ಟು ಸೌಲಭ್ಯಗಳನ್ನು ಕಲ್ಪಿಸುವ ಅಗತ್ಯವಿದೆ. ಕೆಲಕಾಲದವರೆಗೆ ಎಂದರೆ ಅವರು ಈ ಹಕ್ಕುಗಳನ್ನು ಅನುಭವಿಸುವ ಮುನ್ನ ಈ ಸವಲತ್ತುಗಳನ್ನ ಅವರಿಗೆ ಒದಗಿಸುವ ಅಗತ್ಯವಿದೆ. ಅವರಿಗೊಂದು ಆಲಂಬನ ಬೇಕು. ಒಂದು ಹಂತದವರೆಗೆ ಮೇಲೇರಲು ಏಣಿಯೊಂದು ಅವಶ್ಯಕ. ನಾವಿಲ್ಲಿ ಪ್ರತಿಪಾದಿಸುತ್ತಿರುವ ಹಕ್ಕುಗಳ ಮೌಲ್ಯಗಳನ್ನು ಗ್ರಹಿಸಿ, ಅನುಭವಿಸುವ ಹಂತ ತಲುಪುವವರೆಗೆ ಅದರ ಅಗತ್ಯವಿರುತ್ತದೆ.

ಸ್ವಾಮಿ, ಅಲ್ಪ ಸಂಖ್ಯಾತರ ಬಗ್ಗೆ ಬಹಳಷ್ಟು ಚರ್ಚೆಗಳು ನಡೆಯುತ್ತಿವೆ. ಯಾರು ಅಸಲಿ ಅಲ್ಪ ಸಂಖ್ಯಾತರು? ಪಾಕಿಸ್ತಾನ್ ಪ್ರಾಂತ್ಯವೆಂದು ಹೇಳಿಕೊಳ್ಳುವ ಪ್ರದೇಶದಲ್ಲಿರುವ ಹಿಂದೂಗಳಲ್ಲ, ಸಿಖ್ಖರಲ್ಲ, ಮುಸ್ಲಿಮರು ಅಲ್ಲವೇ ಅಲ್ಲ; ಅಸಲಿ ಅಲ್ಪ ಸಂಖ್ಯಾತರು ಯಾರೆಂದರೆ, ಈ ರಾಷ್ಟ್ರದ ಜನಪರರು. ಈ ಜನರು ನೊಂದು ನಲುಗಿರುವವರು, ದಮನಕ್ಕೊಳಗಾದವರು; ಶೋಷಣೆಗೆ ಒಳಗಾಗುತ್ತ ಬಂದಿರುವ ಶ್ರೀಸಾಮಾನ್ಯರು: ಇದುವರೆಗೆ, ಸಾಧಾರಣ ನಾಗರಿಕ ಹಕ್ಕು ಪಡೆದು, ಅದರ ಪ್ರಯೋಜನವನ್ನು ಅನುಭವಿಸುವ ಅವಕಾಶಗಳನ್ನು ಕಳೆದುಕೊಂಡವರು : ಈಗ ಅವರ ಸ್ಥಿತಿ ಯಾವ ಹಂತ ತಲುಪಿದೆ. ತಾವು ಬುಡಕಟ್ಟು ಪ್ರದೇಶಕ್ಕೆ ಹೋಗಿ ನೋಡಿ, ಕಾನೂನಿನ ಪ್ರಕಾರ, ಅವರದೇ ಪಾರಂಪರಿಕ ಬುಡಕಟ್ಟು ಕಾನೂನಿನಂತೆ, ಅವರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವಂತಿಲ್ಲ. ಆದರೂ ನಮ್ಮ ವರ್ತಕರು ಅಲ್ಲಿಗೆ ಹೋಗುತ್ತಾರೆ. ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಅವರ ಜಮೀನನ್ನು ಕಸಿದುಕೊಳ್ಳುತ್ತಾರೆ. ಹೀಗಾಗಿ, ಭೂಮಿಯನ್ನು ಕಸಿದುಕೊಳ್ಳುವುದು ಕಾನೂನುಬಾಹಿರವಾದರೂ, ವರ್ತಕರು, ಬುಡಕಟ್ಟು ಜನಾಂಗದವರಿಂದ ಜಮೀನು ವಶಪಡಿಸಿಕೊಂಡು ಅವರನ್ನು ಪಕ್ಕಾ ಗುಲಾಮರನ್ನಾಗಿಸಿದ್ದಾರೆ. ಗುಲಾಮಗಿರಿಗೆ ಕೆಡವಲು ಬಗೆಬಗೆಯ ಸಾಲಪತ್ರಗಳಿಗೆ ಸಿಲುಕಿಸಿ, ಆನುವಂಶಿಕ ಗುಲಾಮರನ್ನಾಗಿಸುತ್ತಾರೆ (ಜೀತದಾಳು). ಇನ್ನು ಸಾಮಾನ್ಯ ಹಳ್ಳಿಗರತ್ತ ಹೋಗೋಣ. ಅಲ್ಲಿಗೆ ಲೇವಾದೇವಿಗಾರ ಹಣದ ಚೀಲ ಹಿಡಿದು ಹೋಗುತ್ತಾನೆ. ಅಲ್ಲಿರುವ ಗ್ರಾಮೀಣ ಜನರನ್ನು ತನ್ನ ಕಿಸೆಗೆ ಹಾಕಿಕೊಳ್ಳುತ್ತಾನೆ. ಇದರ ಜೊತೆಗೆ, ಆಗಲೆ ತಮ್ಮ ಆಧಿಪತ್ಯ ಸ್ಥಾಪಿಸಿರುವ ಜಮೀನ್ದಾರರು ಮತ್ತು 'ಮಾಲ್‌ಗುಜ್ಜಾರ್'ಗಳು; ಬಡವರನ್ನು ಶೋಷಿಸುವ ಮತ್ತಿತರರು, ಈ ವರ್ಗದ ಜನರಲ್ಲೂ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಇಲ್ಲ. ಇವರೇ ರಕ್ಷಣೆ ಕೋರುವ ಅಸಲಿ ಅಲ್ಪ ಸಂಖ್ಯಾತರು. ಇವರಿಗೆ ರಕ್ಷಣೆಯ ಖಾತರಿ ಅಗತ್ಯ. ಇಂಥವರಿಗೆ ರಕ್ಷಣೆಯೊದಗಿಸಲು ಈ ನಿರ್ಣಯಕ್ಕಿಂತಲೂ ಹೆಚ್ಚಿನದು ಬೇಕಾಗುತ್ತದೆ.

ಆದರೆ ಇದೆಲ್ಲವನ್ನೂ, ಇಂಥ ನಿರ್ಣಯದಲ್ಲಿ ನಿಗಮಿತಗೊಳಿಸಲಾಗದು. ಈ ನಿರ್ಣಯದ ಹಿಂದಣ ಭಾವನೆಯನ್ನು ಪರಿಗಣಿಸುವುದು ಮುಖ್ಯ. ಅದರ ಹಿನ್ನೆಲೆಯಲ್ಲಿ ಸಂವಿಧಾನದ ರಚನೆಯಾಗಬೇಕು. ಮತ್ತು ಅದರ ರಚನೆಯಲ್ಲಿ, ಮೂಲಭೂತ ಹಕ್ಕುಗಳ ಪ್ರಣಾಳಿಕೆಯನ್ನು ಗಮನಕ್ಕೆ ತಂದುಕೊಳ್ಳಬೇಕು. ಅದಕ್ಕೆ ನಮ್ಮ ಸಂಗತಿ ಇದೆ. ಆದರೆ ಅದು ಸಾಕಾಗದು. ಇತರ ಹಲವು ರಾಷ್ಟ್ರಗಳೂ ಕೂಡ, ತಮ್ಮ ಮೂಲಭೂತ ಹಕ್ಕುಗಳ ಪ್ರಣಾಳಿಕೆಯನ್ನು ಹೊಂದಿವೆ. ಆದರೂ ಈ ಪ್ರಣಾಳಿಕೆಗಳು ಆಯಾ ರಾಷ್ಟ್ರಗಳ ಸರ್ಕಾರಗಳ ನಿರ್ಲಕ್ಷ್ಯಕ್ಕೆ ತುತ್ತಾಗಿವೆ. ಆದುದರಿಂದ ನಮ್ಮ ಸಂವಿಧಾನದಲ್ಲಿ ಕೆಲವು ಸೌಲಭ್ಯಗಳನ್ನು ಗೊತ್ತುಪಡಿಸಬೇಕು. ಅವುಗಳಿಂದ ನಮ್ಮ ಜನಪರರು, ಕಾನೂನಿನ ನೆರವು ಪಡೆದು ರಾಜ್ಯದ ಮತ್ತು ಅದರ ಸರ್ಕಾರದ ವಿರುದ್ಧ, ಅದರ ಅಧಿಕಾರಿಗಳ ವಿರುದ್ಧ ಕಾಲಕಾಲಕ್ಕೆ ಸೆಟೆದು ನಿಂತು, ಈ ಮೂಲಭೂತ ಹಕ್ಕುಗಳ ಅನುಷ್ಠಾನಕ್ಕೆ ಒತ್ತಾಯಿಸಬೇಕು. ಉದಾಹರಣೆಗೆ ಫ್ರಾನ್ಸ್‌ನಲ್ಲಿ, ಸಮಾನತೆ, ಸೌಭ್ರಾತೃತ್ವ ಮತ್ತು ಸ್ವಾತಂತ್ರ್ಯಕ್ಕೆಂದು ಉದಾತ್ತ ಆದರ್ಶಗಳನ್ನು

ಹೊಂದಿತ್ತು ಮತ್ತು ಸದನದ ಅಧಿವೇಶನದ ನಡುವೆ ಯಾವ ಸಂಸದನನ್ನೂ ಸೆರೆಯಲ್ಲಿಡಬಾರದೆಂಬ ನಿಯಮವನ್ನು ಪ್ರತಿಪಾದಿಸಿತ್ತು. ಆದರೂ ಅದನ್ನು ನಿರಾಕರಿಸಲಾಯಿತು. ಫ್ರೆಂಚ್ ಸಂಸತ್ತಿನ ಹಲವಾರು ಅಧೀನ ಅಧಿಕಾರಿಗಳನ್ನು ಸೆರೆಯಲ್ಲಿಡಲಾಯಿತು. ಅದರ ವಿರುದ್ಧ ಯಾವುದೇ ರಕ್ಷಣಾ ಕ್ರಮ ಇರಲಿಲ್ಲ. ಅಮೆರಿಕದಲ್ಲಿ ಕಾನೂನಿನ ಮುಂದೆ ಎಲ್ಲರೂ ಸಮಾನರೆ. ಆದರೂ ಆ ರಾಷ್ಟ್ರದಲ್ಲಿ ನೀಗ್ರೋಗಳು ಏಸೊಂದು ಕುಗ್ಗಿದ್ದಾರೆಂಬುದನ್ನು ಬಲ್ಲಿರಿ. ಅದರಂತೆ ಒಂದು ಅನಪೇಕ್ಷಣೀಯ ಘಟನೆ ಈ ರಾಷ್ಟ್ರದಲ್ಲಿ ಮರುಕಳಿಸದಂತೆ ತಡೆಯಬೇಕು. ಅದು ಸಾಧ್ಯವಾಗಲು, ನಮ್ಮ ಕಾರ್ಮಿಕರು, ಕೃಷಿಕರು ಮತ್ತು ಶ್ರೀಸಾಮಾನ್ಯರು, ಸರ್ಕಾರದಿಂದ ಅಗತ್ಯ ಹಣಕಾಸು ನೆರವು ಬೇಡಿ, ನ್ಯಾಯಾಲಯಗಳಿಗೂ, ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯಕ್ಕೂ ಮೊರೆ ಹೋಗುವುದಕ್ಕೆ ಅವರಿಗೆ ಸೂಕ್ತ ಬೆಂಬಲ ನೀಡಬೇಕು. ತಮಗೆ ಗೊತ್ತಿರುವಂತೆ ಬಡವರು ನ್ಯಾಯಾಲಯಕ್ಕೆ ಹೋಗಲು ಅಶಕ್ತರು. ಸರ್ಕಾರದ ವಿರುದ್ಧ ಅವರು ಹೋರಾಡಬೇಕಿದ್ದರೆ, ಅದರ ಸಾಧ್ಯತೆ ಅನೂಹ್ಯ. ಕ್ರಿಮಿನಲ್ ಮೊಕದ್ದಮೆಯಲ್ಲಿ, ವಕೀಲರಿಗೆ ಶುಲ್ಕ ತೆರಲು, ಬಡವರಿಗೆ ನೆರವಾಗುವಂತೆ, ಶ್ರೀಸಾಮಾನ್ಯರು ನಾವು ರೂಪಿಸುವ ಹಕ್ಕುಗಳನ್ನು ಸ್ಥಾಪಿಸಲು, ಸೌಲಭ್ಯ ಒದಗಿಸಬೇಕು. ಆಗಷ್ಟೇ ಅವರಿಗೆ ರಕ್ಷಣೆ ದೊರೆತಂತೆ.

ನಮ್ಮ ಜನಪದರೇ ಅಸಲಿ ಅಲ್ಪ ಸಂಖ್ಯಾತರು. ಆದರೂ ಅದೆಲ್ಲ ರಕ್ಷಣೆಗಳನ್ನು ಬೇಡುತ್ತಿಲ್ಲ. ಹಾಗೊಮ್ಮೆ ಬೇಡಿದರೂ, ಸಂವೈಧಾನಿಕ ಪ್ರಗತಿಗೆ ಅದನ್ನೊಂದು ಷರತ್ತಾಗಿ ಬಳಸಿಕೊಳ್ಳಲಾರರು; ಇನ್ನೂ ಹೆಚ್ಚೆಂದರೆ, ಅವು ತಮ್ಮ ರಾಷ್ಟ್ರದ ಒಳಿತನ್ನು ಚಿಂತಿಸುವವರು. ನಮ್ಮ ರಾಷ್ಟ್ರದ ಪ್ರಗತಿಯನ್ನು ಕೋರುವವರು. ಆದುದರಿಂದ, ನಾವು ಮುನ್ನಡೆಯೋಣವೆನ್ನುವವರು. ಅಷ್ಟೆ ಅಲ್ಲ, ನಮಗೂ ಮುನ್ನಡೆಯುವಂತೆ ಕರೆ ಕೊಡುತ್ತಾರೆ. ಅವರು ನಮ್ಮ ಬೆಂಬಲಕ್ಕೆ ನಿಲ್ಲುತ್ತಾರೆ. ನಾನು ನಮ್ಮ ಮತೀಯ ಅಲ್ಪ ಸಂಖ್ಯಾತರಲ್ಲಿ ಪ್ರಾರ್ಥಿಸುವುದಿಷ್ಟೆ :- ಈ ವರ್ಗದ ಜನರಿಂದ ಪಾಠ ಕಲಿಯೋಣ. ನಾವು ಯಾರನ್ನು ಪ್ರತಿನಿಧಿಸಬೇಕು? ರಾಷ್ಟ್ರದ ಶ್ರೀಸಾಮಾನ್ಯರನ್ನು ಆದರೂ ನಮ್ಮಲ್ಲಿ ಬಹುತೇಕ ಮಂದಿ, ಜನಪದರಲ್ಲಿ ಒಂದಾಗಲಾರರು. ನಾವು ಅವರಿಗೆ ಸೇರಿದವರು, ಅವರವರು. ನಾವು ಅವರ ಬೆಂಬಲಕ್ಕಾಗಿಯೇ ಇರುವುದು. ಆದರೆ ಸಂವಿಧಾನ ರಚನಾ ಸಭೆಗೆ ನಮ್ಮ ಜನಪದರೇ ಬರಲಾಗುತ್ತಿಲ್ಲ. ಇದಕ್ಕೆ ಕಿಂಚಿತ್ ಕಾಲ ಹಿಡಿಯಬಹುದು. ಏತನ್ಮಧ್ಯೆ, ನಾವು ಅವರ ನ್ಯಾಸಾಧಿಕಾರಿಗಳಾಗಿದ್ದೇವೆ. ಅವರ ಸಮರ್ಥಕರಾಗಿದ್ದೇವೆ. ಅವರ ಪರವಾಗಿ ವಾದಿಸಲು ನಾವು ಸರ್ವಪ್ರಯತ್ನ ಮಾಡುತ್ತಿದ್ದೇವೆ. ನಾವು ಈ ಕಾರ್ಯದಲ್ಲಿ ಉದ್ಯುಕ್ತರಾಗಿರುವ, ಮುಸ್ಲಿಂ ಲೀಗ್‌ನ ನಮ್ಮ ಗೆಳೆಯರು, ಪ್ರಪಂಚದ ಇದಕ್ಕೆ ವ್ಯತಿರಿಕ್ತವಾಗಿ ಇತರ ರಾಷ್ಟ್ರಗಳು ತಮ್ಮ ಮಾತನ್ನು ನಂಬಲೇಬೇಕೆಂದು ಆಶಿಸುತ್ತಾರೆ. ನಾವು ಅವರಿಗೇನೋ ತೊಂದರೆಯನ್ನುಂಟು ಮಾಡಲು ಹೊರಟಿರುವುದಾಗಿಯೂ, ಆ ಕಾರಣ. ತಾವು ಈ ಸಭೆಗೆ ಹಾಜರಾಗುವ ಭರವಸೆ ಹೊತ್ತಿಲ್ಲವೆಂಬುದಾಗಿಯೂ ತಮ್ಮ ಉಪಸ್ಥಿತಿಯನ್ನು ನಿರೀಕ್ಷಿಸಬಾರದೆಂಬುದಾಗಿಯೂ, ವಾಸ್ತವವನ್ನು ತಿರುಚಿ ಬಿಂಬಿಸುತ್ತಿದ್ದಾರೆ. ನಾನು ಅವರಿಗೆ ಈ ವೇದಿಕೆಯ ಮೂಲಕ ತಿಳಿಸಲು ಬಯಸುವುದೇನೆಂದರೆ, ಮುಸ್ಲಿಂ ಲೀಗ್ ಒಂದು ಪಕ್ಷ. ಅಸಹಕಾರ ನೀತಿಯನ್ನು ಅನುಸರಿಸುವುದಾದರೆ, ಕೈಚೆಲ್ಲಿ ಕುಳಿತರೆ, ಅದು ಮುಸ್ಲಿಂ ಲೀಗ್‌ಗೆ ಮಾತ್ರವಲ್ಲದೆ, ಇಡೀ ರಾಷ್ಟ್ರಕ್ಕೆ, ರಾಷ್ಟ್ರದ ಜನತೆಗೆ ಬಲು ದೊಡ್ಡ ದುರಂತ ತರುತ್ತದೆ. ಈಗ ಮಾಡಿರುವುದಕ್ಕಿಂತಲೂ ಹೆಚ್ಚು. ಅವರನ್ನು ಒಲಿಸಲೋಸುಗ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತೇನನ್ನು ತಾನೆ ಮಾಡಲು ಸಾಧ್ಯ? ನಮ್ಮೊಂದಿಗೆ ಬೆರೆತು, ಮಾತುಕತೆ ನಡೆಸಿ, ತರ್ಕಬದ್ಧವಾಗಿ, ಸಕಾರಣ ವಾದ ಮಾಡುವ ಬದಲು ಮುಸ್ಲಿಂ ಲೀಗ್‌ನ ನಮ್ಮ ಗೆಳೆಯರು ಬ್ರಿಟಿಷರ ಮುಂದೆ ತಮ್ಮ ಅಹವಾಲನ್ನು ತೋಡಿಕೊಂಡಿದ್ದಾರೆ. ಒಂದಾದ ಮೇಲೊಂದರಂತೆ ಸವಲತ್ತುಗಳನ್ನು, ರಿಯಾಯಿತಿಗಳನ್ನು ಪಡೆಯಲು ಪ್ರಯತ್ನಿಸಿದ್ದಾರೆ. ಈ ರಿಯಾಯಿತಿಗಳಲ್ಲಿ ಪ್ರತಿಯೊಂದೂ ಸಹ, ನಮ್ಮ ಸ್ವಾತಂತ್ರ್ಯ ಮತ್ತು 'ಸ್ವರಾಜ್' ಎಂಬ ರಾಷ್ಟ್ರದ ಗುರಿ ತಲುಪುವ ದೃಷ್ಟಿಪಥವನ್ನು ಅದರ ಕುರುಹು ಕಾಣಿಸದಂತೆ ಹೀರಿಕೊಳ್ಳುವ ಕಪ್ಪು ತೆರೆಯಾಗಿ ಪರಿಣಮಿಸುತ್ತಿದೆ. ಇಷ್ಟಾದರೂ, ಅವರು ಬ್ರಿಟಿಷರಿಂದ ಪಡೆದ ಎಲ್ಲ ರಕ್ಷಣೆಗೂ, ಹಕ್ಕುಗಳಿಗೂ, ಇತರ ವಿವಿಧ

ಸವಲತ್ತುಗಳಿಗೂ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಒಪ್ಪಲು ನಿರ್ಧರಿಸಿದೆ. ಇಷ್ಟೆಲ್ಲವೂ, ನಮ್ಮ ಮುಸ್ಲಿಂ ಲೀಗ್ ಗೆಳೆಯರನ್ನು ನಮ್ಮಲ್ಲಿಗೆ ಬಂದು, ನಮ್ಮ ಸಂವಿಧಾನ ರಚನೆಗೆ ಸಹಕಾರ ನೀಡುವಂತೆ ಕೋರುವ, ಒಂದೇ ಉದ್ದೇಶದಿಂದ ಹೊತ್ತ ಒಂದೇ ಭರವಸೆಯಿಂದ ಮಾಡಿದ್ದು, ಅವರು ಬರದಿದ್ದಲ್ಲಿ, ನಾವು ನಮ್ಮ ನಡೆಯನ್ನು ಮುಂದುವರೆಸಲಾರೆವೇನು? ಖಂಡಿತ ನಿಲ್ಲೆವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಇಂತಹ ದಮನಕಾರಿ ಪ್ರಯತ್ನಗಳಿಗೆ ಮಣಿಯದೆಂಬುದನ್ನು, ಅವರು ಮತ್ತು ಅವರನ್ನು ಹುರಿದುಂಬಿಸಿ ಬೆಂಬಲಿಸುತ್ತಿರುವ ಇತರರೂ ಮನಗಾಣಬೇಕು. ನಾವು ಇತಿಹಾಸವನ್ನು ನಿರ್ಮಿಸುತ್ತಿದ್ದೇವೆ. ಕಳೆದ ೨೫ ವರುಷಗಳಿಂದ ಇತಿಹಾಸವನ್ನು ಸೃಷ್ಟಿಸುತ್ತಲೇ ಬಂದಿದ್ದೇವೆ. ನಮ್ಮ ಸಂವಿಧಾನ ತಜ್ಞರು ಪದೇ ಪದೇ ಹೇಳುತ್ತಲೇ ಬಂದಿದ್ದಾರೆ. – ದೇವರಾಣೆ, ದಯವಿಟ್ಟು ಕಾನೂನನ್ನು ಉಲ್ಲಂಘಿಸಬೇಡಿ. ನಿಮ್ಮೆಲ್ಲ ಚಟುವಟಿಕೆಗಳು ನಿಮಗೆ 'ಸ್ವರಾಜ್ಯ' ತಂದುಕೊಡಲಾರವು. ಬ್ರಿಟಿಷರೊಡನೆ ಮಾತುಕತೆ ನಡೆಸಿ, ಬ್ರಿಟಿಷರೊಂದಿಗೆ ಕೈ ಜೋಡಿಸಿ. ಆದರೂ ನಮ್ಮ ಜನತೆಯ ಹಕ್ಕುಗಳಿಗಾಗಿ, ಸವಲತ್ತುಗಳಿಗಾಗಿ ನಾವು ಸತ್ಯಾಗ್ರಹದ ಹಾದಿಯನ್ನು ಹಲವಾರು ಬಾರಿ ಹಿಡಿದಿದ್ದೇವೆ. ನಾವು ಪ್ರಗತಿ ಸಾಧಿಸಿದ್ದೇವೆ. ಅಲ್ಲವೆಂದವರಾರು? ನೇರ ಹೋರಾಟ ನಡೆಸದೆ, ನಾವಿಂದು ಇಲ್ಲಿ ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸುತ್ತಿದ್ದೇವೇನು? ಮುಸ್ಲಿಂ ಲೀಗ್ ಈಗ ವರ್ಷಾನುಗಟ್ಟಲೆ ನಮ್ಮ ಅವಿರತ ಹೋರಾಟವಿಲ್ಲದೆ, ಮುಸ್ಲಿಂ ಲೀಗ್ ಈಗ ಏಕಾಏಕಿ ತೊಡಗಿರುವಂತೆ, ಪ್ರತಿರೋಧವನ್ನೊಡ್ಡಲು ಆಗ ಸಾಧ್ಯವಿರುತ್ತಿತ್ತೇ? ಸಾಮ್ರಾಜ್ಯಶಾಹಿ ಬ್ರಿಟಿಷರು ನಮ್ಮ ಮುನ್ನಡೆಯನ್ನು ತಡೆಯಲು ಸಾಧ್ಯವಾಗದ ಹಂತವನ್ನು ನಾವೀಗ ತಲುಪಿದ್ದೇವೆ–ನಮ್ಮ ಪ್ರಗತಿಪಥದಲ್ಲಿ ಅಡ್ಡಬರಲು, ಬ್ರಿಟಿಷ್ ಸಾಮ್ರಾಜ್ಯಶಾಹಿ ಇತರ ಮಿತ್ರರ ಆಲಂಬನಕ್ಕೆ ಜೋತುಬೀಳುವ ಕರುಣಾಜನಕ ಸ್ಥಿತಿ ತಲುಪಿದೆ. ಪ್ರಾಯಶಃ ಒಂದು ದಿನ, ಒಂದು ಕ್ಷಣ ಅದು ಸಾಧ್ಯವಾಗಬಹುದು. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತದಿಂದ, ಅದು ಸಾಧ್ಯವಾಗದು. ಮತ್ತು ಸಾಮ್ರಾಜ್ಯಶಾಹಿ ಬ್ರಿಟಿಷರ ಮಿತ್ರರೂ ತಮ್ಮ ಯತ್ನದಲ್ಲಿ ಯಶಸ್ವಿಯಾಗಲಾರರು. ಮಿಗಿಲಾಗಿ, ನಮ್ಮವರೆ, ಇಷ್ಟರಲ್ಲೆ ಒಂದು ಹಂತ ತಲುಪಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಸರ್ಕಾರವನ್ನು, ಅದನ್ನು ಬೆಂಬಲಿಸುತ್ತಿರುವ ಮಿತ್ರರನ್ನು ಬದಿಗೊತ್ತಿ ಮುಂದುವರೆಯುವರು; ಮತ್ತು ನಮಗೂ ಮುಂದುವರೆಯಲು ನೆರವಾಗುವರು. ಈಗ ಮುಸ್ಲಿಂ ಲೀಗ್ ಪಕ್ಷದ ನೆಲೆಯೇನು? ಸ್ವಾತಂತ್ರ್ಯವೆಂಬುದು ಬಿಸಿಲ್ಗುದುರೆಯೆಂದು ಮಾನ್ಯ ಜಿನ್ನಾ ವ್ಯಂಗ್ಯವಾಡುತ್ತಿದ್ದ ಕಾಲವೊಂದಿತ್ತು. ಭಾರತೀಯರು ಸ್ವಾತಂತ್ರ್ಯ ಬೇಡುತ್ತಿರುವುದು, ಅಸಂಗತ ವ್ಯರ್ಥಾಲಾಪವೆಂದು ಅವರು ಹೇಳುತ್ತಿದ್ದರು. ನೇರ ಹೋರಾಟ ಅಸಮಂಜಸವೆಂದು ಅವರೇ ಉದ್ಗರಿಸುತ್ತಿದ್ದರು. ಈಗ ಅವರೇ ಭಾರತಕ್ಕೆ ಸ್ವಾತಂತ್ರ್ಯ ಬೇಕೆನ್ನುತ್ತಿದ್ದಾರೆ. ಭಾರತ ಸ್ವಾತಂತ್ರ್ಯದ ಪರವಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಮುಸ್ಲಿಂ ಲೀಗ್ ವೇದಿಕೆಯಲ್ಲಿ ಅವರೇ "ಭಾರತ ಬಿಟ್ಟು ತೊಲಗಿ" ಘೋಷವಾಕ್ಯವನ್ನು ಉಚ್ಚರಿಸುತ್ತಿದ್ದಾರೆ. "ನಮ್ಮಿಬ್ಬರನ್ನು ಒಡೆದು ಭಾರತ ಬಿಟ್ಟ ತೊಲಗಿ" ಎಂಬ ನೀತಿಗೂ ಬದ್ಧರಾಗಿರುವಂತಿದೆ, ಇದ್ದರೂ ನಮ್ಮ ಹೆಜ್ಜೆಗಳನ್ನೇ ಅವರೂ ಹಿಂಬಾಲಿಸಿದರು. ಈಗ ಅವರು ಎರಡು ಸಂವಿಧಾನ ರಚನಾಸಭೆಗಳ ಪರವಾಗಿ ನಿಂತಿದ್ದಾರೆ. ಕೆಲವೇ ವರುಷಗಳ ಹಿಂದೆ, ಯಾವುದೇ ಸಂವಿಧಾನ ರಚನಾಸಭೆಯ ಬಗ್ಗೆ ಆಲೋಚಿಸಲು ಸಿದ್ಧವಿರಲಿಲ್ಲ. ಇದರಿಂದ ವ್ಯಕ್ತವಾಗುವುದೇನು? ನನಗೆ ತೋಚುವಂತೆ, ನಾವು ಮುಂದಡಿ ಇಟ್ಟರೆ, ಮುಸ್ಲಿಂ ಲೀಗ್ ಕೂಡ ಮುನ್ನಡೆಯುತ್ತದೆ. ಕಾರಣ ಬಲು ಸರಳ. ನಮ್ಮ ಜನರು – ಅವರು ಹಿಂದೂಗಳೋ ಮುಸಲ್ಮಾನರೋ ಯಾವುದೇ ಸಮುದಾಯಕ್ಕೆ ಸೇರಿರಲಿ, ತಮ್ಮದೇ ಪಕ್ಷಪಾತ ಧೋರಣೆಯ ನಡುವೆಯೂ, ತಮ್ಮ ತಮ್ಮ ರಾಜಕೀಯ ಮುಂದಾಳುಗಳು, ಭಾರತ ಮಾತ್ರವೇ ಮುನ್ನಡೆಯಬಹುದಾದ ರೀತಿಯಲ್ಲಿ ಮುಂದಡಿ ಇಡುವಂತೆ ಪ್ರಚೋದಿಸುತ್ತಿದ್ದಾರೆ. ಆದುದರಿಂದ, ತಮ್ಮ ಮತೀಯ ಬಾಂಧವರ ಹೆಸರಿನಲ್ಲೆ ಆಗಲಿ, ಈ ಸಭೆಗೆ ಹಾಜರಾಗಿ ನಮ್ಮೊಡನೆ ಸಹಕರಿಸುವಂತೆ ಮುಸ್ಲಿಂ ಲೀಗ್ ಪಕ್ಷವನ್ನು ಕೋರುತ್ತೇನೆ. ಇದರಲ್ಲಿ ತಮ್ಮ ಪಟ್ಟಭದ್ರದ ಹಿತಾಸಕ್ತಿ ಸಾಧಿಸಲು ಅಲ್ಲದಿದ್ದರೂ, ತಮ್ಮ ನವಾಬರಿಗಾಗಿ, ತಮ್ಮ

ಜಾಗೀರುದಾರರಿಗಾಗಿಯಾದರೂ ಬರಲೆಂದು ವಿನಂತಿಸುತ್ತೇನೆ.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಂತೆ ತಾವೂ ಸಹ ಪ್ರಜಾಪ್ರಭುತ್ವದ ಪರವಾಗಿ ಇರುವುದಾಗಿ ಮಾನ್ಯರೆ ಜಿನ್ನಾ ಮತ್ತಿತರರು, ಈಗಷ್ಟೆ ಹಿಂದೆ ಪ್ರತಿಪಾದಿಸುತ್ತಿದ್ದರು. ಅವರು ಪ್ರಜಾಪ್ರಭುತ್ವವಾದಿಗಳೇ ಆಗಿದ್ದರೆ, ಯಾವ ಸಮುದಾಯದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಡವರಿದ್ದಾರೆ, ಯೋಚಿಸಲಿ. ಹಿಂದೂಗಳಲ್ಲಿ ಗಮನಾರ್ಹ ಪ್ರತಿಶತ? ಬಡವರಲ್ಲ. ಆದರೆ ಮುಸಲ್ಮಾನರಲ್ಲಿ ಶ್ರೀಮಂತರು ಬೆರಳೆಣಿಕೆಗೆ ಸಿಗಬಲ್ಲರು. ಜನತೆಯಲ್ಲಿ ಬಡವರಲ್ಲಿ ಬಡವರೆಂದರೆ ಮುಸ್ಲಿಮರೆ. ಅವರಿಗೆ ಸ್ವತಂತ್ರ ಭಾರತದ ಅಗತ್ಯ ಬಹಳಷ್ಟೆ ಇದೆ. ಸ್ವತಂತ್ರ ಭಾರತವಿಲ್ಲದೆ, ಬುಡಕಟ್ಟು ಜನಾಂಗದವರಿಗೆ, ಹರಿಜನರಿಗೆ, "ಮುಸ್ಲಿಂ ಮಜ್‌ದೂರ್" ಅಥವಾ "ಕಿಸಾನ್"ಗೆ ಅಭಿವೃದ್ಧಿಗೆ ಅವಕಾಶವೇ ಇರುವುದಿಲ್ಲ. ಈ ಗುಲಾಮಗಿರಿಯನ್ನು ಮಾನ್ಯ ಜಿನ್ನಾ ಮತ್ತಿತರರು ಮುಂದುವರೆಸುತ್ತಿದ್ದಷ್ಟೂ ಕಾಲ, ಅವರು ತಮ್ಮದೆ ಸಮುದಾಯದ ಜನಪದರ ಅಭಿವೃದ್ಧಿಯನ್ನು ವಿಳಂಬಗೊಳಿಸಿದಂತಾಗುತ್ತದೆ.

ಕೊನೆಯದಾಗಿ, ಈ ನಿರ್ಣಯದಲ್ಲಿ ಸೂಚಿಸಿರುವ ವಿವಿಧ ಹಕ್ಕುಗಳನ್ನು ಅನುಭವಿಸಲು, ನಮ್ಮ ಜನತೆಗೆ ಸಾಧ್ಯವಾಗುವಂತೆ, ಸಂವಿಧಾನದಲ್ಲಿ ಅಗತ್ಯ ಉಪಬಂಧಗಳನ್ನು ಸೂಕ್ತ ರೀತಿಯಲ್ಲಿ ನಿಗಮಿತಗೊಳಿಸುವಂತೆ, ಈ ಸಭೆಯನ್ನು ನಾನು ಕೋರುತ್ತೇನೆ. ಅಂತಹ ಸೌಲಭ್ಯಗಳಿಲ್ಲದೆ ನಿರ್ಣಯ ನಿಷ್ಪ್ರಯೋಜಕ. ಅದೊಂದು ಧಾರ್ಮಿಕ ಆಶ್ವಾಸನೆಯಾಗಿ, ಈಡೇರದ ಭರವಸೆಯಾಗಿ ಉಳಿಯವುದೇ ಹೊರತು ಬೇರೇನೂ ಅಲ್ಲ. ನಿಜ, ಈ ಸಂವಿಧಾನ ಪಠ್ಯ ಪುಸ್ತಕಗಳಲ್ಲಿ ನಿಗಮಿತಗೊಂಡಾಗ, ಮತ್ತು ನಮ್ಮ ಬಾಲಕ ಬಾಲಕಿಯರು, ಓದಿದಾಗ ಅದು ಶೈಕ್ಷಣಿಕ ವಿಷಯವಾಗಿ ನೆಲೆಗೊಳ್ಳುತ್ತದೆ. ಆದರೆ ಅದು ಸಾಲದು. ಅಮೆರಿಕದಲ್ಲಿ ಇಂತಹುದೇ ಪ್ರಯೋಗ ನಡೆಯಿತು. ಆದರೂ ಜನತೆಯ ಹಕ್ಕುಗಳನ್ನು ಈಡೇರಿಸಲು ಸರ್ಕಾರ ಏನೇನೂ ಕ್ರಮ ಕೈಗೊಳ್ಳಲಿಲ್ಲ. ಆದುದರಿಂದ ನಿರ್ಣಯದಲ್ಲಿರುವ ಎಲ್ಲ ಅಗತ್ಯ ಬೇಡಿಕೆಗಳ ಮಂಜೂರಾತಿಯನ್ನು ಸಂವಿಧಾನದಲ್ಲಿ ನಿಗಮಿತಗೊಳಿಸುವ ಎಚ್ಚರಿಕೆ ವಹಿಸಬೇಕು. ಜನತೆಯ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಮತ್ತು ಈ ಹಕ್ಕುಗಳನ್ನು ಅನುಭವಿಸಲು ಒಂದು ಅವಕಾಶವನ್ನು ಕಲ್ಪಿಸಲು, ಇದೊಂದು ಅತ್ಯಾವಶ್ಯಕ ಮುನ್ನೆಚ್ಚರಿಕೆಯಾಗಿ ಪರಿಣಮಿಸಬೇಕು.

**ಡಾ. ಪಿ.ಕೆ. ಸೇನ್** (ಬಿಹಾರ್ : ಸಾಮಾನ್ಯ)

ಸನ್ಮಾನ್ಯ ಅಧ್ಯಕ್ಷರೆ,

ಈ ನಿರ್ಣಯಕ್ಕೆ ನನ್ನ ಹೃತ್ಪೂರ್ವಕ ಬೆಂಬಲ ನೀಡುವ ಸಲುವಾಗಿ ನಿಮ್ಮೆದುರು ನಿಂತಿದ್ದೇನೆ. ಈ ಅಧಿವೇಶನ ಮತ್ತು ಹಿಂದಿನ ಅಧಿವೇಶನಗಳಲ್ಲಿ ನನಗೆ ಮುಂಚೆ ಹಲವಾರು ಭಾಷಣಕಾರರು ಮಾತನಾಡಿದ್ದಾರೆ. ಬಹಳಷ್ಟೆ ವಿಷಯಗಳು ಚರ್ಚೆಗೆ ಪೂರ್ಣಗ್ರಾಸವಾಗಿವೆ. ಅವೆಲ್ಲ ಅಂಶಗಳ ಚರ್ವಿತ ಚರ್ವಣಕ್ಕೆ ನಾನು ತೊಡಗುವುದಿಲ್ಲ. ಆದರೆ ಸ್ವತಂತ್ರ ಭಾರತದ ಸಂವಿಧಾನ ರಚನೆಗಾಗಿ, ಈ ನಿರ್ಣಯ ಮತ್ತು ಇದರ ಎಲ್ಲ ಆಯಾಮಗಳು ಅನುಷ್ಠಿತಗೊಳ್ಳುವುದು ಬಹಳ, ಬಹಳ ಅಗತ್ಯವೆಂದು ಭಾವಿಸುತ್ತೇನೆ. ಇದರ ಜೊತೆಗೆ, ನಿರ್ಣಯದಲ್ಲಿ ತೀರ್ಮಾನಿಸಿದಂತೆ ಭಾರತವನ್ನು ಸರ್ವತಂತ್ರ ಸ್ವತಂತ್ರ ಸಾರ್ವಭೌಮ ಗಣರಾಜ್ಯವೆಂದು ಉದ್ಘೋಷಿಸುವುದು ಬಹಳ ಮುಖ್ಯ.

ಈ ಮುನ್ನ, ಸಭೆಯಲ್ಲಿ ಮೊದಲು ಮಾತನಾಡಿದ ಗೌರವಾನ್ವಿತ ಸದಸ್ಯರು ಹೇಳಿದಂತೆ, ನಮ್ಮಲ್ಲಿ ಅನೇಕರನ್ನು ಸಂದೇಹಗ್ರಸ್ತರು, ಅಸ್ಥಿರ ಮನಸ್ಕರು, ಮತ್ತು ಸಿನಿಕರೆಂದು ಗುರುತಿಸಬಹುದಾಗಿದೆ. ಆದುದರಿಂದ ನಮ್ಮ ಆಲೋಚನೆಗಳ ಸಾಕಾರಕ್ಕಾಗಿ ಮತ್ತು ಸ್ವತಂತ್ರ ಭಾರತ ಗಣರಾಜ್ಯಕ್ಕೆಂದು ಸಂವಿಧಾನ ರಚಿಸಲು ನಾವು ದೃಢ ಸಂಕಲ್ಪ ಹೊತ್ತಿದ್ದೇವೆಂಬುದನ್ನು, ಜಗತ್ತಿನ ಮುಂದೆ ಉದ್ಘೋಷಿಸಬೇಕು. ಅದು ಎಂತಹ ಗಣರಾಜ್ಯವೆಂದರೆ, ತನ್ನೆಲ್ಲ ಅಧಿಕಾರವನ್ನು ಜನತೆಗೆ ವಹಿಸಿಕೊಡುವ ಮತ್ತು ಎಲ್ಲ ಅಧಿಕಾರವನ್ನು ಜನರಿಂದಲೇ ಪಡೆಯುವ ಗಣರಾಜ್ಯ. ಈ ಅಂಶಕ್ಕೆ ಎಲ್ಲ ವರ್ಗದ ಜನರ ಒಪ್ಪಿಗೆ ಇದೆ ಎಂಬುದು ನಿಸ್ಸಂಶಯ. ಕಾಂಗ್ರೆಸ್, ಮುಸ್ಲಿಂ

ಲೀಗ್ ಗೆಳೆಯರು, ಅಥವಾ ಅಲ್ಪ ಸಂಖ್ಯಾತರೆಂಬ ಹೆಸರಿನ ವಿಭಿನ್ನ ವರ್ಗದವರು, ನಾವು ದ್ವೇಷಿಸುವ ಪದವಾದ "ಅಸ್ಪೃಶ್ಯರು" ಎಂಬ ಹೆಸರಿನಲ್ಲಿ ಕರೆಯಲ್ಪಡುವವರು, ದಮನಕ್ಕೊಳಗಾದವರು, ಕುಗ್ಗಿದವರು, ತುಳಿತಕ್ಕೊಳಗಾದವರು, ಪರಿಶಿಷ್ಟ ಜಾತಿಗೆ ಸೇರಿದವರೆಂದು ಹಣೆಪಟ್ಟಿ ಹಚ್ಚಿಕೊಂಡವರು, ಇಂಥ ಯಾರ ಬಗ್ಗೆ ಮಾತನಾಡುವಾಗಲೂ, ಅವರೆಲ್ಲರೂ ನಮ್ಮ ಸಹೋದರರರೆಂಬ ಭಾವನೆಯಿಂದಲೇ ಮಾತನಾಡುತ್ತೇವೆ. ರಾಜಕೀಯ ಅಭಿಪ್ರಾಯ ಸಂಗ್ರಹಣೆಗಾಗಿ ಇವುಗಳಲ್ಲಿ ಯಾವುದೇ ವರ್ಗವನ್ನು ತೆಗೆದುಕೊಳ್ಳಿ, ಅವರೆಲ್ಲರ ಸಾಮಾನ್ಯ ಉದ್ದೇಶ ಕೇವಲ ಸ್ವಾತಂತ್ರ್ಯ ಎಂಬ ಅಭಿಪ್ರಾಯದಲ್ಲಿ ಸಂಶಯವುಂಟೆ? ಅಧಿಕಾರ ಹಸ್ತಾಂತರಕ್ಕೆ ಸಿದ್ಧವಿರುವ ಬ್ರಿಟಿಷ್ ಸರ್ಕಾರವೂ ಕೂಡ, ಸ್ವಾತಂತ್ರ್ಯ ಮತ್ತು ಬಿಡುಗಡೆಯೇ ಉದ್ದೇಶವೆಂದು ಸ್ಪಷ್ಟವಾಗಿ ಘೋಷಿಸಿದೆ. ಇಂತಹ ಸಂದರ್ಭಗಳಲ್ಲಿ, ಇದೇ ಪರಿಭಾಷೆಯಲ್ಲಿ ನಮ್ಮ ನಿರ್ಣಯವನ್ನು ರಚಿಸುವ ಕರ್ತವ್ಯ ಹಾಗೂ ಹೊಣೆ ನಮ್ಮ ಮೇಲಿದೆ.

ಈ ನಿರ್ಣಯದ ಗೌರವಾನ್ವಿತ ಪ್ರಸ್ತಾಪಕರು ಆಡಿದ ಕೆಲ ಶಬ್ದಗಳು ನೆನಪಿನಲ್ಲಿವೆ. ಅವು ಇನ್ನೂ ನನ್ನ ಕಿವಿಯಲ್ಲಿ ರಿಂಗಣಿಸುತ್ತಿವೆ. ಅವರು ಹೇಳಿದರು –"ಇದೊಂದು ಸಂಕಲ್ಪ ಕರ್ತವ್ಯ ಮತ್ತು ಅರ್ಪಣೆ". ಹೌದು, ಇದೊಂದು ಅರ್ಪಣೆ. ನಾವು ನಮ್ಮ ಕಾಯಕದ ಹೊಸ್ತಿಲಲ್ಲಿ ಈಗಷ್ಟೇ ಪದಾರ್ಪಣ ಮಾಡಿದ್ದೇವೆ. ನಾವಿನ್ನೂ ಹೊಸ್ತಿಲು ದಾಟಿಲ್ಲ. ನಾವಿನ್ನೂ ದೇಗುಲದ ಪ್ರಾಂಗಣದಲ್ಲಿ ಸೇರಿದ ಯಾತ್ರಾರ್ಥಿಗಳಂತೆ ಇದ್ದೇವೆ. ಹೊಸ್ತಿಲು ದಾಟಿ ದೇಗುಲದ ಒಳಗೆ ಕಾಲಿಡುವ ಹಂತದಲ್ಲಿದ್ದೇವೆ. ನಾವು, ಸ್ವಯಂ ಸಂಕಲ್ಪಿಸಿದ ಕಾರ್ಯಸಾಧನೆಗೆ ಪಣ ತೊಡುವ ಮತ್ತು ಆತ್ಮಶುದ್ಧಿಯ ಪವಿತ್ರ ಕ್ಷಣವನ್ನು ಎದುರುಗೊಳ್ಳುತ್ತಿದ್ದೇವೆ. ನಮ್ಮ ಹೆಗಲನ್ನು ಅತಿ ದೊಡ್ಡದೊಂದು ಜವಾಬ್ದಾರಿ ಏರಿ ಕುಳಿತಿದೆ. ಸರ್ವತಂತ್ರ ಸ್ವತಂತ್ರ ಗಣರಾಜ್ಯಕ್ಕಾಗಿ, ಸಂವಿಧಾನ ರಚಿಸುವ ಯೋಗ್ಯ ಪ್ರತಿನಿಧಿಗಳಾಗಿ ನಮ್ಮ ಕರ್ತವ್ಯ ನಿರ್ವಹಣೆಗೆ, ಕಾರ್ಯ ಪ್ರವೃತ್ತರಾಗುವ ಮುನ್ನ, ದೃಢಸಂಕಲ್ಪವನ್ನು ಈ ಹೊತ್ತಿನಲ್ಲಿ ಮಾಡುವುದು ಸೂಕ್ತ ಮತ್ತು ಯುಕ್ತವಾದುದು.

ಗೌರವಾನ್ವಿತ ಸದಸ್ಯರು ಪ್ರಸ್ತಾಪಿಸಿದ ಮತ್ತೊಂದು ಅಂಶ ನನ್ನ ದೃಷ್ಟಿಯಲ್ಲಿ ಬಹುಮುಖ್ಯವಾದುದು. ನಾನೀಗಾಗಲೆ ಮಾತನಾಡಿದ್ದು ವಸ್ತುನಿಷ್ಠವಾದರೆ, ಈ ಅಂಶ ತತ್ತ್ವನಿಷ್ಠವಾದುದು. ನಾವು ಕೇವಲ ನಮ್ಮ ಬಗ್ಗೆಯೇ ಯೋಚಿಸದೆ, ಇನ್ನೂ ಇಲ್ಲಿ ಉಪಸ್ಥಿತರಾಗಿಲ್ಲದವರ ಬಗ್ಗೆಯೂ ಆಲೋಚಿಸಬೇಕು. ಎದುರಿಗೆ ಗೋಚರಿಸುವ "ನಾವು" ಎಂಬುವರ ಹಿಂದೆ, ಗೋಚರಿಸದ "ನಾವು" ಎಂದರೆ ಮುಸ್ಲಿಂ ಲೀಗ್‌ನ ನಮ್ಮ ಗೆಳೆಯರು ಮತ್ತು ರಾಜ್ಯ ಪ್ರತಿನಿಧಿಗಳ ಇಂಗಿತವನ್ನು ನಾವು ಅರಿಯಬೇಕಿದೆ. ಅವರೆಲ್ಲರೂ ಈ ಸಭಾಂಗಣದಲ್ಲಿ ಉಪಸ್ಥಿತರಿದ್ದರೂ. ಸಭಾಂಗಣ ತುಂಬಿ ತುಳುಕುತ್ತಿದ್ದರೂ, ೪೦೦ ದಶಲಕ್ಷ ಜನ ಯಾರನ್ನು ಪ್ರತಿನಿಧಿಸುತ್ತಿದ್ದೇವೋ ಅವರು ಇಲ್ಲಿಲ್ಲ, ಇರಲಾರರು. ಆದುದರಿಂದ ಒಂದು ಮಾತನ್ನು ನಾನು ಪುನರುಚ್ಚರಿಸಲು ಬಯಸುತ್ತೇನೆ. ನಮ್ಮ ಮುಂದಿರುವ ಕಾಯಕದಲ್ಲಿ, ಕೇವಲ ಕಣ್ಣಿಗೆ ಗೋಚರಿಸುವ "ನಾವು" ಮಾತ್ರ ಸಂವಿಧಾನ ರಚನಾ ಸಭಾಂಗಣದಲ್ಲಿಲ್ಲ. ಅದರ ಹಿಂದೆ ಅದೃಶ್ಯ "ನಾವು" ಇರುವುದನ್ನು ಮರೆಯಬಾರದು. ಆಗಷ್ಟೆ ಇಡೀ ಭಾರತಕ್ಕೆ ನೈಜ ಸ್ವಾತಂತ್ರ್ಯ, ಮತ್ತು ಮಾನವರಾಗಿ ಬಾಳಲು ಬೇಕಿರುವ ನೈಜ ಹಕ್ಕು ಕೊಡಬಲ್ಲ ಸಂವಿಧಾನವನ್ನು ರಚಿಸಲು ಸಾಧ್ಯ–ಆ ಹಕ್ಕನ್ನು ಮೂಲಭೂತ ಹಕ್ಕು ಎಂದೋ, ಅಲ್ಪ ಸಂಖ್ಯಾತರ ಹಕ್ಕು ಎಂದೋ, ಅಥವಾ ಯಾವುದೇ ಹೆಸರಿನಿಂದ ಬೇಕಾದರೂ ಕರೆಯಿರಿ, ಬಾಧಕವಿಲ್ಲ. ಸ್ವತಂತ್ರ ಭಾರತ ಗಣರಾಜ್ಯದ ಸಂವಿಧಾನವನ್ನು ರಚಿಸುತ್ತೇವೆಂಬುದು ಮನವರಿಕೆಯಾದಾಗಷ್ಟೆ ನಾವು ಕಾರ್ಯ ಪ್ರವೃತ್ತರಾಗುತ್ತಿದ್ದಂತೆ, ಈ ಸಮಸ್ಯೆಗಳು ತಂತಾನೆ ದೂರವಾಗುತ್ತವೆ. ಒಂದು ಉತ್ತಮವಾದ ದೃಷ್ಟಿಯಿಂದ ನಮ್ಮ ಮುಂದಿನ ಸಮಸ್ಯೆಗಳನ್ನು ಸ್ಪಷ್ಟವಾಗಿ ಕಾಣಬಲ್ಲೆವು. ನಮ್ಮೆಲ್ಲರ ಕೆಲಸಗಳಲ್ಲೂ, ಪ್ರತಿ ಕ್ಷಣದಲ್ಲೂ ನಮ್ಮೊಡನೆ ಮಹಾತ್ಮಾ ಗಾಂಧಿಯವರ ಚೇತನದ ಸಾಂಗತ್ಯವನ್ನು ಅನುಭವಿಸದೆ ಇರಲಾಗದು. ಅದೊಂದು ದೇದೀಪ್ಯಮಾನವಾದ ಏಕಮೇವಾದ್ವಿತೀಯ ಮೂರ್ತಿ. ತನ್ನ ಹೆಗಲಮೇಲೆ ಮನುಷ್ಯನ, ಕೋಮು–ಕೋಮಿನ ನಡುವೆ ಸಂಕುಚಿತ ಮನೋಭಾವ, ಅಸೂಯೆ,

ಮತ್ಸರ, ಸಂಶಯ, ಅಪನಂಬಿಕೆಗಳಿಂದ ಉತ್ಪನ್ನವಾದ ದುಃಖ ಮತ್ತು ವೇದನೆಯನ್ನು ಹೊತ್ತು ನಡೆಯುವ ಏಕಾಂಗಿ. ಆದರೆ ತನ್ನ ನಮ್ಮ ಗುರಿಯನ್ನು ರೂಪಿಸುವ ಒಂದು ಸಂಸ್ಥಾನ ಚಿಗುರೊಡೆಯುವುದರ ಶಾಶ್ವತ ನಂಬಿಕೆಯನ್ನು ಎದೆಯಲ್ಲಿ ಹೊತ್ತವ. ಇತರ ರಾಷ್ಟ್ರಗಳ ಭವಿಷ್ಯವನ್ನು ರೂಪಿಸುವಂತೆ ನಮ್ಮ ನಾಳೆಯನ್ನು ಕಡೆಯುವ ವಿಧಿಯ ಕೈಚಳಕ, ಸಂವಿಧಾನ ರಚನಾಸಭೆಯ ರೂಪದಲ್ಲಿ ಗೋಚರಿಸುತ್ತದೆ. ಆ ಪ್ರಜ್ಞಾಪೂರ್ವಕ ನಂಬಿಕೆ ಮತ್ತು ಭರವಸೆಯ ಸ್ಫೂರ್ತಿ ಪಡೆದು, ಈ ನಿರ್ಣಯ, ಸರ್ವಾನುಮತದಿಂದ ಹೃತ್ಪೂರ್ವಕವಾಗಿ ಅಂಗೀಕರಿಸಲ್ಪಡುತ್ತದೆ ಎಂಬುದರಲ್ಲಿ ನನಗೆ ಸಂಶಯವಿಲ್ಲ.

**ಶ್ರೀ ಎಸ್. ನಾಗಪ್ಪ** (ಮದರಾಸು : ಸಾಮಾನ್ಯ) :

ಸನ್ಮಾನ್ಯ ಅಧ್ಯಕ್ಷರೆ,

ನಮ್ಮ ಮಧ್ಯಂತರ ಸರ್ಕಾರದ ಉಪರಾಷ್ಟ್ರಪತಿಗಳಾದ ಗೌರವಾನ್ವಿತ ಪಂಡಿತ್ ಜವಾಹರ್ ಲಾಲ್ ನೆಹರು ಅವರು ಪ್ರಸ್ತಾವಿಸಿದ ನಿರ್ಣಯವನ್ನು ಬೆಂಬಲಿಸುವುದರಲ್ಲಿ ನನಗೆ ಅತ್ಯಂತ ಸಂತಸವಾಗುತ್ತದೆ. ಮಾನ್ಯರೆ, ಈ ಒಂದು ನಿರ್ಣಯ ರಾಷ್ಟ್ರದ ಎಲ್ಲ ಸಮುದಾಯಗಳಿಗೂ, ಎಲ್ಲ ವರ್ಗಗಳಿಗೂ ವ್ಯಾಪಕ ಅವಕಾಶವನ್ನು ಒದಗಿಸುತ್ತದೆ. ನನಗಿಂತ ಮುಂಚೆ ಮಾತನಾಡಿದ ನನ್ನ ಕೆಲವು ಗೆಳೆಯರು ಸಭೆಗೆ ಬಾರದಿದ್ದವರ ಬಗ್ಗೆ ಖೇದ ವ್ಯಕ್ತಪಡಿಸಿದರು. ನನ್ನ ಅಭಿಪ್ರಾಯದಂತೆ, ಸಭೆಯಲ್ಲಿ ಅನುಪಸ್ಥಿತರ ಬಗ್ಗೆ ನಾವು ದುಃಖಿಸಬಾರದು. ವಾಸ್ತವವಾಗಿ ಹೇಳಬೇಕೆಂದರೆ, ಅವರು ಇಲ್ಲಿ ಹಾಜರಿರುವ ಯೋಗ್ಯತೆ ಪಡೆದಿಲ್ಲ. ಏಕೆಂದರೆ, ಅವರು ಭಾರತೀಯರಲ್ಲ. ಅವರು ಭಾಗಶಃ ಅರಬರು, ಭಾಗಶಃ ಭಾರತೀಯರು; ಅಂತೆಯೇ ಭಾರತೀಯರೆನ್ನುವುದಕ್ಕಿಂತ ಬಹುಪಾಲು ಪಾರಸಿಕರು, ಬಹುಪಾಲು ತುರ್ಕಿಗಳು'. ಆ ಕಾರಣದಿಂದಲೆ ಈ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಬದಲಾಗಿ ಅನ್ಯ ರಾಷ್ಟ್ರಗಳತ್ತ ಕಣ್ಣು ಹಾಯಿಸುತ್ತಾರೆ. ಅವರು ನಿಜವಾಗಿ ಭಾರತೀಯರೆ ಆಗಿದ್ದಲ್ಲಿ, ಈ ಬೃಹತ್ ಸಭೆಯಲ್ಲಿದ್ದು ಭಾರತದ ಸ್ವಾತಂತ್ರ್ಯಕ್ಕೆ ಬೆಂಬಲ ನೀಡುತ್ತಿದ್ದರು. ಮಾನ್ಯರೆ, ಯಾರು ಗೈರು ಹಾಜರಾದವರ ಬಗ್ಗೆ ಖೇದ ವ್ಯಕ್ತಪಡಿಸಿದರೋ ಅವರೂ ಸಹ ಇಷ್ಟವಿದ್ದರೆ ಸಭೆಯಿಂದ ನಿರ್ಗಮಿಸಬಹುದು. ನಾವು ಎಂದರೆ ಹರಿಜನರು ಮತ್ತು ಆದಿವಾಸಿಗಳು ನಿಜವಾದ ಮಣ್ಣಿನ ಮಕ್ಕಳು, ನಮಗೆ ಈ ರಾಷ್ಟ್ರದ ಸಂವಿಧಾನ ರಚಿಸಲು ಎಲ್ಲ ಹಕ್ಕುಗಳೂ ಇವೆ. ನಾಮ್‌ಕೇವಾಸ್ತೇ ಹಿಂದೂಗಳು, (ಮೇಲ್ವರ್ಗ) ಯಾರು ನಿಜವಾಗಿ ಮೂಲತಃ ಭಾರತೀಯರಲ್ಲ ಅವರೂ ಸಭೆಯಿಂದ ನಿರ್ಗಮಿಸಬಹುದು (ತಡೆ) ಮಾನ್ಯರೆ, ಇವತ್ತು ಬ್ರಿಟಿಷ್ ಪ್ರಜೆಯನ್ನು ದೇಶ ಬಿಟ್ಟು ತೊಲಗುವಂತೆ ನಾವು ಕೇಳುತ್ತಿದ್ದೇವೆ. ಏಕೆ? ಆತ ಮನುಷ್ಯನಲ್ಲವೇ? ಆತನಿಗೆ ಈ ರಾಷ್ಟ್ರದಲ್ಲಿ ಇರುವ ಅಧಿಕಾರವಿಲ್ಲವೆ? ಆತನನ್ನು ನಾವು ಹೊರ ನಡೆಯಲು ಹೇಳುತ್ತಿರುವುದೇಕೆಂದರೆ ಆತ ವಿದೇಶಿ ಪ್ರಜೆ. ಹಾಗೆಯೇ ವಲಸಿಗ ಆರ್ಯನನ್ನೂ ಹೊರಗೆ ಹೋಗುವಂತೆ ಹೇಳುತ್ತಿದ್ದೇವೆ. ಈ ದೇಶವನ್ನು ಆಳಿದ ಆಕ್ರಮಣಕಾರ ಮಹಮ್ಮದೀಯನನ್ನೂ ಹೊರಗುಳಿಯುವಂತೆ ಹೇಳುತ್ತೇವೆ. ಇದರಲ್ಲಿ ಒಂದೇ ಒಂದು ರಿಯಾಯಿತಿ ಎಂದರೆ, ಮೇಲ್ವರ್ಗದ ಹಿಂದೂಗಳು ಹೊರ ನಡೆದರೆ ಉಳಿಯಲು ತಾಣವಿಲ್ಲ. ಅದೊಂದೆ ಅವರು ಇಲ್ಲಿರಲು ಪಡೆದಿರುವ ಅರ್ಹತೆ. ಮಾನ್ಯರೆ, ಈಗ ನಾವೆಲ್ಲರೂ ಭಾರತೀಯರೆ, ನಮ್ಮಲ್ಲಿ ಪ್ರತಿಯೊಬ್ಬನಲ್ಲೂ ಆ ಭಾವನೆ ಮೂಡಬೇಕು. ಸೌಭ್ರಾತೃತ್ವದ ಭಾವನೆಯಿಂದ, ನಾವೆಲ್ಲರೂ ಒಗ್ಗೂಡಿ, ಆದಷ್ಟೂ ಬೇಗನೆ ಈ ರಾಷ್ಟ್ರ ಸ್ವತಂತ್ರವಾಗಲು ಸಹಕಾರ ನೀಡಬೇಕು. ನಾವು ಮೂರನೆಯವನಿಗೋ ಇಲ್ಲವೆ ಎರಡನೆಯವನಿಗೋ ಗುಲಾಮರಾಗಿರಲು ಯಾರೂ ಇಷ್ಟಪಡುವುದಿಲ್ಲ. ಪ್ರತಿಯೊಬ್ಬನೂ ಸ್ವತಂತ್ರನಾಗಿರಲು ಬಯಸುತ್ತಾನೆ. ಈ ನಿರ್ಣಯ ಎಲ್ಲರಿಗೂ ಸಮಾನಾವಕಾಶವನ್ನು ಕಲ್ಪಿಸುತ್ತದೆ. ಸಮಾನಾವಕಾಶ ಕೇವಲ ಸಂವಿಧಾನದ ಪುಸ್ತಕದಲ್ಲಿ ಮಾತ್ರ ಉಳಿಯಬಾರದು. ಅವು ಕಾರ್ಯರೂಪಕ್ಕಿಳಿಯಬೇಕು. ಪ್ರತಿಯೊಬ್ಬ ವ್ಯಕ್ತಿಗೂ, ತಾನು ಈ ರಾಷ್ಟ್ರದ ಆಡಳಿತಗಾರನೆಂಬ ಅರಿವು ಮೂಡಬೇಕು. ಪ್ರತಿಯೊಬ್ಬನೂ ತಾನು ಈ ರಾಷ್ಟ್ರವನ್ನಾಳುವ ನಿಜವಾದ ಅರಸನೆಂಬುದನ್ನು ಗ್ರಹಿಸಬೇಕು.

ಈ ಮಣ್ಣಿನ ನತದೃಷ್ಟ ಮಕ್ಕಳ ರಕ್ಷಣೆಯ ಬಗ್ಗೆ ನಾನು ಮಾತನಾಡುವ ಅಗತ್ಯವಿಲ್ಲ. ಆರ್ಯರು ನಮ್ಮನ್ನು ಪರಾಭವಗೊಳಿಸಿದಂದಿನಿಂದ ನಾವು ಅವರ ಗುಲಾಮರಾಗಿಯೇ ಉಳಿದಿದ್ದೇವೆ. ನಾವು ಕಷ್ಟಕೋಟಲೆಗಳನ್ನು ಅನುಭವಿಸುತ್ತಿದ್ದೇವೆ. ಇನ್ನು ನಮ್ಮಿಂದ ಸಹಿಸಲಾಗದು. ನಮ್ಮ ಜವಾಬ್ದಾರಿಯನ್ನು ಅರಿತಿದ್ದೇವೆ. ನಮ್ಮ ಹಕ್ಕೊತ್ತಾಯದ ಬಗ್ಗೆ ನಮಗೆ ಗೊತ್ತಿದೆ.

ಮಾನ್ಯರೆ, ಅಲ್ಪ ಸಂಖ್ಯಾತರ ಬಗ್ಗೆ, ನನ್ನ ಹಿಂದೆ ಮಾತನಾಡಿದ ಗೆಳೆಯರು ಬಹಳಷ್ಟೆ ಮಾತನಾಡಿದ್ದಾರೆ. ಮತೀಯ ಅಲ್ಪಸಂಖ್ಯಾತರೊಡನೆ ನಾವು ಗುರುತಿಸಿಕೊಳ್ಳಲು ಬಯಸುವುದಿಲ್ಲ; ಅಥವಾ ಜನಾಂಗೀಯ ಅಲ್ಪ ಸಂಖ್ಯಾತರೆಂದೂ ಹೇಳಿಕೊಳ್ಳಲು ಬಯಸುವುದಿಲ್ಲ. ನಾವು ರಾಜಕೀಯ ಅಲ್ಪಸಂಖ್ಯಾತರೆಂದು ಮಾತ್ರ ತಿಳಿಸಲು ಬಯಸುತ್ತೇನೆ. ನಾವೇಕೆ ಅಲ್ಪ ಸಂಖ್ಯಾತರಾಗಿದ್ದೇವೆಂದರೆ, ನಮ್ಮನ್ನು ಆ ದಿನಗಳಲ್ಲಿ ಯಾರೂ ಗುರುತಿಸಿಯೇ ಇರಲಿಲ್ಲ. ರಾಷ್ಟ್ರದ ಆಡಳಿತದಲ್ಲಿ ನಮ್ಮ ಉಚಿತ ಪಾಲು ನಮಗೆ ದಕ್ಕಿರಲಿಲ್ಲ. ಆದರೆ ಅದು ಶಾಶ್ವತವಲ್ಲ. ಮಾನ್ಯರೆ, ಈಗ ನಮ್ಮ ನೆಲೆಯೇನು? ಈ ನಿರ್ಣಯವು ಸಮಾನತೆಗೆ ಒಂದು ಅವಕಾಶವನ್ನು ಕಲ್ಪಿಸುತ್ತದೆ. ನಾವೂ ಸಮಾನರಂತೆ ಭಾವಿಸಿ, ರಾಷ್ಟ್ರದ ಆಡಳಿತದಲ್ಲಿ ನಮ್ಮ ಪಾಲನ್ನು ನಾವು ದಕ್ಕಿಸಿಕೊಳ್ಳಬಹುದು.

ಮಾನ್ಯರೆ, ಇಡೀ ರಾಷ್ಟ್ರದ ಜನಸಂಖ್ಯೆಯಲ್ಲಿ ನಾವು ಐದನೇ ಒಂದು ಭಾಗ ಇದ್ದೇವೆ. ಈ ಜನಸಂಖ್ಯೆಯ ೧/೫ ಭಾಗವನ್ನು ಒಂದು ಪ್ರಜಾಪ್ರಭುತ್ವ ಸರ್ಕಾರ ಕಡೆಗಣಿಸುವುದಕ್ಕೆ ಸಾಧ್ಯವೇ ಇಲ್ಲ. ಈ ಸದನದ ಹೊರಗಿರುವವರು, ಈ ಬೃಹತ್ ಸಭೆಯಲ್ಲಿ ಭಾಗವಹಿಸದೆ ಇರುವವರು, ಇದನ್ನು ಅರ್ಥಮಾಡಿಕೊಳ್ಳುವುದು ಅವರಿಗೆ ಬಿಟ್ಟಿದ್ದು. ಅವರಿಗೆ ಅನುವು ಮಾಡಿಕೊಡುವಲ್ಲಿ ಕಾಂಗ್ರೆಸ್ ಬಹುದೂರ ಸಾಗಿದೆ. ಈ ಹೇಳಿಕೆಯನ್ನು ಒಪ್ಪಿಕೊಳ್ಳುವಲ್ಲಿಯೂ ಸಹ, ಅವರು ಕೇಳಿದ್ದನ್ನೆಲ್ಲ ಕೊಟ್ಟಿದ್ದೇವೆಂಬುದು ಆತಂಕಕಾರಿ. ಕೇವಲ ಒಂದು ವರ್ಗ ಆಳುತ್ತಿದೆಯೆಂಬ ಕಾರಣಕ್ಕಾಗಿ ಅದರ ಕಣ್ಣೊರೆಸುವುದು ನಮ್ಮ ಗುರಿಯಾಗಬಾರದು. ಅವರು ಕೇಳಿದ್ದೆಲ್ಲ ಮಂಜೂರು ಮಾಡುತ್ತಲೇ ಹೋಗುವುದೆಂದಲ್ಲ. ಒಂದು ಕೋಮನ್ನೂ ಅಥವಾ ಒಂದು ಸಮುದಾಯವನ್ನೂ ಓಲೈಸಲು ನೀವು ಇದನ್ನೆಲ್ಲ ಮಾಡುತ್ತಿರುವಿರೆನ್ನಿಸುತ್ತದೆ. ನೀವು ಬಹಳಷ್ಟೆ ಸಹನಶೀಲರಾಗಿದ್ದೀರಿ. ತುಂಬ ಉದಾರಿಯಾಗಿದ್ದೀರಿ; ನಿಮ್ಮ ಆಸಕ್ತಿಗಳನ್ನು ಕಡೆಗಣಿಸಿದ್ದೀರಿ. ಮಾನ್ಯರೆ, ನನ್ನ ಕೋರಿಕೆಯೊಂದೆ. ಅದೆಂದರೆ ನೀವು ಎಲ್ಲರ ಬಗ್ಗೆಯೂ ನ್ಯಾಯಸಮ್ಮತವಾಗಿ ವರ್ತಿಸಬೇಕು. ನೀವು ಒಂದು ಅಲ್ಪ ಸಂಖ್ಯಾತ ವರ್ಗಕ್ಕೆ ಸವಲತ್ತು ನೀಡಿದರೆ, ಇನ್ನೊಂದು ವರ್ಗ ತನ್ನ ಬೇಡಿಕೆಯನ್ನು ಮುಂದಿಡಲು ನೀವೇ ಅವಕಾಶ ಕಲ್ಪಿಸಿದಂತಾಗುತ್ತದೆ. ಇಷ್ಟೆಲ್ಲ ಅಲ್ಪ ಸಂಖ್ಯಾತರಿಗೆ ಸವಲತ್ತು ಕಲ್ಪಿಸಿಕೊಡಲು ಬಹುಸಂಖ್ಯಾತರಿಗೆ ಸಾಧ್ಯವೆ? ಹಾಗಾಗಿ ತಾವು ಕಟ್ಟುನಿಟ್ಟಾಗಿರಬೇಕು, ಬಲಗೊಳ್ಳಬೇಕು ಮತ್ತು ಎಲ್ಲರಿಗೂ ಸಮಾನ ಸವಲತ್ತು ಒದಗಿಸಬೇಕೆಂಬುದು ನನ್ನ ಕೋರಿಕೆ. ಕೇವಲ ಒಂದು ವರ್ಗ ಬೇಡಿತೆಂಬ ಕಾರಣಕ್ಕಾಗಿ, ತಾವು ಮಂಜೂರು ಮಾಡುತ್ತಲೆ ಹೋಗಬಾರದು. ಇಲ್ಲಿ ಒಂದು ಆಶ್ವಾಸನೆಯನ್ನು ಉಲ್ಲೇಖಿಸಲಾಗಿದೆ. ಪಂಡಿತ ಜವಾಹರಲಾಲ್ ನೆಹರು ಅವರು ಕೆಲ ಅಂಶಗಳನ್ನು ಒಪ್ಪಿ ನಿರ್ಣಯದಲ್ಲಿ ಸೇರಿಸಿರುವುದು ನನಗೆ ಸಂತಸ ತಂದಿದೆ. ಅಲ್ಪ ಸಂಖ್ಯಾತರು, ಹಿಂದುಳಿದ ಮತ್ತು ಬುಡಕಟ್ಟು ಪ್ರದೇಶಗಳು, ಶೋಷಿತರು ಮತ್ತು ಹಿಂದುಳಿದ ವರ್ಗದವರ ಹಿತರಕ್ಷಣೆಯನ್ನು, ಖಾತರಿಪಡಿಸಲಾಗಿದೆ. ಮತಭೇದವಿಲ್ಲದೆ, ಜನಾಂಗೀಯ ವಿಭೇದವಿಲ್ಲದೆ ಎಲ್ಲ ಸಮುದಾಯಕ್ಕೂ ಇದು ಸಮಾನಾವಕಾಶ ಕಲ್ಪಿಸುತ್ತದೆ. ಒಂದು ವರ್ಗ ಅನುಚಿತವಾಗಿ, ನ್ಯಾಯಬಾಹಿರವಾಗಿ ಬೇಡಿಕೆಯನ್ನು ಒತ್ತಾಯಪಡಿಸುತ್ತ ಹೋಗುವುದೇಕೆಂಬುದು ನನಗೆ ಅರ್ಥವಾಗದು. ಕೇವಲ ಅವರು ಬೇಡಿದರೆಂಬ ಕಾರಣಕ್ಕೆ, ನೀವು ಮಂಜೂರು ಮಾಡುತ್ತ ಹೋದರೆ, ಅಲ್ಪ ಸಂಖ್ಯಾತರು ಹೆಚ್ಚು ಹೆಚ್ಚು ಬೇಡುತ್ತ ಹೋಗಲು ಅದೊಂದು ಅವಕಾಶ ಮಾಡಿಕೊಡುತ್ತೆ. ನಿರ್ಣಯದಲ್ಲಿ ಪ್ರಸ್ತಾಪಿಸಿದ್ದೆಲ್ಲವೂ ಸ್ಪಷ್ಟವಾಗಿದೆ. ನಿರ್ಣಯವನ್ನು ಜಾಗರೂಕತೆಯಿಂದ ರಚಿಸಲಾಗಿದೆ. ಅದರ ಪ್ರತಿ ಪದದ ಭಾವವನ್ನು ಗ್ರಹಿಸಿ, ಅದನ್ನು ಕಾರ್ಯರೂಪಕ್ಕೆ ತರುವಂತೆ ವಿನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ. ಕೇವಲ ನಿರ್ಣಯವನ್ನು ಅಂಗೀಕರಿಸಿದರೆ ಸಾಲದು. ಅದು ನಿರ್ಣಯವಾಗಿಯೇ

ಉಳಿಯಲು ಬಿಡಬಾರದು. ಆ ನಿರ್ಣಯ ಶತಪ್ರತಿಶತ ಕಾರ್ಯರೂಪಕ್ಕೆ ಬರುವಂತೆ ಮಾನ್ಯತೆ ಪಡೆಯಬೇಕು. ಆಗಷ್ಟೆ ಆ ನಿರ್ಣಯಕ್ಕೆ ಬೆಲೆ. "ಸಮಾನ ಅಂತಸ್ತು ಮತ್ತು ಸಮಾನಾವಕಾಶ" ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ. ಸಮಾನಾವಕಾಶ ಎಂದರೆ, ಒಂದಲ್ಲೊಂದು ದಿನ, ಒಬ್ಬ ಹರಿಜನನೂ ಸಹ ಭಾರತದ ಪ್ರಧಾನಿಯಾಗಬೇಕು. ಅಂತಹ ಅವಕಾಶ ಒದಗಿಬರಬೇಕು. "ಸಮಾನಾವಕಾಶ" ಎಂಬ ಪದವನ್ನು ಕೃತಿರೂಪಕ್ಕಿಳಿಸಬೇಕು. ಅದು ನಮ್ಮ ಪ್ರೇರಣೆಯಾಗಬೇಕು. ಈ ನಿರ್ಣಯವನ್ನು ಬೆಂಬಲಿಸುವಾಗ ಈ ಸಭೆಯ ಮುಂದೆ ನಾನು ನಿವೇದಿಸಬೇಕಾದ ಅಂಶ ಮತ್ತೊಂದಿದೆ. ಈ ಬೃಹನ್ಮಂಡಳಿ, ೪೦೦ ದಶಲಕ್ಷ ಜನರ ಭವಿಷ್ಯವನ್ನು ರೂಪಿಸುತ್ತಿರುವಾಗ, ಈ ನಿರ್ಣಯದ ಪ್ರತಿ ಅಕ್ಷರ ಪ್ರತಿ ಪದ ಸಂಪೂರ್ಣ ಕೃತಿಯಾಗಿ ರೂಪಾಂತರ ಹೊಂದುವುದೆಂಬ ಭರವಸೆ ಹೊತ್ತಿದ್ದೇನೆ.

**ಮಾನ್ಯರೆ ಜಗತ್ ನಾರಾಯಣ್ ಲಾಲ್** (ಬಿಹಾರ : ಸಾಮಾನ್ಯ)

ಸನ್ಮಾನ್ಯ ಅಧ್ಯಕ್ಷರೆ,

ಮಾನ್ಯರೆ, ಈ ನಿರ್ಣಯಕ್ಕೆ ಬೆಂಬಲ ನೀಡಲು ನನ್ನನ್ನು ಆಹ್ವಾನಿಸಿರುವುದು ನನ್ನ ವಿಶೇಷ ಹಕ್ಕೆಂದು ಭಾವಿಸುತ್ತೇನೆ. ಈ ನಿರ್ಣಯವನ್ನು ಪಂಡಿತ ಜವಾಹರ್ ಲಾಲ್ ಅವರು ಮುಂದಿಟ್ಟಿರುವುದು ಯಥೋಚಿತವಾಗಿದೆ. ಕಾರಣವೇನೆಂದರೆ ಮದರಾಸ್ ಕಾಂಗ್ರೆಸ್ ೧೯೨೬ರಲ್ಲಿ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನಿರ್ಣಯವನ್ನು ಅಂಗೀಕರಿಸುವಂತೆ ಸೂಚಿಸಿದವರು ಅವರೆ. ೧೯೨೯ರಲ್ಲಿ ಅವರು ಅಧ್ಯಕ್ಷರಾಗಿರುವಾಗ, ಭಾರತದ ಸಂಪೂರ್ಣ ಸ್ವಾತಂತ್ರ್ಯವನ್ನು ತನ್ನ ಪಂಥವನ್ನಾಗಿ, ಕಾಂಗ್ರೆಸ್ ಅಳವಡಿಸಿಕೊಂಡಿತು. ಮತ್ತೆ ೧೯೩೪ರಲ್ಲಿ ಭಾಷಣ ಮಾಡುತ್ತ ಪಂಡಿತ ಜವಾಹರ್ ಲಾಲ್ ನೆಹರು ಅವರು ಹೀಗೆಂದರು – 'ಭಾರತದ ಪ್ರಜೆಗಳೆ, ಸ್ವಯಂ ಭಾರತ ಭಾಗ್ಯವಿಧಾತರಾಗಬೇಕಿದ್ದರೆ, ಅದು ಯಥಾರೂಪದಲ್ಲಿ ರಾಜಕೀಯವಾಗಿ, ರಾಷ್ಟ್ರಮಟ್ಟದಲ್ಲಿ ಮಂಜೂರಾಗುವುದಿದ್ದರೆ, ಅದರ ಅರ್ಥ, ವ್ಯಾಪಕ ಮತಾಧಿಕಾರದ ಮುಖೇನ ಸಂವಿಧಾನ ರಚನಾ ಸಭೆಯನ್ನು ಸ್ಥಾಪಿಸುವುದರಿಂದ ಮಾತ್ರ ಅದು ಸಾಧ್ಯವಾಗುತ್ತದೆ.

ಸ್ವಾತಂತ್ರ್ಯದಲ್ಲಿ ನಂಬಿಕೆಯುಳ್ಳವರಿಗೆ ಬೇರಾವ ಆಯ್ಕೆಯೂ ಇಲ್ಲ. ಮಾನ್ಯರೆ, ಆ ಕಾರಣಕ್ಕಾಗಿಯೇ ಸ್ಮರಣೀಯವಾದ ಪ್ರಸ್ತುತ ಸಂವಿಧಾನ ರಚನಾಸಭೆಯಲ್ಲಿ ಪಂಡಿತ ಜವಾಹರ್ ಲಾಲ್ ನೆಹರು ಅವರು ಭಾರತದ ಪರವಾಗಿ ಮಂಡಿಸಿದ ನಿರ್ಣಯಕ್ಕೆ ವಿಶೇಷ ಬೆಲೆಯುಂಟು. ಆದುದರಿಂದ, ಈ ಸಭೆಯಲ್ಲಿ ಉಪಸ್ಥಿತರಿರುವ ಪ್ರತಿಯೊಬ್ಬರ ಪಾಲಿಗೂ ಒಟ್ಟಾರೆ ಇದೊಂದು ಶಪಥ ಮತ್ತು ಶ್ರದ್ಧಾಪೂರ್ವಕ ನಿರ್ಣಯವೆಂದು ನಾನು ಭಾವಿಸುತ್ತೇನೆ. ಈ ಸಂವಿಧಾನ ರಚನಾಸಭೆಯು ಸಮಾವೇಶಗೊಂಡುದರ ಪರಿಣಾಮವಾಗಿ, ಇದರ ಅಧಿವೇಶನಗಳಿಗಿಂತಲೂ ಮುಂಚೆ ಬ್ರಿಟಿಷ್ ಸರ್ಕಾರದ ಮನೋಧೋರಣೆಯಲ್ಲಿ ಕಿಂಚಿತ್ ಪರಿವರ್ತನೆಯನ್ನು ಕಾಣುತ್ತಿದ್ದೇವೆ. ಈ ಶತಮಾನ ಹಾಗೂ ಹಿಂದಿನ ಶತಮಾನಗಳಲ್ಲಿ ಸಮಾವೇಶಗೊಂಡ ಸಂವಿಧಾನ ರಚನಾಸಭೆಗಳು ಹಲವಾರು ಬಗ್ಗೆ ಸಂವಿಧಾನಗಳನ್ನು ರಚಿಸಿರುವುವು ಎಂದು ತಿಳಿಸಲು ಬಯಸುತ್ತೇವೆ. ಇದು ಆ ಸಭೆಗಳಲ್ಲಿ ಯಾವುದರ ಮಾದರಿಯಲ್ಲಿ ಇರಬೇಕೆಂಬುದನ್ನು ಬ್ರಿಟಿಷ್ ಸರ್ಕಾರ ತೀರ್ಮಾನಿಸಿರಬೇಕು ಮತ್ತು ಯಾವ ವಿಧದ ಸಂವಿಧಾನವನ್ನು ಈ ಸಭೆ ಅಂಗೀಕರಿಸಬೇಕೆಂಬುದೂ ಅದರ ತೀರ್ಮಾನಕ್ಕೇ ಬಿಟ್ಟಿದ್ದು. ಉದಾಹರಣೆಗೆ ಅಮೆರಿಕಾ ಸಂಯುಕ್ತ ರಾಷ್ಟ್ರಗಳ ನಿದರ್ಶನವಿದೆ : ಸಮರಾನಂತರ (೧೭೭೪–೭೫) ಆ ರಾಷ್ಟ್ರ ಸಂವಿಧಾನವನ್ನು ರಚಿಸಿತು. ಅದೊಂದು ಭೀಷಣ ಕ್ರಾಂತಿ ಎಂದು ಕರೆಯಲು ಇಚ್ಛಿಸುತ್ತೇನೆ. ಯುದ್ಧಾನಂತರ ರಚಿಸಲ್ಪಟ್ಟ ಸಂವಿಧಾನ ಅಥವಾ ಭೀಷಣ ಸಂವಿಧಾನಗಳಲ್ಲಿ ಒಂದು. ಅನಂತರ ಮಾತುಕತೆಗಳ ಫಲಶ್ರುತಿಯಾಗಿ ೧೯ನೇ ಶತಮಾನದಲ್ಲಿ ಹಲವಾರು ಸಂವಿಧಾನಗಳು ರಚಿಸಲ್ಪಟ್ಟುದು ನಮ್ಮ ಗಮನಕ್ಕೆ ಬಂದಿದೆ. ನಂತರ ೧೮೬೭ರಲ್ಲಿ ಕೆನಡಾ ಅಧಿಪತ್ಯ ಒಂದು ಮಹಾಸಭೆಯಾಗಿ ತಲೆಯೆತ್ತಿತು. ಶಾಂತಿಯುತ ವಾತಾವರಣದಲ್ಲಿ ನಡೆದ ಮಾತುಕತೆಗಳ ಫಲವಾಗಿ ಈ ಅಧಿಪತ್ಯದ ಸಂವಿಧಾನ ರಚಿಸಲ್ಪಟ್ಟು, ಬ್ರಿಟಿಷ್

ಸರ್ಕಾರ ಅನುಮೋದಿಸಿತು. ಮತ್ತೆ ೧೯೦೦ರಲ್ಲಿ ಆಸ್ಟ್ರೇಲಿಯಾ ಕಾಮನ್‌ವೆಲ್ತ್ ಅಸ್ತಿತ್ವಕ್ಕೆ ಬಂತು. ಅದೂ ಸಹ ಶಾಂತಿಯುತ ಮಾತುಕತೆಗಳಿಂದ ರಚಿತವಾದ ಸಂವಿಧಾನದ ಮೂಲಕ ನೆಲೆಗೊಂಡಿತು. ಮತ್ತು ದಕ್ಷಿಣ ಆಫ್ರಿಕ ಒಕ್ಕೂಟದ, ಇನ್ನೊಂದು ನಿದರ್ಶನ ನಮ್ಮ ಮುಂದಿದೆ. ನಂತರ ೧೯೦೯ರಲ್ಲಿ ಆ ಒಕ್ಕೂಟ ಕಾಮನ್‌ವೆಲ್ತ್ ಆಗಿ, ಶಾಂತ ವಾತಾವರಣದಲ್ಲಿ ರೂಪುಗೊಂಡು ಅಂಗೀಕರಿಸಲ್ಪಟ್ಟ ಸಂವಿಧಾನದ ಮೂಲಕ ಅಂಗೀಕರಿಸಲ್ಪಟ್ಟಿತು. ಅದರ ಬಳಿಕ ನಮ್ಮ ಕಣ್ಣ ಮುಂದಿರುವ ಇತ್ತೀಚಿನ ಉದಾಹರಣೆ ಎಂದರೆ ಐರ್ಲೆಂಡ್. ೧೯೨೧ರಲ್ಲಿ ಬ್ರಿಟಿಷ್ ಸರ್ಕಾರದೊಡನೆ ಒಂದು ಒಡಂಬಡಿಕೆ ಮಾಡಿಕೊಳ್ಳುವಂತೆ, ಐರ್ಲೆಂಡ್‌ಗೆ ಸೂಚಿಸಲಾಯಿತು. ಅದು ನಡೆದುದು ಒಂದು ಗೆರಿಲ್ಲಾ ಕಾಳಗದ ನಂತರ ಎಂದರೆ ಸಿನ್ ಫೀನ್ ಚಳವಳಿಯ ಬಳಿಕ ಅದೊಂದು ಲಂಬಿತ ಚಳವಳಿ; ಬ್ರಿಟಿಷ್ ಸರ್ಕಾರ ತನ್ನೆಲ್ಲ ಬಲಪ್ರಯೋಗದಿಂದ ಮಾಡಬಹುದಾದ ಕಾರ್ಯಗಳನ್ನು ಮಾಡಿ ಮುಗಿಸಿದ ನಂತರವೆ, ಅಲ್‌ಸ್ಟರ್ ಅಸ್ತಿತ್ವಕ್ಕೆ ಬಂದಿತು. ಐರ್ಲೆಂಡ್ ಪ್ರಕರಣ ಇತ್ತೀಚಿನದು. ಇದು ಬ್ರಿಟಿಷ್ ಸರ್ಕಾರದ ಮತ್ತು ಪ್ರಸ್ತುತ ಬ್ರಿಟಿಷ್ ಮಂತ್ರಿ ಮಂಡಳದ ಸಂಪುಟ ಸಭೆಯ ಮಿದುಳಲ್ಲಿ ಅಚ್ಚಳಿಯದೆ ಉಳಿಯುವ ಪ್ರಕರಣ. ಐರಿಷ್ ಪ್ರಜೆಗಳ ಮನಸ್ಸಿನಲ್ಲಿ ಮೂಡಿದ ಗಾಯ ಮಾಸುವುದಿಲ್ಲ. ಚಿರಕಾಲ ಹಸಿಯಾಗಿಯೇ ಉಳಿಯುತ್ತದೆ. ಅತಂತ್ರ ಆವರಿಸಿರುವ ಸ್ಥಿತಿ ಇನ್ನೂ ಅಂತೆಯೇ ಮುಂದುವರಿದಿದೆ. ಭಾರತ, ಈ ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸುವುದಾದರೆ, ಭಾರತ ಸಂವಿಧಾನವನ್ನು ರಚಿಸುವುದಾದರೆ, ಆ ಸಂವಿಧಾನ ಐರ್ಲೆಂಡ್ ಮಾದರಿಯ ಸಂವಿಧಾನವೋ, ಅಮೆರಿಕ ಸಂಯುಕ್ತ ರಾಷ್ಟ್ರಗಳ ಮಾದರಿಯೋ, ಅಥವಾ ಶಾಂತಿಯುತ ವಾತಾವರಣದಲ್ಲಿ ಅಸ್ತಿತ್ವಕ್ಕೆ ಬರುವುದೋ ಎಂಬುದನ್ನು ಬ್ರಿಟಿಷ್ ಸರ್ಕಾರ ನಿರ್ಧರಿಸಬೇಕೆಂಬುದನ್ನು ನಾನು ಪುನರುಚ್ಚರಿಸುತ್ತೇನೆ. ಬ್ರಿಟಿಷ್ ಸರ್ಕಾರ ಐರ್ಲೆಂಡ್‌ನಲ್ಲಿ ಮತ್ತಿತರ ಅನೇಕ ರಾಷ್ಟ್ರಗಳಲ್ಲಿ ಪ್ರಯೋಗಿಸಿದ ಆಲ್‌ಸ್ಟರ್ ಕ್ರಮವನ್ನೇ ಇಲ್ಲೂ ಅಳವಡಿಸುವ ಲಕ್ಷಣಗಳು ಕಾಣುತ್ತಿವೆ. ಅದು ಆ ರಾಷ್ಟ್ರಗಳಲ್ಲಿ ಮಾಡಿದ ಪ್ರಯೋಜನವನ್ನೇ, ಇಲ್ಲೂ ಮಾಡುವುದಾದರೆ ಅದರ ಪರಿಣಾಮ. ಇನ್ನೊಂದು ಐರ್ಲೆಂಡ್ ದೃಷ್ಟಾಂತ ಹುಟ್ಟಿಕೊಳ್ಳುವುದಷ್ಟೆ ಬ್ರಿಟಿಷ್ ಸರ್ಕಾರ ತನ್ನ ಆಗ್ರಹಪೂರ್ವಕವಾದ ಕ್ರಮಗಳನ್ನು, ರಾಯಭಾರ ನಿರ್ವಹಣಾ ಕೌಶಲ್ಯವನ್ನು ಪ್ರಯೋಗಿಸಿ, ಈ ಸಂವಿಧಾನ ರಚನಾ ಸಭೆಯಲ್ಲಿ ಒಂದು ಯಶೋಗಾಥೆಯನ್ನಾಗಿ ಪರಿವರ್ತಿಸಲು, ತನ್ನೆಲ್ಲ ಸಾಮರ್ಥ್ಯವನ್ನು ನಮ್ಮ ಸಹಕಾರದೊಡನೆ ವಿನಿಯೋಗಿಸುವುದು ಉಚಿತ ಎಂದು ಬ್ರಿಟಿಷ್ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತ ನನ್ನ ಉದ್ಘೋಷವನ್ನು ಪುನರುಚ್ಚರಿಸುತ್ತಿದ್ದೇನೆ.

ಮಾನ್ಯರೆ, ಈ ಹಂತದಲ್ಲಿ ನಾನು ಹೆಚ್ಚೇನೂ ಹೇಳಬಯಸುವುದಿಲ್ಲ. ಸ್ವತಂತ್ರ ಭಾರತದ ಅಸ್ತಿತ್ವಕ್ಕೆ ಈ ನಿರ್ಣಯ ಒಂದು ಶಪಥವಾಗುತ್ತದೆ ಹಾಗೂ ಶ್ರದ್ಧಾಪೂರ್ವಕ ನಿರ್ಣಯವಾಗುತ್ತದೆ. ಎಂಬ ಮಾತನ್ನು ಮತ್ತೆ ಹೇಳಬಯಸುತ್ತೇನೆ. ಆ ನಿರ್ಣಯಕ್ಕೆ ಮಂಜೂರಾತಿಯ ಬೆಂಬಲ ದೊರೆಯಬೇಕು. ಆ ಅನುಮತಿ ದೊರೆಯಬೇಕಿರುವುದು ನಮ್ಮ ಚಿತ್‌ಸಂಕಲ್ಪದಿಂದಲೆ, ನಮ್ಮ ದೃಢ ನಿರ್ಧಾರದಿಂದಲೆ. ಇದು, ನಮ್ಮಲ್ಲಿ ಕಳುಹಿಸಿರುವ ಅಖಂಡ ಭಾರತದ ಮನೋಸಂಕಲ್ಪ ಮತ್ತು ನಿರ್ಧಾರವನ್ನು ಪ್ರತಿನಿಧಿಸುತ್ತದೆ. ಮಾನ್ಯರೆ, ಈ ಸಂವಿಧಾನ ರಚನಾಸಭೆ, ಸ್ವತಂತ್ರ ಭಾರತದ ಉದಯಕ್ಕಾಗಿ ಸಂವಿಧಾನವೊಂದನ್ನು ಶಾಂತಿಯುತವಾಗಿ, ರಚಿಸಬಲ್ಲುದೆಂಬ ಭರವಸೆ ನನಗಿದೆ. ಶಾಂತಿ ಮಾರ್ಗದಲ್ಲಿ ಸಾಧ್ಯವಿಲ್ಲದೆ ಇದ್ದರೆ ಬ್ರಿಟಿಷ್ ಸರ್ಕಾರವು ಆಯ್ಕೆ ಮಾಡಬಹುದಾದ ಅನ್ಯ ಮಾರ್ಗದಲ್ಲಾದರೆ, ಅದನ್ನು ನಾವು ಅಳವಡಿಸುವುದು ಅನಿವಾರ್ಯವಾಗುತ್ತದೆ. ನಾನು ಹೇಳಬೇಕಾದುದು ಹೆಚ್ಚೇನಿಲ್ಲ. ನಾನು ಈ ನಿರ್ಣಯವನ್ನು ಬೆಂಬಲಿಸುತ್ತೇನೆ. ಕೊನೆಯದಾಗಿ, ಡಾ। ಜಯಕರ್ ಅವರು ಮಂಡಿಸಿದ ತಿದ್ದುಪಡಿಯಿಂದ ಯಾವ ಉದ್ದೇಶವೂ ಈಡೇರಿದಂತಾಗುವುದಿಲ್ಲವೆಂಬ ಕಾರಣಕ್ಕಾಗಿ, ಅದನ್ನು ಸಕಾಲಕ್ಕೆ ಹಿಂತೆಗೆದುಕೊಳ್ಳಲಾಗುವುದು.

**ಶ್ರೀ ಅಲಘು ರಾಯ್ ಶಾಸ್ತ್ರಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ)

ಸನ್ಮಾನ್ಯ ಅಧ್ಯಕ್ಷರೆ,

ನಮ್ಮ ರಾಷ್ಟ್ರದ ಅಚ್ಚುಮೆಚ್ಚಿನ ನಾಯಕ ಪಂಡಿತ ಜವಾಹರ್ ಲಾಲ್ ನೆಹರು ಅವರು ಮುಂದಿಟ್ಟ ನಿರ್ಣಯವನ್ನು ಬೆಂಬಲಿಸಲು, ಇಲ್ಲಿ ನಿಮ್ಮೆದುರು ನಿಂತಿದ್ದೇನೆ. ಮುಕ್ತ ಸ್ವತಂತ್ರ ಭಾರತಕ್ಕಾಗಿ, ಸಂವಿಧಾನವೊಂದನ್ನು ರಚಿಸಲು ಸೇರಿರುವ ಸಭೆಯಲ್ಲಿ ಭಾಗವಹಿಸುವ ಅದೃಷ್ಟ ಬೇರಾವ ಭಾರತೀಯನಿಗೂ ಇರಲಾರದು. ಈ ಸದನದಲ್ಲಿ ಸಂವಿಧಾನವನ್ನು ರೂಪುಗೊಳಿಸುವುದಕ್ಕಿಂತ ಹೆಚ್ಚಿನ ಹಕ್ಕು ಭಾರತೀಯನಿಗೆ ಮತ್ತೇನಿದೆ? ಈ ನಿರ್ಣಯದಲ್ಲಿ ಅಭಿವ್ಯಕ್ತವಾದ ಅಂಶಗಳಿಗೂ ಸಂವೇದನೆಗಳಿಗೂ ಸ್ಪಂದಿಸಲು ಪ್ರತಿಯೊಬ್ಬ ಭಾರತೀಯನೂ ಕಾತುರನಾಗಿದ್ದಾನೆ. ಈ ನಿರ್ಣಯ ಹೊತ್ತು ತಂದಿರುವ ಉದಾತ್ತ ಆಲೋಚನೆಗಳು ಮತ್ತು ಸಂವೇದನೆಗಳು ಭಾರತೀಯರ ಶತಮಾನಗಳ ನೆಚ್ಚಿನ ಆಶೋತ್ತರಗಳನ್ನು ಬಿಂಬಿಸುತ್ತವೆ. ಅದೊಂದು ಕಾಲವಿತ್ತು. ನಮ್ಮ ದೇಶ ಅತ್ಯಂತ ವೈಭವಪೂರ್ಣವಾಗಿಯೂ, ಸ್ವತಂತ್ರವಾಗಿಯೂ ವಿಜೃಂಭಿಸಿದ ಅತಿ ದೊಡ್ಡ ದೇಶವಾಗಿತ್ತು. ಶತಮಾನಗಳಿಂದ ಭಾರತ ಗುಲಾಮಗಿರಿಗೆ ಸಿಕ್ಕು ಕ್ಷೀಣಿಸಿದೆ; ದುರ್ಬಲಗೊಂಡಿದೆ. ಈ ರಾಷ್ಟ್ರದ ಯುವಕ ಯುವತಿಯರು, ವೃದ್ಧರು ಕಷ್ಟ ಕೋಟಲೆಗಳ ವಿರುದ್ಧ ಸೆಣಸುತ್ತಿದ್ದಾರೆ. ಗುಲಾಮಗಿರಿಯ ಸಂಕೋಲೆಯಿಂದ ಬಿಡಿಸಿಕೊಳ್ಳಲು ಹೆಣಗುತ್ತಿದ್ದಾರೆ; ಅವರ ಹೆಬ್ಬಯಕೆ ಜ್ವಲಂತವಾಗಿದೆ. ಕೊನೆಗೂ, ಈ ನಿರ್ಣಯದ ಮೊದಲ ಕಂಡಿಕೆಯಲ್ಲಿ ತಿಳಿಸಿದಂತೆ, ನಮ್ಮ ರಾಷ್ಟ್ರವನ್ನು ಮುಕ್ತ ರಾಷ್ಟ್ರವೆಂದೂ, ಸ್ವತಂತ್ರ ರಾಷ್ಟ್ರವೆಂದೂ ಘೋಷಿಸಲು, ನಾವಿಲ್ಲಿ ಸಭೆ ಸೇರಿದ್ದೇವೆ. ಇಂದು ನಮ್ಮ ರಾಷ್ಟ್ರದ ಬಿಡುಗಡೆಯನ್ನು ಬಯಸುವುದಕ್ಕಿಂತಲೂ, ಹಿರಿಯ ಬಯಕೆ ಏನೂ ಇರಲಾರದು. ವಾಸ್ತವವೇನೆಂದರೆ ಇಲ್ಲಿ ನಾವಿರುವುದು ಭಾರತ ಸ್ವತಂತ್ರ ರಾಷ್ಟ್ರವೆಂದು ಘೋಷಿಸುವುದಕ್ಕಲ್ಲ. ಕಾರ್ಯಸಾಧ್ಯ ದೃಷ್ಟಿಯಿಂದ, ನಾವು ಮುಕ್ತರು, ಸ್ವತಂತ್ರರು ಎಂದು ಘೋಷಿಸುತ್ತೇವೆ. ಅದು ನಮ್ಮ ಅಚಲ ನಿರ್ಧಾರ. ಇಲ್ಲಿ ನಾವು ಘೋಷಿಸುತ್ತಿರುವ ಸ್ವತಂತ್ರ ಭಾರತಕ್ಕೆ ದುರದೃಷ್ಟವಶಾತ್ ಬ್ರಿಟಿಷ್ ಇಂಡಿಯಾ ಎಂಬ ಹೆಸರಿನ ಭಾರತದ ಒಕ್ಕೂಟದ ರಾಜ್ಯ ಕ್ಷೇತ್ರಗಳು ಸೇರಿವೆ ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ. ಬ್ರಿಟಿಷ್ ಇಂಡಿಯಾ ಎಂಬುದು ಭಾರತವಲ್ಲ. ಸಮಗ್ರ ಭಾರತವೇ ಭಾರತ. ಬ್ರಿಟಿಷ್ ಸರ್ಕಾರದ ಆಳ್ವಿಕೆಗೆ ಒಳಪಟ್ಟಿರುವ ಭಾರತದ ಕೆಲ ಭಾಗಗಳು ಮಾತ್ರವಲ್ಲದೆ, ಬ್ರಿಟಿಷ್ ಇಂಡಿಯಾದ ಹೊರಗಣ ಭಾರತೀಯ ರಾಜ್ಯಕ್ಷೇತ್ರಗಳು ಎಂದರೆ ಸಾರ್ವಭೌಮತ್ವ ಅಡಿಯಲ್ಲಿರುವ ಪ್ರತ್ಯೇಕ ಘಟಕಗಳೂ ಕೂಡ, ಈ ಬೃಹತ್ತಾದ, ಮುಕ್ತ ರಾಷ್ಟ್ರದ ಪರಿಧಿಯೊಳಗೆ ಸೇರಬೇಕೆಂಬುದು ನನ್ನ ಇಚ್ಛೆ. ವಿದೇಶಿ ಆಧಿಪತ್ಯದಲ್ಲಿರುವ ಪಾಂಡಿಚೇರಿ, ಗೋವಾ, ದಾಮನ್ ಮತ್ತು ಡಿಯೂ ಕೂಡ ಭಾರತದ ಭಾಗಗಳೆ. ಇವೆಲ್ಲದರ ಜೊತೆಗೆ ಗಡಿರಾಷ್ಟ್ರಗಳಾದ ನೇಪಾಲ, ಭೂತಾನ ಮತ್ತು ಸಿಕ್ಕಿಂ ರಾಜ್ಯಗಳೂ ಸಹ ಈ ಸ್ವತಂತ್ರ ಭೂಮಿಗೆ ಸೇರಬೇಕೆಂಬುದು ನನ್ನ ಅಭಿಲಾಷೆ. ಇದು ನಿರ್ಣಯದ ಪರಿಕಲ್ಪನೆ. ಸಮಾನತೆ, ಸೌಭ್ರಾತೃತ್ವ ಮತ್ತು ಬಂಧುತ್ವ ಎಂಬೆಲ್ಲ ಸನಾತನ ಮಾನವೀಯ ಆದರ್ಶಗಳು ಈ ನಿರ್ಣಯದಲ್ಲಿ ಅಭಿವ್ಯಕ್ತಗೊಂಡಿವೆ. ಋಗ್ವೇದದ ಎಂಟನೆಯ ಮಂಡಲದ ಒಂದು ಸೂಕ್ತಿ ಹೀಗಿದೆ–ಎಲ್ಲ ಮಾನವ ಜೀವಿಗಳು ಸಮಾನರೆ, ತಾಯಿ, ತನ್ನ ಮಕ್ಕಳ ಮೇಲಿಟ್ಟಿರುವ ಪ್ರೀತಿವಾತ್ಸಲ್ಯಗಳಂತೆ ಪ್ರಭು ತನ್ನ ಪ್ರಜೆಗಳ ಮೇಲೆ ಪ್ರೀತಿ ಇಟ್ಟಿರಬೇಕು.

ಅನ್ನಾಭಾವ, ವಸನಾಭಾವವಿಲ್ಲದ ಸಮಾನ ವಿತರಣೆಗೆ ಅವಕಾಶವಿರುವ ಸರ್ಕಾರ, ಈ ನಿರ್ಣಯದ ಕಣ್ಣೆದುರಿಗೆ ಇದೆ. "ಪ್ರತಿಯೊಬ್ಬನಿಗೂ ಅವನ ಅಗತ್ಯಕ್ಕನುಗುಣವಾಗಿ, ಪ್ರತಿಯೊಬ್ಬನಿಂದಲೂ ಅವನ ಸಾಮರ್ಥ್ಯಕ್ಕನುಗುಣವಾಗಿ" ಎಂದಾಗ, ಅದು ವೈಜ್ಞಾನಿಕ, ಸಾಮಾಜಿಕ ಆದರ್ಶಗಳನ್ನು ಪ್ರತಿಬಿಂಬಿಸುತ್ತದೆ. ಭಾಗವತದಲ್ಲಿ ಉಕ್ತವಾಗಿರುವಂತೆ ಎಲ್ಲ ಆದರ್ಶಗಳನ್ನು ಒಳಗೊಂಡ ಸರ್ಕಾರ ಈ ನಿರ್ಣಯದ ಕಲ್ಪನೆಯಲ್ಲಿದೆ; ಭಾಗವತದಲ್ಲಿ ಹಿಗೊಂದು ಉಕ್ತಿ ಇದೆ:–

"ಅನ್ನಾದೇಃ ಸಂ ವಿಭಾಗಃ ಪ್ರಜಾನಾಂ ಯಥಾಹಿತಃ"

ಜನರಿಗೆ, ಅವರ ಎಲ್ಲ ಅಗತ್ಯಗಳನ್ನು ಪೂರೈಸುವುದು ಸರ್ಕಾರದ ಪವಿತ್ರ ಕರ್ತವ್ಯ.

ಪುರುಷರ ಸಮಾನತೆಯನ್ನು ನಿರ್ಣಯ ದೃಢೀಕರಿಸುತ್ತೆ. ಈಗಿರುವಂತೆ ಎಲ್ಲ ವರ್ಗಗಳ ತಾರತಮ್ಯವನ್ನು

ನಿವಾರಿಸಲು ಬಯಸುತ್ತೇವೆ. ಸಮಾನತೆಯ ಆಧಾರದ ಮೇಲೆ ಪುರುಷರು ಪರಸ್ಪರ ವರ್ತಿಸಬೇಕು. ನಿರ್ಣಯ ಈ ತೆರನಾದ ಸಮಾನತೆಯನ್ನು ಸಮರ್ಥಿಸುತ್ತದೆ. ಆದುದರಿಂದ ನಾವು ಅದನ್ನು ಬೆಂಬಲಿಸುತ್ತೇವೆ. ಜಾಗತಿಕ ಮುಖ್ಯವಾಹಿನಿಯಲ್ಲಿ ತೊಡಗದೆ ದೂರ ಉಳಿಯುವ ತನ್ನ ಒಳಿತು ಕೆಡುಕಿನ ಬಗ್ಗೆ ಲಕ್ಷ್ಯ ಕೊಡದ ಸರ್ಕಾರವನ್ನು ಸೃಷ್ಟಿಸುವುದು ನಿರ್ಣಯದ ಕಲ್ಪನೆಯಲ್ಲ. ಸನಾತನ ತತ್ತ್ವಗಳಿಗೆ ಬದ್ಧವಾದ ಈ ಬೃಹತ್ ಸ್ವತಂತ್ರ ರಾಷ್ಟ್ರ ತನ್ನ ಅಭ್ಯುದಯ ಮತ್ತು ಸಂವೃದ್ಧಿಯ ಆಶೋತ್ತರಗಳನ್ನು ಪೂರೈಸುತ್ತದೆಂಬ ಭರವಸೆ ಕೊಡುತ್ತದೆ. ನಮ್ಮ ದೇಶ ಮತ್ತದರ ಎಲ್ಲ ಸಂಪನ್ಮೂಲಗಳು, ಜಗತ್ತಿನ ಒಳಿತಿಗಾಗಿ ಬಳಕೆಯಾಗಬೇಕೆಂದು ಕರೆ ಕೊಡುತ್ತದೆ. ಮಾನವ ಕಲ್ಯಾಣ ಮತ್ತು ಸಮಾನತೆಯ ಮೂಲತತ್ವಗಳ ಆಧಾರದ ಮೇಲೆ ಪ್ರಪಂಚದ ಇತರ ರಾಷ್ಟ್ರಗಳೊಡನೆ ಬಾಂಧವ್ಯವನ್ನು ಬೆಳೆಸಬೇಕೆಂಬುದು ನಿರ್ಣಯಕಾರರ ಆಶಯ. ಋಗ್ವೇದದ ಆಶ್ವಾಸನೆಯನ್ನು ಸಾಕಾರಗೊಳಿಸುವಂತೆ ನಾವು ಬದುಕನ್ನು ಕಟ್ಟಿಕೊಳ್ಳಬೇಕು.

"ದೇವಹಿತಂ ಯದಾಯುಃ"

ನಮ್ಮ ಸಶಕ್ತ, ಅಭಿವೃದ್ಧಿನಿರತ ಹಾಗೂ ಸಂಪದ್ಭರಿತ ರಾಷ್ಟ್ರ ತನ್ನ ಒಳಿತಿಗಾಗಿಯೇ ಇರದೆ, ತನ್ನೆಲ್ಲ ಸಂಪನ್ಮೂಲವನ್ನು ಜಗದ ಒಳತಿಗಾಗಿ ವಿನಿಯೋಗಿಸಬೇಕು. ನಿರ್ಣಯ ಒಂದು ಮಹತ್ತಾದ ಉದಾತ್ತವಾದ ಆದರ್ಶವನ್ನು ನಮ್ಮ ಮುಂದಿಟ್ಟಿದೆ. ನಮ್ಮ ರಾಜ್ಯ ಸಂಪೂರ್ಣ ಸ್ವಾತಂತ್ರ್ಯದಿಂದ ವಂಚಿತವಾಗಿದ್ದು, ಅದರ ಮರುಸೃಷ್ಟಿಯಲ್ಲಿ ತೊಡಗುವುದನ್ನು ಈ ನಿರ್ಣಯ ಘೋಷಿಸುವುದೇ, ಅದರ ಅತಿ ಮುಖ್ಯವಾದ ಗುಣ. ನಾವು ಮತ್ತೆ ಗಳಿಸಿದ ಸ್ವಾತಂತ್ರ್ಯವನ್ನು ಜತನದಿಂದ ಕಾಯ್ದುಕೊಳ್ಳಲು, ನಮ್ಮ ರಾಷ್ಟ್ರದ ಸರ್ಕಾರವನ್ನು ಸುಭದ್ರಗೊಳಿಸಬೇಕು. ನಿರ್ಣಯದಲ್ಲಿ ವ್ಯಕ್ತವಾಗಿರುವ ದೃಢ ನಿರ್ಧಾರಕ್ಕೂ, ಋಗ್ವೇದದ ಮಂತ್ರ ತರುವ ಪ್ರಾಚೀನ ಆದರ್ಶಕ್ಕೆ ಬಹಳಷ್ಟು ಹೊಂದಾಣಿಕೆ ಇದೆ.

"ಇಂದ್ರಸ್ತ್ವಭಿರಕ್ಷತು"

ಒಂದು ರಾಷ್ಟ್ರದ ಸೇನಾಪಡೆ ದುರ್ಬಲವಾಗಿದ್ದರೆ ಅಂತಹ ಯಾವ ರಾಷ್ಟ್ರವೂ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾರದು. ನಿರ್ಣಯದಲ್ಲಿ ಈ ವಾಸ್ತವವನ್ನು ಒಪ್ಪಿಕೊಳ್ಳಲಾಗಿದೆ. ಆದುದರಿಂದ ನಾನು ಅದನ್ನು ಬೆಂಬಲಿಸುತ್ತೇನೆ. ಜನಬೆಂಬಲವಿರುವ ಸರ್ಕಾರವಷ್ಟೆ ಸುಭದ್ರತೆಯನ್ನು ಅನುಭವಿಸಬಲ್ಲದು. ಎಲ್ಲ ಜನತೆಗೂ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಆಶ್ವಾಸನೆ ನೀಡುವ ನಿರ್ಣಯದ ದೃಷ್ಟಿಯಲ್ಲಿರುವುದು ಅಪ್ಪಟ ಪ್ರಜಾಪ್ರಭುತ್ವ ರಾಜ್ಯ ಮತ್ತು ಜನತಾ ಸರ್ಕಾರ. ಈ ನಿರ್ಣಯದಲ್ಲಿ, ಶಾಸನದ ಅಧಿಕಾರ ಪಡೆದ ರಾಜ್ಯವನ್ನು ಚಿತ್ರಿಸಲಾಗಿದೆ. ಈ ಅಧಿಕಾರ ಜನತೆಯ ಕೈಯಲ್ಲಿದೆ. ಇಲ್ಲಿ ಆಳುವ ಮತ್ತು ಆಳಲ್ಪಡುವವರ ನಡುವೆ ಭೇದವಿಲ್ಲ. ಮಹಾಕವಿ ಕಾಳಿದಾಸನ ಮಾತಿನಲ್ಲಿ ಹೇಳುವುದಾದರೆ, ಒಂದು ಆದರ್ಶ ರಾಜ್ಯ ಪಿತೃ ಸಮಾನ. ಅದು ತನ್ನ ಜನತೆಗೆ ರಕ್ಷಣೆ, ಶಿಕ್ಷಣ ಮತ್ತು ನಿರ್ವಹಣೆಯ ಖಾತರಿ ಕೊಡುತ್ತದೆ.

ಈಗಿರುವಂತಹ, ಆಳುವ ಮತ್ತು ಆಳಲ್ಪಡುವವರ ನಡುವೆ ಇರುವ ಖಂಡನೀಯವಾದ ಭೇದವೆಣಿಸದ ರಾಜ್ಯವೇ ಆದರ್ಶ ರಾಜ್ಯವೆಂದು ಹೇಳಿಕೊಳ್ಳಲು ಸಮರ್ಥವಾದುದು. ಆ ರಾಜ್ಯದಲ್ಲಿ ಆಳುವವರಿಂದ ಜನಗಳು ಶೋಷಣೆಗೆ ಒಳಗಾಗುವ, ದಮನಕ್ಕೆ ಒಳಗಾಗುವ ಅವಕಾಶವಿರದು.

ಋಗ್ವೇದದ ಉನ್ನತ ಆದರ್ಶಗಳನ್ನು ಆಧರಿಸಿದ ರಾಜ್ಯವನ್ನು ಜನತೆ ಕಲ್ಪಿಸಿಕೊಳ್ಳುತ್ತದೆ; ಮತ್ತು ಅದನ್ನು ಬಯಸುತ್ತದೆ. ಸಭೆಯ ಮುಂದಿರುವ ನಿರ್ಣಯ ಅಂಥದೊಂದು ರಾಜ್ಯವನ್ನು ಕಲ್ಪಿಸಿಕೊಳ್ಳುವುದರಿಂದ ನಾನದನ್ನು ಬೆಂಬಲಿಸುತ್ತೇನೆ. ನಮ್ಮ ಕಲ್ಪನೆಯಲ್ಲಿರುವ ಸ್ವಾತಂತ್ರ್ಯ ನಮ್ಮ ಸ್ವಹಿತ ಸಾಧನೆಗೆ ಅಲ್ಲವೆಂಬುದನ್ನು ಈ ನಿರ್ಣಯ ಜಗತ್ತಿಗೆ ಕಂಡರಿಸಲು ನಮಗೆ ಅವಕಾಶ ನೀಡುತ್ತದೆ. ಜನತೆಯ ಇಚ್ಛೆಗೆ ವಿರುದ್ಧವಾಗಿ ಆಳುವುದು ಸ್ವಾತಂತ್ರ್ಯದ ಉದ್ದೇಶವಲ್ಲ. ಈ ನಿರ್ಣಯದಲ್ಲಿ ಎಲ್ಲ ವೈದಿಕ ಆದರ್ಶಗಳೂ ತುಂಬಿವೆ. ರಾಜ್ಯದ ಸಂರಕ್ಷಣೆ ಜನತೆಯ ಯೋಗಕ್ಷೇಮ ನಿರ್ವಹಣೆಯಂತಹ ಉದಾತ್ತ ಆದರ್ಶಗಳು ಮುಸ್ಲಿಮರ ಆಳ್ವಿಕೆಯಲ್ಲಿ,

ಪ್ರಜೆಗಳ ಗೌರವಕ್ಕೆ ಪಾತ್ರವಾಗಿದ್ದವು–ಹಜ಼ರತ್ ಉಮರ್‌ನಿಂದ ಬಹಾದುರ್ ಷಾ ವರೆಗೆ. ಆ ಎಲ್ಲ ಆದರ್ಶಗಳು ಈ ನಿರ್ಣಯದಲ್ಲೂ ಅಡಕಗೊಂಡಿವೆ. ಮಹಮದ್ ಬಿನ್ ಕಾಸಿಮ್ ಸಿಂಧ್ ಪ್ರಾಂತ್ಯವನ್ನು ಗೆದ್ದುಕೊಂಡಾಗ ಖಲೀಫರಿಗೊಂದು ಪತ್ರ ಕಳುಹಿಸಿದ್ದರು. ಅದರಲ್ಲಿ, ಪರಾಭವಗೊಂಡವರನ್ನು ಆಳುವುದು ಹೇಗೆಂದು ಮಾರ್ಗದರ್ಶನ ಕೋರಿದ್ದರು. ಖಲೀಫರು ಉತ್ತರ ರೂಪದಲ್ಲಿ ಬರೆದ ಪತ್ರ ಒಂದು ಪ್ರಮುಖ ದಾಖಲೆ ಹಾಗೂ ಇತಿಹಾಸದ ತವನಿಧಿ ಎಂದು ಹೇಳಬಹುದು. ಖಲೀಫರ ಆದೇಶಗಳು ಹಜ಼ರತ್ ಉಮರ್‌ನ ಆದರ್ಶಗಳನ್ನು ಬಿಂಬಿಸುತ್ತಿದ್ದವು. ಆತ [ಮಹಮದ್ ಬಿನ್ ಕಾಸಿಂ] ಪ್ರಜೆಗಳ ಬಗ್ಗೆ ಪಿತೃವಾತ್ಸಲ್ಯ ತೋರಬೇಕೆಂದೂ, ಅವರ ಜೀವರಕ್ಷಣೆಯಲ್ಲಿ ಕಾಳಜಿ ವಹಿಸಬೇಕೆಂದು ಪತ್ರದಲ್ಲಿ ಕಿವಿಮಾತು ಹೇಳಲಾಗಿತ್ತು. ಪ್ರಜೆಗಳ ಆಸ್ತಿಪಾಸ್ತಿ ಮತ್ತು ಅವರ ಪ್ರಾರ್ಥನಾ ಮಂದಿರಗಳನ್ನೂ ಕಾಪಾಡುವಂತೆ ಅವರು ಬೋಧಿಸಿದ್ದರು. ಈ ಆದರ್ಶಗಳನ್ನು ಅನುಸರಿಸುತ್ತ ಬಂದ ಹುಮಾಯೂನ್ ಕೂಡ, ತನ್ನ ಮಗ ಅಕ್ಬರನಿಗೆ ಅಂತೆಯೇ ಆಳುವಂತೆ ಹೇಳಿದ. ಅಕ್ಬರನ ಐನ್–ಇ–ಅಕ್ಬರಿ ಗ್ರಂಥ ಆಳುವ ಅರಸರ ಮತ್ತು ಪ್ರಜೆಗಳ ನಡುವಣ ಸಂಬಂಧವನ್ನು ವಿಶ್ಲೇಷಿಸಲಾಗಿದೆ. ಆದರೆ ಅದರಲ್ಲಿ ಜನತೆಯನ್ನು ದಮನಕ್ಕೆ ಒಳಪಡಿಸಿ, ಸ್ವಾತಂತ್ರ್ಯದಿಂದ ವಂಚಿತರಾಗುವಂತೆ ಮಾಡಬೇಕೆಂಬ ಆದೇಶ ಎಲ್ಲೂ ಕಂಡುಬಂದಿಲ್ಲ. ನಮ್ಮ ಹಿಂದಿನ ದೊರೆಗಳು ಈ ಆದರ್ಶಗಳ ಪಡಿನೆಳಲಲ್ಲಿ ಸಾಗಿದರು. ಅವುಗಳ ನವೀಕರಣಕ್ಕಾಗಿ ನಾವಿಲ್ಲಿ ಸಮಾವೇಶಗೊಂಡಿದ್ದೇವೆ. ಈ ನಿರ್ಣಯ ಅಂತಹ ಉದಾತ್ತ ಕರ್ತವ್ಯದೆಡೆಗೆ ನಮ್ಮನ್ನು ಕರೆದೊಯ್ಯುತ್ತಿದೆ.

ನಾವು ಆಂಗ್ಲಭಾಷೆಯಲ್ಲಿ ನಿವೇದಿಸಿದುದನ್ನು, ಮದರಾಸಿನಿಂದ ಆಗಮಿಸಿರುವ ಸದಸ್ಯರು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಈ ಸದನದ ನಡವಳಿಗಳು ಕೂಡ ಸುಲಲಿತವಾಗಿ ಪ್ರಚಾರ ಪಡೆಯುತ್ತವೆ. ಆದರೆ ನಾನಿಲ್ಲಿ ಹಿಂದಿಯಲ್ಲಿ ಮಾತನಾಡುವುದೆಂದು ಸಂಕಲ್ಪಿಸಿದೆ. ಕಬರಸ್ತಾನದಲ್ಲಿ ಮಲಗಿರುವ ಬಹಾದೂರ್ ಷಾನ ಮಕ್ಕಳ ದನಿ ಕೇಳುತ್ತಿದೆ:

"ನೀನಾವ ಭಾಷೆಯಲ್ಲಿ ನಿನ್ನ ಇಂಗಿತವನ್ನು ನಿವೇದಿಸುತ್ತೀಯೆ? ನೀನಿಲ್ಲಿರುವುದು ನಮ್ಮ ಶತಮಾನಗಳ ನೆಚ್ಚಿನ ಆಶೋತ್ತರಗಳ್ನು ಪೂರೈಸಲಿಕ್ಕೆ. ಕೃಪೆಮಾಡಿ, ನಮಗೂ ಅರ್ಥವಾಗುವಂತಹ ರೀತಿಯಲ್ಲಿ ಮಾತನಾಡಿ."

ಜಯಶ್ರೀ ಪೃಥ್ವಿರಾಜ್, ಸಂಯುಕ್ತ ಅವರು ಈ ಸದನದಲ್ಲಿ ನಾವಾಡುವ ಮಾತುಗಳನ್ನು ಕೇಳಲು ಉತ್ಸುಕರಾಗಿದ್ದಾರೆ. ನಾವು ಯಾವ ಉದ್ದೇಶಕ್ಕಾಗಿ ಇಲ್ಲಿರುವೆವು ಎಂಬುದನ್ನು ತಿಳಿಯಬಯಸುತ್ತಾರೆ. ನಿಮ್ಮ ಆಶೋತ್ತರಗಳು, ಆದರ್ಶಗಳೇನೆಂಬುದು ತಿಳಿಯಲು ಇಚ್ಛಿಸುತ್ತಾರೆ. ನಾವಿಲ್ಲಿರುವುದು ಇಂಗ್ಲೆಂಡ್‌ನ ಜನರಿಗಾಗಿ ಭಾಷಣ ಮಾಡಲಿಕ್ಕಲ್ಲ; ಭಾರತದ ಜನತೆಗಾಗಿ. ದೆಹಲಿಯಲ್ಲಿ ಎಲ್ಲೆಡೆ ಅಸಂಖ್ಯ ರಾಜ ಪರಂಪರೆಗಳು, ಸಾಮ್ರಾಜ್ಯಗಳು ಹಳೆಯ ಗೋರಿಗಳ ತಳದಲ್ಲಿವೆ. ಈ ಗೋರಿಗಳು, ಅಲ್ಲಿರುವ ಬೂದಿ, ನಾವಿಲ್ಲಿರುವುದೇಕೆಂದು ಕೇಳುತ್ತವೆ. ಎಲ್ಲ ಅಡೆತಡೆಗಳನ್ನು ಬದಿಗೊತ್ತಿ ಮುನ್ನಡೆಯಲು ನಾವಿಲ್ಲಿ ಸೇರಿದ್ದೇವೆಂಬುದನ್ನು ಅವಕ್ಕೆ ತಿಳಿಸಲು ಬಯಸುತ್ತೇನೆ. ಯಾವ ಆದರ್ಶಗಳ ಪರವಾಗಿ ಬಹಾದೂರ್ ಷಾನ ಮಕ್ಕಳು ಆತ್ಮಾರ್ಪಣ ಮಾಡಿದರೋ ಅವುಗಳನ್ನು ಹೊತ್ತು ಬಂದಿದ್ದೇವೆ. ೧೮೫೭ರಲ್ಲಿ ಸಿಪಾಯಿ ದಂಗೆ ನಡೆಯಿತು. ಅದಕ್ಕಾಗಿ ಭಾರತದ ಅಸಂಖ್ಯ ವೃದ್ಧರು, ಯುವಕರು, ಮತ್ತು ಮಹಿಳೆಯರು ಶತಮಾನಗಳಿಂದ ತ್ಯಾಗ ಮಾಡುತ್ತ ಬಂದಿದ್ದಾರೆ. ನಮ್ಮ ನಿರ್ಧಾರ ಶ್ರದ್ಧಾಪೂರ್ವಕವಾದುದು. ನಾವು ಅಚಲರು. ನಮ್ಮನ್ನು ಯಾವ ಶಕ್ತಿಯೂ ಧೃತಿಗೆಡಿಸುವುದಿಲ್ಲ. ಯಾವ ಬಲವೂ ನಮ್ಮನ್ನು ಬಗ್ಗಿಸದು. ನಮ್ಮ ಪೂರ್ವಜರು ತಮ್ಮ ಸಮಾಧಿಯಲ್ಲಿ ವಿರಮಿಸುತ್ತಿದ್ದಾರೆ. ಅವರನ್ನು ಉದ್ದೇಶಿಸಿ ಅವರ ಭಾಷೆಯಲ್ಲೆ ಭಾಷಣ ಮಾಡುವಂತೆ ಕರೆ ಕೊಡುತ್ತಿದ್ದಾರೆ. ಇದು ಅವರ ಬಯಕೆ, ಹಾಗಾಗಿ ನಿಮ್ಮನ್ನು ಉದ್ದೇಶಿಸಿ ನಾನು ಹಿಂದೀಯಲ್ಲೆ ಮಾತನಾಡಲು ಪ್ರಯತ್ನಿಸಿದ್ದೇನೆ.

ನಿಮ್ಮ ಮುಂದಿರುವ ನಿರ್ಣಯು ಎಲ್ಲ ದೃಷ್ಟಿಯಿಂದಲೂ ಅಂಗೀಕಾರಾರ್ಹವಾಗಿದೆ. ಡಾ॥ ಜಯಕರ್ ನಿರ್ಣಯವನ್ನು ಮುಂದೂಡುವ ಪ್ರಸ್ತಾವವೆತ್ತಿದ್ದರು. ಸಮನ್ವಯ ಸಾಧನೆಗೆ ಸಂಬಂಧಿಸಿದಂತೆ

ನಾವು ನಮ್ಮ ಒಪ್ಪಿಗೆ ಸೂಚಿಸಿ ಮುಂದೂಡಿದ್ದೆವು. ಡಾ। ಅಂಬೇಡ್ಕರ್ ಅವರೂ ಸಹ ಮುಂದೂಡುವಂತೆ ಸಲಹೆ ಮಾಡಿದ್ದರು. ಅವರ ಸಲಹೆಗೆ ಒಪ್ಪಿ ಮುಂದೂಡಿದೆವು. ಆದರೆ ತಡೆಯೊಡ್ಡುವ ನೀತಿಗೆ ಆತುಕೊಂಡು ಯಾರಾದರೂ ನಮ್ಮನ್ನು ತಡೆಯಲು ಬಯಸಿದರೆ ನಾವು ನಿಲ್ಲೆವು. ಒಮ್ಮೆ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾದದ್ದು ಕೆಲವರಿಗೆ ದಿಗ್ಭ್ರಮೆ ತಂದಿತಾದರೂ ಜಯ ಸುನಿಶ್ಚಿತ. ನಾವು ಮುನ್ನಡೆಯುತ್ತೇವೆ. ಸಮನ್ವಯಕ್ಕಾಗಿ ನಾವು ಕೈಗೊಂಡ ಕಾರ್ಯವನ್ನು ಬಿಡೆವು. ಆಸೆ ಆಕಾಂಕ್ಷೆಗಳು, ನಿರ್ಧಾರಗಳು ಏರುತ್ತಲಿವೆ; ಇಳಿಯುತ್ತಲೂ ಇವೆ. ಆದರೆ ಇದು ಅವು ಗಿರಿಯಂತೆ ಅಚಲ. ಬ್ರಿಟಿಷ್ ಸಾಮ್ರಾಜ್ಯಶಾಹಿ ದಬ್ಬಾಳಿಕೆಯಿಂದ ಅವನ್ನೂ ದಮನಗೊಳಿಸಲಾಗದು.

ಈ ನಿರ್ಣಯಕ್ಕೆ ಮಿ। ಶ್ಯಾಮಾ ಸೂಚಿಸಿದ ತಿದ್ದುಪಡಿ, ಕಾಶ್ಮೀರಿ ಪಶ್ಮೀನಾ ಶಾಲುವಿನ ಮೇಲಣ ಹೆಸಿಆನ್ ಎಂಬ ಕಿತ್ತಾ ನಾರಿನ ತೇಪೆ ಇದ್ದಂತೆ. ಅವರ ತಿದ್ದುಪಡಿ ಮತ್ತು ಡಾ। ಜಯಕರ್ ಅವರ ತಿದ್ದುಪಡಿಯನ್ನು ತಿರಸ್ಕರಿಸಿ ಈ ನಿರ್ಣಯವನ್ನು ಅಂಗೀಕರಿಸಬೇಕು.

*ಹಿಂದೂಸ್ತಾನಿ ಭಾಷಣದ ಹಿಂದೀ ಭಾಷಾಂತರ.

**ಸನ್ಮಾನ್ಯ ಅಧ್ಯಕ್ಷರು :** ಸಭೆಯನ್ನು ನಾಳೆ ಬೆಳಿಗ್ಗೆ ೧೧.೦೦ ಘಂಟೆಯ ವರೆಗೆ ಮುಂದೂಡಲಾಗಿದೆ. ನಂತರ ಸಭೆಯನ್ನು ೨೧.೧.೧೯೪೭ರ ಮಂಗಳವಾರ ಬೆಳಿಗ್ಗೆ ೧೧ ಘಂಟೆ ವರೆಗೆ ಮುಂದೂಡಲಾಯಿತು.